ಗುರುವಾರ, ಜನವರಿ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 16 | ಪುಟ 14


www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿಶ್ವ ಪರಂಪರೆ ಪಟ್ಟಿಯಲ್ಲಿರುವ ಕಡಲ ತಾಣದ ಜೀವಿಗಳು ಅಳಿವಿನಂಚಿನಲ್ಲಿ!



ಸಂಖ್ಯೆ-ಸುದ್ದಿ
ಅಂತರ್ಜಲ: ಬೆಂಗಳೂರು ಸ್ಥಿತಿ 'ಭಾರಿ ಅಪಾಯಕಾರಿ'

ಕಾಂಗ್ರೆಸ್ ನೂತನ ಕಚೇರಿ ಉದ್ಘಾಟನೆ 11

ಕೇಜ್ರಿವಾಲ್ ಜೀವಕ್ಕೆ ಅಪಾಯ: ಗುಪ್ತಚರ ವರದಿ 11

ಸೆನ್ಸೆಕ್ಸ್	ನಿಫ್ಟಿ	₹/$
76,724	23,213	86.40

₹4,482 ಕೋಟಿ ಕಬ್ಬು ಬಿಲ್ ಬಾಕಿ 08

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕೈ–ಕಮಲ: ಗದ್ದುಗೆ ಗುದ್ದಾಟ

ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್‌ನ ರಾಜ್ಯ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಎರಡೂ ಪಕ್ಷಗಳಲ್ಲಿ ಗುದ್ದಾಟ ಜೋರಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಳಿಸಲು ಸಚಿವ ಸತೀಶ ಜಾರಕಿಹೊಳಿ, ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪತನಕ್ಕೆ ಅವರದ್ದೇ ಪಕ್ಷದ ಶಾಸಕ ರಮೇಶ ಜಾರಕಿಹೊಳಿ ಮುಂದಾಳತ್ವ ವಹಿಸಿದ್ದಾರೆ. ಏತನ್ಮಧ್ಯೆ, ತಮ್ಮ ವಿರುದ್ಧ ಸಮರಕ್ಕೆ ಇಳಿದಿರುವ ಸಚಿವರ ವಿರುದ್ಧ ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರಿತ್ತಿದ್ದಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಕೆಪಿಸಿಸಿ ಅಧ್ಯಕ್ಷ ಗದ್ದುಗೆಯಿಂದ ಡಿ.ಕೆ. ಶಿವಕುಮಾರ್ ಅವರನ್ನು ಬದಲಿಸಬೇಕೆಂದು ಒತ್ತಾಯಿಸಿದ್ದಾಗಿ ಬುಧವಾರ ಬೆಳಿಗ್ಗೆ ಹೇಳಿದ್ದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ರಾತ್ರಿ ಹೊತ್ತಿಗೆ ತಮ್ಮ ಮಾತು ಬದಲಾಯಿಸಿದ್ದಾರೆ.

ಮುಖ್ಯಮಂತ್ರಿ ಹುದ್ದೆ ವಿಚಾರವೂ ಸೇರಿದಂತೆ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ಯಾರೂ ಮಾತನಾಡಬಾರದೆಂದು ಕೆಪಿಸಿಸಿ ಸರ್ವಸದಸ್ಯರ ಸಭೆ ಮತ್ತು ಶಾಸಕಾಂಗದ ಪಕ್ಷದ ಸಭೆಯಲ್ಲಿ ಸುರ್ಜೇವಾಲಾ ಕಟ್ಟಪ್ಪಣೆ ಹೊರಡಿಸಿದ್ದರು. ಆ ಬೆನ್ನಲ್ಲೆ ಸತೀಶ ನೀಡಿದ ಬಹಿರಂಗ ಹೇಳಿಕೆ 'ಕೈ' ಪಾಳಯದಲ್ಲಿ ಸಂಚಲನ ಮೂಡಿಸಿತ್ತು.

ನವದೆಹಲಿಯಲ್ಲಿದ್ದ ಶಿವಕುಮಾರ್ ಅವರು, ಖರ್ಗೆ ಅವರನ್ನು ಮಂಗಳವಾರ ರಾತ್ರಿಯೇ ಭೇಟಿ ಮಾಡಿದ್ದರು.

8ನೇ ಪುಟ ನೋಡಿ

ಈ ಬಗ್ಗೆ (ಅಧ್ಯಕ್ಷರ ಬದಲಾವಣೆ) ನೀವು ಸತೀಶ್ ಅವರನ್ನೇ ಕೇಳಬೇಕು. ಆದರೆ, ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಮಾಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ. ಅವರ ತೀರ್ಮಾನವೇ ಅಂತಿಮ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸತೀಶ ಜಾರಕಿಹೊಳಿ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರನ್ನಾಗಿ ಮಾಡುವಾಗ ಶಾಸಕರ ಅಭಿಪ್ರಾಯವನ್ನೇನೂ ಕೇಳಿರಲಿಲ್ಲ ತಾನೇ? ಈಗಲೂ ಹಾಗೆಯೇ. ಹೈಕಮಾಂಡ್ ಒಬ್ಬರನ್ನು ತೀರ್ಮಾನಿಸುತ್ತದೆ. ಅದನ್ನು ನಾವು ಒಪ್ಪಬೇಕಷ್ಟೆ

ತನ್ವೀರ್ ಸೇಠ್, ಕೆಪಿಸಿಸಿ ಕಾರ್ಯಾಧ್ಯಕ್ಷ

ಅಂತರ ಕಾಯ್ದುಕೊಂಡರು

ನವದೆಹಲಿ ಭೇಟಿಯ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತರ ಕಾಯ್ದುಕೊಂಡರು.

ಶಿವಕುಮಾರ್ ಅವರು ಸಿದ್ದರಾಮಯ್ಯ ಜತೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಬೇಕಿತ್ತು. ಆದರೆ, ಅವರು ನವದೆಹಲಿಯಲ್ಲೇ ಉಳಿದರು.

'ಬಿವೈವಿ ಇಳಿಸಲು ಹೋರಾಟ'

ಬೆಳಗಾವಿ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಸಂಪೂರ್ಣ ವಿಫಲರಾಗಿದ್ದಾರೆ. ಅವರನ್ನು ಕಿತ್ತೊಗೆಯಲು ನಾವು ಹೋರಾಟ ಮಾಡಿದ್ದು ನಿಜ. ಯಡಿಯೂರಪ್ಪ ಬಗ್ಗೆ ಗೌರವ ಇದೆ. ಆದರೆ, ಅವರು ಪುತ್ರನ ಅಧಿಕಾರ ಉಳಿಸಲು ಪಕ್ಷದ ವರ್ಚಸ್ಸನ್ನು ಬಳಸಿಕೊಳ್ಳಬಾರದು' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

'ಬಿಜೆಪಿ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿರುವುದು ತಮ್ಮ ಪುತ್ರನ ಅಧಿಕಾರ ಉಳಿಸಿಕೊಳ್ಳಲಿಕ್ಕಾ ಅಥವಾ ಪಕ್ಷ ಸಂಘಟನೆಗಾ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದರು.

'ರಮೇಶ ಓಡಾಡುವುದೇ ಕಷ್ಟ'

ಕೊಪ್ಪಳ: 'ರಮೇಶ ಜಾರಕಿಹೊಳಿ ಅವರು ಬಾಯಿ ಹಿಡಿತದಲ್ಲಿಟ್ಟುಕೊಳ್ಳಬೇಕು. ಹೀಗೆ ಬಹಿರಂಗವಾಗಿ ಮಾತನಾಡುವುದರಿಂದ ಯಡಿಯೂರಪ್ಪ ಅವರ ಲಕ್ಷಾಂತರ ಅಭಿಮಾನಿಗಳಿಗೆ ನೋವಾಗುತ್ತದೆ. ಕಾರ್ಯಕರ್ತರು ಅಸಮಾಧಾನಗೊಂಡರೆ ರಮೇಶ ಓಡಾಡುವುದೇ ಕಷ್ಟವಾಗುತ್ತದೆ' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಸಿದರು.

8ನೇ ಪುಟ ನೋಡಿ



ಅಜ್ಜನ ತೇರು ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರೆಯಲ್ಲಿ ಬುಧವಾರ ನಡೆದ ಮಹಾರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ ಚಿತ್ರ: ಭರತ್ ಕಂದಕೂರ

ಜಾತಿಗಣತಿ ವರದಿ: ಸರ್ಕಾರ ಯೂಟರ್ನ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಗಳ ಒತ್ತಡಕ್ಕೆ ಮಣಿದಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ- 2015' (ಜಾತಿಗಣತಿ) ವರದಿಯನ್ನು ಮಂಡಿಸುವ ನಿರ್ಧಾರದಿಂದ ಹಿಂದೆ ಸರಿದಿದೆ.

ರಾಜ್ಯ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಮೀಕ್ಷೆಯ ವರದಿಯನ್ನು ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯ ಮುಂದಿಟ್ಟು, ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿತ್ತು. ಸಂಪುಟ ಸಭೆಯ ಕಾರ್ಯಸೂಚಿಯಲ್ಲಿ, 'ಆಯೋಗವು ಮುಚ್ಚಿದ ಲಕೋಟೆಯಲ್ಲಿ ನೀಡಿರುವ ವರದಿಯನ್ನು ತೆರೆಯುವ ಕುರಿತು' ಎಂದು ಉಲ್ಲೇಖಿಸಲಾಗಿತ್ತು.

ಜಾತಿಗಣತಿ ಮಾಡುತ್ತೇವೆ ಎಂದು ಪ್ರಣಾಳಿಕೆಯಲ್ಲೇ ಹೇಳಿದ್ದೇವೆ. ರಾಹುಲ್ ಗಾಂಧಿ ಸಹ ಅದನ್ನೇ ಹೇಳಿದ್ದಾರೆ. ಮುಖ್ಯಮಂತ್ರಿಯವರು ಯಾವ ಸಂದರ್ಭದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಕಾದು ನೋಡೋಣ


ಬಿ.ಕೆ. ಹರಿಪ್ರಸಾದ್, ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ

8ನೇ ಪುಟ ನೋಡಿ

ಸ್ಮೃತಿ ಬಳಗದ ದಾಖಲೆಗಳ ಸಾಲು

ರಾಜ್‌ಕೋಟ್ (ಪಿಟಿಐ): ಭಾರತ ಮಹಿಳೆಯರ ಕ್ರಿಕೆಟ್ ತಂಡವು ಐರ್ಲೆಂಡ್ ಎದುರು ಏಕದಿನ ಕ್ರಿಕೆಟ್ ಸರಣಿ ಜಯಿಸಿತು. ಬುಧವಾರ ನಡೆದ ಕೊನೆಯ ಪಂದ್ಯದಲ್ಲಿ ತಂಡವು ದಾಖಲೆಗಳನ್ನು ಬರೆಯಿತು. ಪ್ರತೀಕಾ ರಾವಲ್ (154; 129ಎ, 4X20, 6X1) ಮತ್ತು ವೇಗದ ಶತಕ ದಾಖಲಿಸಿದ ಸ್ಮೃತಿ ಮಂಧಾನ (135; 80ಎ, 4X12, 6X7) ದ್ವಿಶತಕದ ಜೊತೆಯಾಟವಾಡಿದರು.

ಭಾರತ ತಂಡಕ್ಕೆ 3–0ಯಿಂದ ಐರ್ಲೆಂಡ್ ಎದುರು ಸರಣಿ ಜಯ



5,435 ಭಾರತ ಮಹಿಳೆಯರ ತಂಡವು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿದ ಸರ್ವಾಧಿಕ ಮೊತ್ತ ಇದು. ಒಟ್ಟಾರೆ 4ನೇ ದೊಡ್ಡ ಸ್ಕೋರ್. ನ್ಯೂಜಿಲೆಂಡ್ (4ಕ್ಕೆ491) ಮೊದಲ ಸ್ಥಾನದಲ್ಲಿದೆ.

70 ಸ್ಮೃತಿ ಮಂಧಾನ ಶರವೇಗದ ಶತಕ ಪೂರೈಸಲು ಆಡಿದ ಎಸೆತಗಳು. ಅವರು ಹರ್ಮನ್‌ಪ್ರೀತ್ ಕೌರ್ (87ಎಸೆತ) ದಾಖಲೆ ಮೀರಿದರು.

ಸ್ಮೃತಿ ಮಂಧಾನ –ಪಿಟಿಐ ಚಿತ್ರ

233 ಸ್ಮೃತಿ ಮಂಧಾನ ಮತ್ತು ಪ್ರತೀಕಾ ರಾವಲ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಪೇರಿಸಿದ ರನ್‌ಗಳು. ಭಾರತದ ಆಟಗಾತಿಯರ ಮೂರನೇ ಅತಿ ದೊಡ್ಡ ಪಾಲುದಾರಿಕೆ ಆಟ ಇದು. ದೀಪ್ತಿ ಶರ್ಮಾ–ಪೂನಂ ರಾವತ್ (320ರನ್) ಮತ್ತು ರೇಷ್ಮಾ ಗಾಂಧಿ–ಮಿಥಾಲಿ ರಾಜ್ (258 ರನ್) ಮೊದಲೆರಡು ಸ್ಥಾನಗಳಲ್ಲಿದ್ದಾರೆ.



ಪ್ರತೀಕಾ ರಾವಲ್ –ಬಿಸಿಸಿಐ ಎಕ್ಸ್ ಚಿತ್ರ

304 ಭಾರತ ತಂಡವು ಬುಧವಾರ ಐರ್ಲೆಂಡ್ ಎದುರು ಏಕದಿನ ಪಂದ್ಯದಲ್ಲಿ ಜಯಿಸಿದ ಅಂತರ. ಇದು ಗರಿಷ್ಠ ಅಂತರದ ಗೆಲುವಾಗಿದೆ.

ದಾರಿತಪ್ಪಿಸುವ ಜಾಹೀರಾತು 'ಸುಪ್ರೀಂ' ಎಚ್ಚರಿಕೆ

ನವದೆಹಲಿ(ಪಿಟಿಐ): ದಾರಿತಪ್ಪಿಸುವ ಜಾಹೀರಾತುಗಳ ಕುರಿತು ಕ್ರಮ ಕೈಗೊಳ್ಳದಿದ್ದರೆ ಮತ್ತು ಈ ವಿಚಾರವಾಗಿ ಕೋರ್ಟ್ ನಿರ್ದೇಶನ ಪಾಲನೆ ಮಾಡದಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುವುದು ಎಂದು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಬುಧವಾರ ಎಚ್ಚರಿಸಿದೆ.

ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ಗೆ ನೆರವಾಗಲು ನೇಮಕವಾಗಿರುವ (ಅಮಿಕಸ್ ಕ್ಯೂರಿ) ಹಿರಿಯ ವಕೀಲ ಶಾದಾನ್ ಫರಾಸತ್ ಅವರು ಟಿಪ್ಪಣಿಯೊಂದನ್ನು ಪೀಠಕ್ಕೆ ಸಲ್ಲಿಸಿದ್ದಾರೆ. ಹಲವು ರಾಜ್ಯಗಳು, ಈ ಬಗ್ಗೆ ಕ್ರಮ ಕೈಗೊಳ್ಳದ ಬಗ್ಗೆ ಟಿಪ್ಪಣಿಯಲ್ಲಿ ಅವರು ಉಲ್ಲೇಖಿಸಿದ್ದನ್ನು ಗಂಭೀರವಾಗಿ ಪರಿಗಣಿಸಿದ ಪೀಠ, ಈ ಎಚ್ಚರಿಕೆ ನೀಡಿದೆ.

ಕರ್ನಾಟಕ ಸೇರಿ ಇತರೆ ರಾಜ್ಯಗಳು ಸಲ್ಲಿಸಿರುವ ಅನುಪಾಲನಾ ವರದಿಗಳ ಬಗ್ಗೆ ಫೆಬ್ರುವರಿ 24ರಂದು ನಿರ್ಣಯಿಸಲಾಗುವುದು ಎಂದು ಪೀಠ ಹೇಳಿದೆ.

ಭಾಗವತ್, ರಾಹುಲ್ ಹೇಳಿಕೆ; ವಿವಾದದ ಕಿಡಿ

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ 'ನಿಜವಾದ ಸ್ವಾತಂತ್ರ್ಯ' ಹೇಳಿಕೆಯು ವಿವಾದದ ಕಿಡಿ ಹೊತ್ತಿಸಿದೆ. ಭಾಗವತ್ ಹೇಳಿಕೆಗೆ ಪ್ರತಿಕ್ರಿಯಿಸುವಾಗ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆಡಿರುವ 'ಸರ್ಕಾರಿ ವ್ಯವಸ್ಥೆ ವಿರುದ್ಧದ ಹೋರಾಟ'ದ ಮಾತು ಕೂಡಾ ವಿವಾದ ಸೃಷ್ಟಿಸಿದ್ದು, ಕಾಂಗ್ರೆಸ್–ಬಿಜೆಪಿ ನಡುವೆ ತೀವ್ರ ವಾಕ್ಸಮರಕ್ಕೆ ಕಾರಣವಾಗಿದೆ.

ಭಾಗವತ್ ಹೇಳಿದ್ದು ಏನು?



ಮೋಹನ್ ಭಾಗವತ್

ಅಯೋಧ್ಯೆಯಲ್ಲಿ ರಾಮಮಂದಿರದ ಉದ್ಘಾಟನೆಯ ದಿನವನ್ನು 'ಪ್ರತಿಷ್ಠಾ ದ್ವಾದಶಿ'ಯಾಗಿ ಆಚರಿಸಬೇಕು. ಏಕೆಂದರೆ ಹಲವಾರು ಶತಮಾನಗಳಿಂದ ಶತ್ರುಗಳ ದಾಳಿ ಎದುರಿಸಿದ ಭಾರತಕ್ಕೆ ಬಾಲರಾಮನ ಪ್ರತಿಷ್ಠಾಪನೆಯ ದಿನ 'ನಿಜವಾದ ಸಾತಂತ್ರ್ಯ' ಲಭಿಸಿತು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಇಂದೋರ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರಿಗೆ 'ರಾಷ್ಟ್ರೀಯ ದೇವಿ ಅಹಿಲ್ಯಾ ಪ್ರಶಸ್ತಿ' ಪ್ರದಾನ ಮಾಡಿ ಅವರು ಈ ಮಾತುಗಳನ್ನಾಡಿದ್ದಾರೆ.



ಇಂತಹ ಹೇಳಿಕೆ ನೀಡುವುದನ್ನು ಮುಂದುವರಿಸಿದರೆ ಭಾಗವತ್ ಅವರಿಗೆ ದೇಶದಲ್ಲಿ ಅತ್ತಿತ್ತ ಓಡಾಡುವುದೂ ಕಷ್ಟವಾಗಲಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಒಂದು ವೇಳೆ ಭಾಗವತ್ ಬೇರೆ ಯಾವುದೇ ದೇಶದಲ್ಲಿರುತ್ತಿದ್ದರೆ, ಇಷ್ಟು ಹೊತ್ತಿಗೆ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗುತ್ತಿತ್ತು

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯಾದ ದಿನ ಭಾರತಕ್ಕೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿರುವುದು ವಿವಾದದ ಕಿಡಿ ಹೊತ್ತಿಸಿದೆ. ಕಾಂಗ್ರೆಸ್ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರು ಭಾಗವತ್ ಹೇಳಿಕೆಯನ್ನು ತೀಕ್ಷ್ಣ ಮಾತುಗಳಿಂದ ಖಂಡಿಸಿದ್ದಾರೆ.

'ಭಾಗವತ್ ದೇಶದ್ರೋಹ ಎಸಗಿದ್ದಾರೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಇಲ್ಲಿನ ಕೋಟ್ಲಾ ರಸ್ತೆಯಲ್ಲಿ ಬುಧವಾರ ಕಾಂಗ್ರೆಸ್‌ನ ನೂತನ ಕೇಂದ್ರ ಕಚೇರಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ರಾಹುಲ್, 'ಮೋಹನ್ ಭಾಗವತ್ ಅವರು ಸ್ವಾತಂತ್ರ್ಯ ಚಳವಳಿ ಮತ್ತು ಸಂವಿಧಾನದ ಬಗ್ಗೆ ಈ ರೀತಿಯ ಅಭಿಪ್ರಾಯವನ್ನು ದೇಶಕ್ಕೆ ತಿಳಿಸುವ ದಾರ್ಷ್ಟ್ಯ ತೋರಿದ್ದಾರೆ. ವಾಸ್ತವವಾಗಿ, ಅವರ ಹೇಳಿಕೆ ದೇಶದ್ರೋಹದ ಕೃತ್ಯಕ್ಕೆ ಸಮನಾಗಿದೆ. ಏಕೆಂದರೆ, ಅವರು ಸಂವಿಧಾನವನ್ನು ಅಸಿಂಧು ಎಂದು ಹೇಳುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

11ನೇ ಪುಟ ನೋಡಿ

'ಬಿಜೆಪಿ, ಆರ್‌ಎಸ್‌ಎಸ್, ಸರ್ಕಾರಿ ವ್ಯವಸ್ಥೆ ವಿರುದ್ಧ ನಮ್ಮ ಹೋರಾಟ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಪಕ್ಷವು 'ಬಿಜೆಪಿ, ಆರ್‌ಎಸ್‌ಎಸ್ ಮತ್ತು ಇಡೀ ಸರ್ಕಾರಿ ವ್ಯವಸ್ಥೆಯ ವಿರುದ್ಧ ಹೋರಾಡುತ್ತಿದೆ' ಎಂದು ಬುಧವಾರ ಹೇಳಿಕೆ ನೀಡಿದ್ದು ವಾಕ್ಸಮರಕ್ಕೆ ಕಾರಣವಾಗಿದೆ.

'ರಾಹುಲ್ ಮಾಡುವ ಪ್ರತಿಯೊಂದು ಕೆಲಸ ಮತ್ತು ಆಡುವ ಮಾತು ದೇಶ ಹಾಗೂ ಸಮಾಜದಲ್ಲಿ ಒಡಕು ಉಂಟುಮಾಡುವ ಉದ್ದೇಶವನ್ನು ಹೊಂದಿರುತ್ತದೆ' ಎಂದು ಬಿಜೆಪಿ ತಿರುಗೇಟು ನೀಡಿದೆ.

11ನೇ ಪುಟ ನೋಡಿ



ರಾಹುಲ್ ಹೇಳಿಕೆ ಕಾಂಗ್ರೆಸ್‌ನ 'ಕರಾಳ ಸತ್ಯ'ವನ್ನು ಬಿಚ್ಚಿಟ್ಟಿದೆ. ದೇಶದ ಜನರು ಅವರ ಕೆಟ್ಟ ಸಿದ್ಧಾಂತವನ್ನು ತಿರಸ್ಕರಿಸುವರು

ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ



ಸರ್ಕಾರಿ ವ್ಯವಸ್ಥೆ ವಿರುದ್ಧ ಹೋರಾಡುತ್ತಿದ್ದೇವೆ ಎನ್ನುವ ನೀವು ಸಂವಿಧಾನದ ಪ್ರತಿ ಕೈಯಲ್ಲಿ ಹಿಡಿದಿರುವುದು ಏಕೆ?

ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ಕಳ್ಳತನ ಪ್ರಕರಣ: 18 ಆರೋಪಿಗಳ ಬಂಧನ, ವಿವಿಧ ಠಾಣೆಗಳ ಪೊಲೀಸರ ಕಾರ್ಯಾಚರಣೆ

₹1 ಕೋಟಿ ಮೌಲ್ಯದ ವಿವಿಧ ವಾಹನಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ಕಳ್ಳರ ವಿರುದ್ಧ ವಿವಿಧ ಠಾಣೆಗಳ ಪೊಲೀಸರು ಕಾರ್ಯಾಚರಣೆ ನಡೆಸಿ, ₹1 ಕೋಟಿ ಮೌಲ್ಯದ ವಿವಿಧ ಮಾದರಿಯ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

'ನಗರದ ಹಲವು ಬಡಾವಣೆಗಳಲ್ಲಿ ನಡೆದ ವಾಹನ ಕಳ್ಳತನ ಪ್ರಕರಣಗಳಲ್ಲಿ 18 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 115 ದ್ವಿಚಕ್ರ ವಾಹನ, ನಾಲ್ಕು ಆಟೊ, ಒಂದು ಕಾರನ್ನು ಜಪ್ತಿ ಮಾಡಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

'ಬಂಧಿತರ ಪೈಕಿ 10 ಮಂದಿ ಹಿಂದೆಯೂ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿ ಜೈಲಿಗೆ ಹೋಗಿದ್ದರು. ಜಾಮೀನಿನ ಮೇಲೆ ಬಿಡುಗಡೆ ಆಗಿದ್ದರು. ಮತ್ತೆ ಅದೇ ಕೃತ್ಯಕ್ಕೆ ಇಳಿದಿದ್ದರು. ಅವರನ್ನು ಪತ್ತೆಹಚ್ಚಿ ಬಂಧಿಸಲಾಗಿದೆ. ರೂಢಿಗತ ಆರೋಪಿಗಳಿಗೆ ಜಾಮೀನು ನೀಡಬಾರದೆಂದು ವಕೀಲರ ಮೂಲಕ ನ್ಯಾಯಾಲಯದಲ್ಲಿ ಮನವಿ



ರಾಜಗೋಪಾಲನಗರ ಠಾಣೆಯ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿಕೊಂಡ ದ್ವಿಚಕ್ರ ವಾಹನಗಳು

ಮಾಡಲಾಗುವುದು' ಎಂದು ಹೇಳಿದರು.

ನಂದಿನಿಲೇಔಟ್ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ವಾಹನ ಕಳ್ಳತನ ಮಾಡುತ್ತಿದ್ದ ಕೆಂಗೇರಿಯ ಮಹಮ್ಮದ್ ನಿಜಾರ್(28) ಎಂಬಾತನನ್ನು ಬಂಧಿಸಿದ್ದಾರೆ.

ಆರೋಪಿ ಟೀ ವ್ಯಾಪಾರ ಮಾಡುತ್ತಿದ್ದ. ರಾತ್ರಿ ವೇಳೆ ರಸ್ತೆ ಬದಿ ಹಾಗೂ ಮನೆಯ ಎದುರು ನಿಲುಗಡೆ ಮಾಡಿದ್ದ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ. ಆರೋಪಿಯಿಂದ 12 ದ್ವಿಚಕ್ರ ವಾಹನ, ಒಂದು ಆಟೊ ವಶಕ್ಕೆ ಪಡೆಯಲಾಗಿದೆ. ಇವುಗಳ ಮೌಲ್ಯ ₹5.81 ಲಕ್ಷವೆಂದು ಅಂದಾಜಿಸಲಾಗಿದೆ

ಅಪರಾಧ ಸುದ್ದಿ

ಎಂದು ಪೊಲೀಸರು ತಿಳಿಸಿದರು.

'ಲಗ್ಗೆರೆಯ ವ್ಯಕ್ತಿಯೊಬ್ಬರು ಮನೆಯ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನದ ಕಳ್ಳತನ ನಡೆದಿತ್ತು. ವಾಹನ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ವಿಚಾರಣೆ ವೇಳೆ ವಿವಿಧ ಬಡಾವಣೆಗಳಲ್ಲಿ ನಿಲುಗಡೆ ಮಾಡಿದ್ದ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ಆರೋಪಿ ಒಪ್ಪಿ



ನಿಜಾರ್



ಆನಂದ್

ಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ರಾಜಗೋಪಾಲನಗರ ಠಾಣೆಯ ಪೊಲೀಸರು, ವೈಟ್‌ಫೀಲ್ಡ್ ಸಮೀಪದ ಇಮ್ಮಡಿಹಳ್ಳಿಯ ನಿವಾಸಿ ಆನಂದ್ (31) ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಯಿಂದ ₹26.50 ಲಕ್ಷ ಮೌಲ್ಯದ 30 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ.

ಠಾಣಾ ವ್ಯಾಪ್ತಿಯ ದೊಡ್ಡ ಬಿದರಕಲ್ಲು ಮಾರಣ್ಣ ಬಡಾವಣೆಯ ನಿವಾಸಿ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು. ಪೀಣ್ಯ ಕೈಗಾರಿಕಾ ಪ್ರದೇಶದ ಕೆಡಿಡಿಎಲ್ ಕಾರ್ಖಾನೆ ಎದುರು ದೂರುದಾರ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನವನ್ನು ಆರೋಪಿ ಕಳ್ಳತನ ಮಾಡಿದ್ದ. ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಹಲವು ಕಡೆ ದ್ವಿಚಕ್ರ ವಾಹನ ಕಳ್ಳತನ ಮಾಡಿರುವುದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು.

ಗಿರಿನಗರ ಠಾಣೆಯ ಪೊಲೀಸರು ಇಬ್ಬರನ್ನು ಬಂಧಿಸಿ ₹9 ಲಕ್ಷ ಮೌಲ್ಯದ 17 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ. ಬಾಣಸವಾಡಿ ಪೊಲೀಸರು, ನಾಲ್ವರನ್ನು ಬಂಧಿಸಿ ₹8.5 ಲಕ್ಷ ಮೌಲ್ಯದ 13 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ.

ಅಲ್ಲದೇ ಎಚ್‌ಎಎಲ್, ಮಡಿವಾಳ, ಬೆಳ್ಳಂದೂರು, ಜೆ.ಪಿ. ನಗರ, ತಲಘಟ್ಟಪುರ, ಬಸವನಗುಡಿ ಠಾಣೆ ಪೊಲೀಸರೂ ತಮ್ಮ ವ್ಯಾಪ್ತಿಯಲ್ಲಿ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಿದ್ದಾರೆ. ದ್ವಿಚಕ್ರ ವಾಹನ ಹಾಗೂ ಆಟೊ ಜಪ್ತಿ ಮಾಡಿದ್ದಾರೆ.

ಡ್ರಗ್ಸ್ ಪೂರೈಕೆ: 62 ಪ್ರಕರಣ, 85 ಮಂದಿ ಸೆರೆ



ಬೆಂಗಳೂರು: ನಗರದ ವಿವಿಧ ಠಾಣೆಗಳ ಪೊಲೀಸರು ಡಿಸೆಂಬರ್‌ನಲ್ಲಿ ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಪೂರೈಕೆ ಮಾಡುತ್ತಿದ್ದವರ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ ಅಡಿ(ಎನ್‌ಡಿಪಿಎಸ್) 62 ಪ್ರಕರಣ ದಾಖಲಿಸಿಕೊಂಡು, 85 ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾಹಿತಿ ನೀಡಿದರು.

'ಡ್ರಗ್ಸ್ ಪೂರೈಸುತ್ತಿದ್ದ ಮೂವರು ವಿದೇಶಿ ಪ್ರಜೆಗಳನ್ನೂ ಬಂಧಿಸಲಾಗಿದೆ. ಬಂಧಿತರಿಂದ 241 ಕೆ.ಜಿ. ಗಾಂಜಾ, 48 ಗ್ರಾಂ. ಕೊಕೇನ್, 130 ಗ್ರಾಂ. ಚರಸ್, 12 ಕೆ.ಜಿ ಎಂಡಿಎಂಎ, 350 ಎಕ್ಸ್‌ಟೆಸಿ ಮಾತ್ರೆಗಳು, 40 ಎಲ್‌ಎಸ್‌ಡಿ ಸ್ಟ್ರಿಪ್ಸ್ ಜಪ್ತಿ ಮಾಡಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

'ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದವರ ವಿರುದ್ಧವೂ ಕಳೆದ ತಿಂಗಳು ನಿರಂತರ ಕಾರ್ಯಾಚರಣೆ ನಡೆಸಲಾಗಿತ್ತು. ಮಟ್ಕಾ, ಬೆಟ್ಟಿಂಗ್, ಅಕ್ರಮ ಮದ್ಯ ಮಾರಾಟ, ಅಕ್ರಮವಾಗಿ ಶಸ್ತ್ರಾಸ್ತ್ರ ಪೂರೈಕೆ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರ ವಿರುದ್ಧ 325 ಪ್ರಕರಣ ದಾಖಲಿಸಿಕೊಂಡು, 411 ಮಂದಿಯನ್ನು ಬಂಧಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ 34 ಮಂದಿಯನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಅಪೆಕ್ಸ್ ಬ್ಯಾಂಕ್ ಸಿಇಒ ಕಚೇರಿ ಬೀಗ ತೆರವು: ಜಟಾಪಟಿ ಅಂತ್ಯ

ಬೆಂಗಳೂರು: ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಹುದ್ದೆಗೆ ಇಬ್ಬರು ಅಧಿಕಾರಿಗಳ ಮಧ್ಯೆ ನಡೆಯುತ್ತಿದ್ದ ಜಟಾಪಟಿ ಅಂತ್ಯಗೊಂಡಿದೆ. ಹಿಂದಿನ ಸಿಇಒ ಸಿ.ಎನ್. ದೇವರಾಜು ಅವರು ಮಂಗಳವಾರ ಕಚೇರಿಯ ಬಾಗಿಲಿನ ಬೀಗ ತೆರೆದು ಕೆಎಎಸ್ ಅಧಿಕಾರಿ ಎಂ.ಕೆ. ಜಗದೀಶ್ ಅವರಿಗೆ ಹಸ್ತಾಂತರ ಮಾಡಿದ್ದಾರೆ.

ಜಗದೀಶ್ ಅವರನ್ನು ಅಪೆಕ್ಸ್ ಬ್ಯಾಂಕ್ ಸಿಇಒ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಆದೇಶ ಹೊರಡಿಸಿತ್ತು. ನಿವೃತ್ತಿಯ ಬಳಿಕ ಸಿಇಒ ಹುದ್ದೆಗೆ ಮರು ನೇಮಕಗೊಂಡಿದ್ದ ದೇವರಾಜು, ಅಧಿಕಾರ ಹಸ್ತಾಂತರಿಸದೇ ಕಚೇರಿಯ ಬಾಗಿಲು ಬಂದ್ ಮಾಡಿ ತೆರಳಿದ್ದರು.

'ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಸೂಚನೆಯಂತೆ ದೇವರಾಜು ಅವರು ಕಚೇರಿಯ ಬಾಗಿಲು ತೆರೆದು ಜಗದೀಶ್ ಅವರಿಗೆ ಹಸ್ತಾಂತರ ಮಾಡಿದ್ದಾರೆ. ಇದರೊಂದಿಗೆ ಅಧಿಕಾರಿಗಳ ಮಧ್ಯೆ ಆರಂಭವಾಗಿದ್ದ ಜಟಾಪಟಿ ಅಂತ್ಯವಾಗಿದೆ' ಎಂದು ಅಪೆಕ್ಸ್ ಬ್ಯಾಂಕ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಬಾಲಕಿ ಮೇಲೆ ಅತ್ಯಾಚಾರ: ಸಮಗ್ರ ತನಿಖೆಗೆ ಸೂಚನೆ

ಕೆ.ಆರ್.ಪುರ: ಆರು ವರ್ಷದ ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣವನ್ನು ಸಮಗ್ರ ತನಿಖೆ ನಡೆಸುವಂತೆ ಶಾಸಕ ಬೈರತಿ ಬಸವರಾಜ ಅವರು ಪೊಲೀಸರಿಗೆ ಸೂಚಿಸಿದರು.

ಹೊಯ್ಸಳನಗರದಲ್ಲಿ ನಡೆದ ಅತ್ಯಾಚಾರ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕರು, ಬಾಲಕಿಯ ಪೋಷಕರಿಗೆ ಸಾಂತ್ವನ ಹೇಳಿ, ವೈಯಕ್ತಿಕವಾಗಿ ಧನ ಸಹಾಯ ಮಾಡಿದರು. ಸ್ಥಳದಲ್ಲಿದ್ದ ಪೊಲೀಸರಿಂದ ಘಟನೆ ಬಗ್ಗೆ ಮಾಹಿತಿ ಪಡೆದರು.

'ಅತ್ಯಾಚಾರ ಎಸಗಿದ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಅತ್ಯಾಚಾರ ಎಸಗುವ ಪ್ರತಿಯೊಬ್ಬನಿಗೆ ನಡುಕ ಹುಟ್ಟಿಸುವಂತ ಶಿಕ್ಷೆ ನೀಡಬೇಕು. ಬಾಲಕಿಯ ಪೋಷಕರಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡುವೆ' ಎಂದು ಬಸವರಾಜ ಹೇಳಿದರು.

'ಹೊರ ರಾಜ್ಯಗಳಿಂದ ಕೂಲಿ ಕೆಲಸಕ್ಕೆ ಬರುವವರ ಮೇಲೆ ಪೊಲೀಸರು ನಿಗಾ ಇಡಬೇಕು. ಇಂತಹ ಕೃತ್ಯಗಳು ನಡೆಯದಂತೆ ಪೊಲೀಸರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರೂ ಪೊಲೀಸರಿಗೆ ಮಾಹಿತಿ ನೀಡಬೇಕು' ಎಂದರು. ಬಿಜೆಪಿ ಉಪಾಧ್ಯಕ್ಷ ಗಣೇಶ್ ರೆಡ್ಡಿ ಉಪಸ್ಥಿತರಿದ್ದರು.

ಲ್ಯಾಬ್‌ಗಳಿಗೆ ಹಾನಿ: ತನಿಖೆಗೆ ಸೂಚನೆ

ಅಗ್ನಿ ಅವಘಡದ ಸ್ಥಳಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈವಿಕ ತಂತ್ರಜ್ಞಾನ ಕ್ಷೇತ್ರದ ನವೋದ್ಯಮಗಳಿಗೆ ನೆರವಾಗಲು ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ರಾಜ್ಯ ಸರ್ಕಾರ ಸ್ಥಾಪಿಸಿರುವ ಬೆಂಗಳೂರು ಬಯೋ ಇನ್ನೋವೇಶನ್ ಕೇಂದ್ರದಲ್ಲಿ (ಬಿಬಿಸಿ) ಸಂಭವಿಸಿದ ಅಗ್ನಿ ಅವಘಡದಲ್ಲಿ ಒಟ್ಟು 20 ಪ್ರಯೋಗಾಲಯಗಳಿಗೆ ಹಾನಿಯಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ಬೆಂಗಳೂರು ಬಯೋ ಇನ್ನೋವೇಶನ್ ಕೇಂದ್ರಕ್ಕೆ ಬುಧವಾರ ಬೆಳಿಗ್ಗೆ ಅವರು ಭೇಟಿ ನೀಡಿ ಪರಿಶೀಲಿಸಿದರು. ದುರ್ಘಟನೆಯ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಂತರ, ಮಾತನಾಡಿದ ಅವರು, 'ಘಟನೆಯ ಕುರಿತು ತನಿಖೆ ನಡೆಸಲು ಸೂಚಿಸಲಾಗಿದೆ. ತನಿಖಾಧಿಕಾರಿಗಳು ಸಮಗ್ರ ತನಿಖೆ ನಡೆಸಿ, ವರದಿ ಸಲ್ಲಿಸಲಿದ್ದಾರೆ. ಬಳಿಕ ಘಟನೆಗೆ ನಿಖರ ಕಾರಣ ಪತ್ತೆಯಾಗಲಿದೆ' ಎಂದು ತಿಳಿಸಿದರು.



ಗೃಹ ಸಚಿವ ಜಿ.ಪರಮೇಶ್ವರ ಅವರು ಅಗ್ನಿ ಅವಘಡದ ಕುರಿತು ಪೊಲೀಸರಿಂದ ಮಾಹಿತಿ ಪಡೆದರು

'ಮೆಥೆನಾಲ್ ಸೋರಿಕೆಯಿಂದ ಅಗ್ನಿ ಅವಘಡ ಸಂಭವಿಸಿದೆ ಎಂಬುದು ಕಂಡು ಬಂದಿದೆ. ಒಂದು ಕಂಪನಿ ಸಂಪೂರ್ಣವಾಗಿ ನಾಶವಾಗಿದ್ದು, ಇತರೆ ಇನ್ನೋವೇಶನ್ ಕೇಂದ್ರಗಳಿಗೂ ಹಾನಿಯಾಗಿದೆ. ಯಾವುದೇ ಪ್ರಾಣಹಾನಿ ಆಗಿಲ್ಲ' ಎಂದು ಹೇಳಿದರು.

'ಅಂದಾಜು ₹100 ಕೋಟಿ ಮೌಲ್ಯದ ನಷ್ಟ ಸಂಭವಿಸಿದೆ. ವಿವಿಧ ಬಗೆಯ 60 ಕಂಪನಿಗಳು ಈ ಕಟ್ಟಡದಲ್ಲಿದ್ದವು' ಎಂದು ಮಾಹಿತಿ ನೀಡಿದರು.

₹46 ಲಕ್ಷ ಮೌಲ್ಯದ ಚಿನ್ನಾಭರಣ, ನಗದು ಜಪ್ತಿ

'ಓಜಿಕುಪ್ಪಂ ಗ್ಯಾಂಗ್'ನ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ಗಮನ ಬೇರೆಡೆ ಸೆಳೆದು ನಗದು ಕಳ್ಳತನ ಮಾಡುತ್ತಿದ್ದ ತಮಿಳುನಾಡಿನ 'ಓಜಿಕುಪ್ಪಂ ಗ್ಯಾಂಗ್'ನ ಮೂವರು ಸದಸ್ಯರನ್ನು ಕೆ.ಆರ್. ಪುರ ಮತ್ತು ಕೊತ್ತನೂರು ಠಾಣೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.



ಗೋಪಿ



ಅಖಿಲ್

ಓಜಿಕುಪ್ಪಂನ ಗೋಪಿ(35), ಅಭಿಷೇಕ್(36) ಮತ್ತು ಅಖಿಲ್ (36) ಬಂಧಿತರು. ಆರೋಪಿಗಳಿಂದ ₹46 ಲಕ್ಷ ಮೌಲ್ಯದ ಚಿನ್ನಾಭರಣ, ನಗದು ಜಪ್ತಿ ಮಾಡಲಾಗಿದೆ.

ದೇವಸಂದ್ರದ ನಿವಾಸಿಯೊಬ್ಬರು ನವೆಂಬರ್ 29ರಂದು ಬ್ಯಾಂಕ್‌ನಿಂದ ₹4 ಲಕ್ಷ ಹಣವನ್ನು ಡ್ರಾ ಮಾಡಿ ಕಾರಿನಲ್ಲಿ ತೆರಳುತ್ತಿದ್ದರು. ಟಿ.ಸಿ.ಪಾಳ್ಯದ ಬಳಿ ಎರಡು ದ್ವಿಚಕ್ರ ವಾಹನಗಳಲ್ಲಿ ಕಾರು ಹಿಂಬಾಲಿಸಿಕೊಂಡು ಬಂದಿದ್ದ ಆರೋಪಿಗಳು, ಕಾರಿನ ಟೈರ್ ಪಂಕ್ಚರ್ ಆಗಿದೆ ಎಂದು ಹೇಳಿದ್ದರು. ಬಳಿಕ ಪಂಕ್ಚರ್ ಹಾಕಿಸಿ ಹಣ ಕೊಡಲು ಹೋದಾಗ ಕಾರಿನ ಡ್ಯಾಶ್‌ಬೋರ್ಡ್‌ನಲ್ಲಿದ್ದ ಹಣವನ್ನು ಕಳವು ಮಾಡಿಕೊಂಡು ಆರೋಪಿಗಳು ಪರಾರಿ ಆಗಿದ್ದರು. ಕಾರಿನ ಮಾಲೀಕರು ನೀಡಿದ ದೂರು ಆಧರಿಸಿ, ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮಹಿಳೆಯೊಬ್ಬರು ಬ್ಯಾಂಕ್‌ನ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣ ಮತ್ತು ಬೆಳ್ಳಿಯ ವಸ್ತುಗಳನ್ನು ತೆಗೆದುಕೊಂಡು ಬ್ಯಾಂಕ್ ಮುಂಭಾಗದಲ್ಲಿ ಹೋಗುವಾಗ ಬೈಕ್‌ನಲ್ಲಿ ಬಂದಿದ್ದ ಮೂವರು ಚಿನ್ನಾಭರಣ ಮತ್ತು ಬೆಳ್ಳಿಯ ವಸ್ತುಗಳಿದ್ದ ಬ್ಯಾಗ್ ಕಸಿದುಕೊಂಡು ಪರಾರಿ ಆಗಿದ್ದರು. ಆ ಆರೋಪಿಗಳು ಇವರೇ ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು ಪೊಲೀಸರು ತಿಳಿಸಿದರು.

ಕೊಲೆ ಪ್ರಕರಣ: ಪತ್ರಕರ್ತ ಸೇರಿ ಇಬ್ಬರ ಸೆರೆ

ನೆಲಮಂಗಲ: ತಾಲ್ಲೂಕಿನ ಹುರುಳಿಹಳ್ಳಿಯ ತೋಟದಲ್ಲಿ ನಡೆದಿದ್ದ ಕೊಲೆ ಪ್ರಕರಣದ ಸಂಬಂಧ ಇಬ್ಬರು ಆರೋಪಿಗಳನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತೋಟದ ಮಾಲೀಕ ಮಂಜುನಾಥ್ ಹಾಗೂ ಅವರ ಸಹೋದರ, ಡಿಜಿಟಲ್ ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದ ಪತ್ರಕರ್ತ ರವಿಕುಮಾರ್ ಬಂಧಿತರು. ಜ.19ರಂದು ಹುರುಳಿಹಳ್ಳಿ ಗ್ರಾಮದ ಸಿದ್ದರಾಜು(45) ಅವರ ಕೊಲೆ ನಡೆದಿತ್ತು. ತನಿಖೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಮಂಜುನಾಥ್ ಅವರ ತೋಟದಲ್ಲಿ ಸಿದ್ದರಾಜು ಕೆಲಸ ಮಾಡಿಕೊಂಡಿದ್ದರು. ಮೇಲಿಂದ ಮೇಲೆ ಕೂಲಿ ಕೇಳುತ್ತಿದ್ದಾನೆ ಎಂದು ಕೋಪಗೊಂಡು ಮಂಜುನಾಥ್ ಹಾಗೂ ರವಿಕುಮಾರ್ ಅವರು ಸಿದ್ದರಾಜುಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

'ದೊಣ್ಣೆಯಿಂದ ಹೊಡೆದು ತೆಂಗಿನಕಾಯಿ ಕದಿಯಲು ಸಿದ್ದರಾಜು ಬಂದಿದ್ದರು ಎಂದು ಆರೋಪಿಗಳು ಬಿಂಬಿಸಿದ್ದರು. ದೊಣ್ಣೆಯಿಂದ ಹೊಡೆದ ನಂತರ ನಿತ್ರಾಣರಾಗಿದ್ದ ಸಿದ್ದರಾಜು ಅವರನ್ನು ಕರೆದುಕೊಂಡು ಹೋಗಲು ಅವರ ಪುತ್ರ ಚೇತನ್‌ಗೆ ಕರೆ ಮಾಡಿ ತಿಳಿಸಿದ್ದರು. ಸ್ಥಳಕ್ಕೆ ಬಂದ ಚೇತನ್, ತಂದೆಯನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

ಮಹಿಳೆ ಸೇರಿ ನಾಲ್ವರ ಬಂಧನ 31 ಕಳ್ಳತನ ಪ್ರಕರಣ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮಹಿಳೆ ಸೇರಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮನೆ ಹೊರಗಡೆಯ ಶೂ ರ್‍ಯಾಕ್ ಹಾಗೂ ಶೂನಲ್ಲಿ ಅಡಗಿಸಿ ಇಟ್ಟಿರುತ್ತಿದ್ದ ಕೀಲಿ ಬಳಸಿ ಕಳ್ಳತನ ಮಾಡುತ್ತಿದ್ದ ಮಹಿಳೆಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಣ್ಣೂರು ನಿವಾಸಿ ಜಯಂತಿ(35) ಬಂಧಿತೆ. ಆರೋಪಿಯಿಂದ ₹7.80 ಲಕ್ಷ ಮೌಲ್ಯದ 110 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಆರೋಪಿ ಬಂಧನದಿಂದ ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 31 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

'ಆರೋಪಿಗೆ ಮದುವೆಯಾಗಿದ್ದು, ನಾಲ್ವರು ಹೆಣ್ಣು ಮಕ್ಕಳು ಇದ್ದಾರೆ. ಮನೆ ಕೆಲಸಕ್ಕೆ ಹೋಗುವ ನೆಪದಲ್ಲಿ ಅಕ್ಕಪಕ್ಕದ ಮನೆಗಳಿಗೆ ಭೇಟಿನೀಡಿ ಶೂಗಳಲ್ಲಿ ಮತ್ತು ಶೂ ರ್‍ಯಾಕ್‌ಗಳಲ್ಲಿ ಕೀಲಿ ಇಟ್ಟಿರುವುದನ್ನು ಗಮನಿಸುತ್ತಿದ್ದಳು. ಬಳಿಕ ಅದೇ ಕೀಲಿ ಬಳಸಿ ಮನೆಯ ಒಳಹೊಕ್ಕು ಕಳ್ಳತನ ಮಾಡುತ್ತಿದ್ದಳು' ಎಂದು ಪೊಲೀಸರು ಹೇಳಿದರು.



ಜಯಂತಿ

'ಈ ಹಿಂದೆ ಭಾರತಿನಗರದಲ್ಲಿ ವಾಸವಾಗಿದ್ದ ಜಯಂತಿ, ಅಲ್ಲಿಯೂ ಮನೆ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದಳು. ಕೆಲವು ತಿಂಗಳ ಹಿಂದೆ ಹೆಣ್ಣೂರಿಗೆ ಕುಟುಂಬ ಸಮೇತ ಸ್ಥಳಾಂತರಗೊಂಡಿದ್ದಳು' ಎಂದು ಪೊಲೀಸರು ಹೇಳಿದರು.

ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಮತ್ತೊಂದು ಪ್ರಕರಣದಲ್ಲಿ ಮೂವರನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ₹ 20 ಲಕ್ಷ ಮೌಲ್ಯದ 260 ಗ್ರಾಂ. ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

ಚನ್ನಸಂದ್ರದಲ್ಲಿ ರೈಲು ನಿಲುಗಡೆಯಿಲ್ಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚನ್ನಸಂದ್ರ ರೈಲು ನಿಲ್ದಾಣದಲ್ಲಿ ಪ್ಲಾಟ್ ಫಾರ್ಮ್-1 ಮತ್ತು ಪಾದಚಾರಿ ಮೇಲ್ಸೇತುವೆ ರ್‍ಯಾಂಪ್ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಫೆಬ್ರುವರಿ 28ರವರೆಗೆ ರೈಲು ನಿಲುಗಡೆ ಇರುವುದಿಲ್ಲ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಈ ಕಾಮಗಾರಿಗಾಗಿ ಡಿಸೆಂಬರ್ 31ರವರೆಗೆ ರೈಲು ನಿಲುಗಡೆ ರದ್ದುಗೊಳಿಸಲಾಗಿತ್ತು. ಕಾಮಗಾರಿ ಪೂರ್ಣಗೊಳ್ಳದ ಕಾರಣ ಮತ್ತೆರಡು ತಿಂಗಳು ವಿಸ್ತರಣೆ ಮಾಡಲಾಗಿದೆ.

ಕೆಎಸ್‌ಆರ್ ಬೆಂಗಳೂರು-ಸತ್ಯ ಸಾಯಿ ಪ್ರಶಾಂತಿ ನಿಲಯಂ-ಕೆಎಸ್‌ಆರ್ ಬೆಂಗಳೂರು ಮೆಮು, ಕೆಎಸ್‌ಆರ್ ಬೆಂಗಳೂರು- ಧರ್ಮಾವರಂ- ಕೆಎಸ್‌ಆರ್ ಬೆಂಗಳೂರು ಮೆಮು, ಕೆಎಸ್‌ಆರ್ ಬೆಂಗಳೂರು- ಕೋಲಾರ- ಬೆಂಗಳೂರು ಕಂಟೋನ್ಮೆಂಟ್ ಮೆಮು ರೈಲುಗಳು ಇಲ್ಲಿ ನಿಲುಗಡೆ ಹೊಂದಿದ್ದವು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಜುನ್ ಜನ್ಯ ಸೇರಿ 10 ಮಂದಿಗೆ ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಗೀತ ರಚನೆಕಾರ ವಿ.ನಾಗೇಂದ್ರ ಪ್ರಸಾದ್ ಸೇರಿದಂತೆ ಚಿತ್ರರಂಗದ ಹತ್ತು ಗಣ್ಯರಿಗೆ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಲಭಿಸಿದೆ.

ಮೀನಾಕ್ಷಿ ಕೆ.ವಿ. ಜಯರಾಂ, ಕೆ.ಜೆ. ಕುಮಾರ್, ಅನುರಾಧಾ ಭಟ್, ಓಂಪ್ರಕಾಶ್ ರಾವ್, ರೇಖಾರಾವ್,-ಜಯಶಂಕರ್ ಆರ್ಯರ್, ಚಂದ್ರಜಿತ್ ಬೆಳ್ಳಿಯಪ್ಪ, ಉತ್ಸವ್ ಗೋನಾವಾರ ಅವರು ಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

'ಕನ್ನಡ ಚಿತ್ರರಂಗದ ಪ್ರಥಮ ಪಿಆರ್‌ಒ ದಿವಂಗತ ಡಿ.ವಿ.ಸುಧೀಂದ್ರ ಅವರು ತಮ್ಮ ರಾಘವೇಂದ್ರ



ಅರ್ಜುನ್ ಜನ್ಯ



ವಿ.ನಾಗೇಂದ್ರ ಪ್ರಸಾದ್

ಚಿತ್ರವಾಣಿ ಸಂಸ್ಥೆಗೆ 25 ವರ್ಷ ತುಂಬಿದ ಸಂದರ್ಭದಲ್ಲಿ ಚಿತ್ರರಂಗದ ನಿರ್ಮಾಪಕರಿಗೆ ಮತ್ತು ಹಿರಿಯ ಪತ್ರಕರ್ತರಿಗೆ ಪ್ರಶಸ್ತಿ ನೀಡುವ ಪರಿಪಾಟ ಆರಂಭಿಸಿದರು' ಎಂದು ರಾಘವೇಂದ್ರ ಚಿತ್ರವಾಣಿಯ ಸುಧೀಂದ್ರ ವೆಂಕಟೇಶ್ ತಿಳಿಸಿದ್ದಾರೆ.

ಸಂಸ್ಥೆಯ 49ನೇ ವಾರ್ಷಿಕೋತ್ಸವ ಹಾಗೂ 24ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭ ಜನವರಿ 26ರಂದು ಸಂಜೆ 5.30ಕ್ಕೆ ಜಿ.ಟಿ ಮಾಲ್‌ನಲ್ಲಿ ನಡೆಯಲಿದೆ.

ನಗರದಲ್ಲಿ ಇಂದು


ಉದ್ಯೋಮೋತ್ಸವ: ಅಧ್ಯಕ್ಷತೆ: ಅವಿರಾಮ್ ಶರ್ಮ, ಅತಿಥಿಗಳು: ಎನ್. ರವಿಶಂಕರ್, ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ ಪೈ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಎಸ್ ತಾಂತ್ರಿಕ ಮಹಾವಿದ್ಯಾಲಯ, ಬೆಳಿಗ್ಗೆ 9ರಿಂದ

ಚಕೋರ ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಉಪನ್ಯಾಸ: ಕಂನಾಡಿಗ ನಾರಾಯಣ, ಉಪಸ್ಥಿತಿ: ಕಾ.ವೆಂ. ಶ್ರೀನಿವಾಸಮೂರ್ತಿ, ಅಧ್ಯಕ್ಷತೆ: ರಂಗನಾಥ್ ಟಿ., ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಆಚಾರ್ಯ ಗುರುಕುಲ ಪಿ.ಯು. ಕಾಲೇಜು, ಒಂಬತ್ತನೇ ಅಡ್ಡರಸ್ತೆ, ಬಾಗಲಗುಂಟೆ, ಬೆಳಿಗ್ಗೆ 11

ಸಮುದಾಯ ಪ್ರಾಣಿಗಳ ಸಹಬಾಳ್ವೆ ಕುರಿತು ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ: ಆಯೋಜನೆ: ಬಿಬಿಎಂಪಿ, ಸ್ಥಳ: ಡಾ.ರಾಜ್‌ಕುಮಾರ್ ಗಾಜಿನಮನೆ, ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 11

ಬಿ.ಎಸ್. ಗೋಪಾಲರಾವ್ ಮತ್ತು ವೇದವತಿಬಾಯಿ ದತ್ತಿ ಗಮಕ ವಾಚನ ಮತ್ತು ವ್ಯಾಖ್ಯಾನ: 'ಷಡಕ್ಷರದೇವನ ಶಬರ ಶಂಕರ ವಿಳಾಸಂ' ಗಮಕ ವಾಚನ: ವಿಶಾಖಾ, ವ್ಯಾಖ್ಯಾನ: ಸುಕನ್ಯಾ ಹೆಗಡೆ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ. ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ಕನ್ನಡ ಸಾಹಿತ್ಯ ಸಂಸ್ಕೃತಿ ಪರಂಪರೆ' ಉಪನ್ಯಾಸ: ಪ್ರಸನ್ನ ನಂಜಾಪುರ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30



ಸ್ವಾಮಿ ವಿವೇಕಾನಂದರ ಜನ್ಮದಿನದ ಉದ್ಘಾಟನೆ: ಬಿ.ಎಂ. ಪಟೇಲ್ ಪಾಂಡು, ಅತಿಥಿ: ಶಶಿಕಲಾ, ಉಪನ್ಯಾಸ: ನೀಲಾವರ ಸುರೇಂದ್ರ ಅಡಿಗ, ಅಧ್ಯಕ್ಷತೆ: ಬಿ.ಪಿ. ಹರ್ಷ, ಆಯೋಜನೆ ಮತ್ತು ಸ್ಥಳ: ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪಟೇಲ್‌ಗುಳ್ಳಪ್ಪ ಸೇವಾ ಪ್ರತಿಷ್ಠಾನ, ಸ್ಥಳ: ಡಾ.ಬಿ.ಎಂ. ಪಟೇಲ್‌ಪಾಂಡು ಚೈತನ್ಯ ಮಂದಿರ ಶಾಲಾ-ಕಾಲೇಜಿನ ಆವರಣ, ಮೈಸೂರು ರಸ್ತೆ, ಬೆಳಿಗ್ಗೆ 10.30


ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಬಿಸಿ ಬೂದಿ ಅವಘಡ: ಅರೆಬರೆ ಬೆಂದು ಚಿಮಣಿಯಲ್ಲಿ ಕಟ್ಟಿಕೊಂಡಿದ್ದ ಕಸ

ಬಾಯ್ಲರ್‌ಗೆ ಹಸಿ ಕಸ ಸುರಿದಿದ್ದರು!

• ಓದೇಶ ಸಕಲೇಶಪುರ



ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ಸ್ಥಾವರದಲ್ಲಿ ಕಾರ್ಮಿಕರ ಮೇಲೆ ಬಿಸಿ ಬೂದಿ ಸಿಡಿದ ಸ್ಥಳದಲ್ಲಿ ಬಿದ್ದಿರುವ ಅರೆಬರೆ ಉರಿದ ಕಸ



ಕಟ್ಟಿಕೊಂಡಿದ್ದ ಅರೆಬರೆ ಕಸ ಮತ್ತು ಬೂದಿ ತೆರವುಗೊಳಿಸಲು ಕಾರ್ಮಿಕರು ತೆರೆದಿದ್ದ ಚಿಮಣಿಯ ಬಾಗಿಲು

ಬಿಡದಿ (ರಾಮನಗರ): ನಾಲ್ವರು ಕಾರ್ಮಿಕರ ಸಾವಿಗೆ ಕಾರಣವಾದ ಇಲ್ಲಿನ ಕೈಗಾರಿಕಾ ಪ್ರದೇಶದ ಬೈರಮಂಗಲ ರಸ್ತೆಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದಲ್ಲಿ ಒಣಕಸದ ಜೊತೆಗೆ, ಹಸಿಕಸವನ್ನೂ ಸುರಿದಿದ್ದು ಅವಘಡಕ್ಕೆ ಕಾರಣ. ಇದೇ ಕಾರಣಕ್ಕೆ ಸ್ಥಾವರದಲ್ಲಿ ಕಸ ಮಿಶ್ರಿತ ಬೂದಿ ಕಟ್ಟಿಕೊಂಡಿತ್ತು.

ಘಟನೆ ಕುರಿತು ತನಿಖೆ ನಡೆಸುತ್ತಿರುವ ಬಿಡದಿ ಠಾಣೆ ಪೊಲೀಸರು ಸೇರಿದಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ, ಬಾಯ್ಲರ್ ಹಾಗೂ ಕೈಗಾರಿಕಾ ಸುರಕ್ಷತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಈ ಅಂಶ ಗೊತ್ತಾಗಿದೆ.

ಬೆಂಗಳೂರಿನ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಜೊತೆಗೆ ರಾಜ್ಯದಲ್ಲೇ ಮೊದಲ ಬಾರಿಗೆ ತ್ಯಾಜ್ಯದಿಂದ ಇಂಧನ ಉತ್ಪಾದಿಸುವುದಕ್ಕಾಗಿ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಈ ಸ್ಥಾವರ ನಿರ್ಮಿಸಿವೆ. ಸುಮಾರು ₹310 ಕೋಟಿ ವೆಚ್ಚದ ಸ್ಥಾವರದಲ್ಲಿ ನಿತ್ಯ 600 ಟನ್ ಒಣತ್ಯಾಜ್ಯ ಬಳಸಿ 11.5 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ.

ಅರೆಬರೆ ಉರಿದಿದ್ದ ಕಸ: 'ಸ್ಥಾವರಕ್ಕೆ ನಿತ್ಯ ಅಗತ್ಯವಿರುವ 600 ಟನ್ ಒಣ ಕಸವನ್ನು ಬಿಬಿಎಂಪಿ ತನ್ನ ಲಾರಿಗಳಲ್ಲಿ ಕಳುಹಿಸುತ್ತಿದೆ. ಸುಲಭವಾಗಿ ಉರಿಯಬಲ್ಲ ಕಸ ಹೊರತುಪಡಿಸಿ, ಉರಿಯದ ಹಾಗೂ ಹಸಿ ಕಸವನ್ನು ಯಾವುದೇ ಕಾರಣಕ್ಕೂ ಬಳಸುವಂತಿಲ್ಲ. ಆದರೆ, ಇಸ್ಗೆಕ್ (ಐಎಸ್‌ಜಿಇಸಿ) ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿತ್ತು' ಎಂದು ವಿವಿಧ ಇಲಾಖೆಗಳ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಮೂಲದಲ್ಲೇ ಒಣಕಸ ಸರಿಯಾಗಿ ವಿಂಗಡಣೆಯಾಗದೆ ಸ್ಥಾವರಕ್ಕೆ ಬರುತ್ತಿತ್ತು. ಇಲ್ಲಿಗೆ ಬಂದ ಬಳಿಕ ಮತ್ತೊಮ್ಮೆ ಕಸವನ್ನು ಸಂಸ್ಕರಿಸಿ ಬಾಯ್ಲರ್‌ಗೆ ಕಳಿಸಬೇಕು. ಆದರೆ, ಅದ್ಯಾವುದನ್ನೂ ಮಾಡದೆ ಬಿಬಿಎಂಪಿಯಿಂದ ಬಂದ ಕಸವನ್ನು ಆಟೊ ಟಿಪ್ಪರ್‌ಗಳಲ್ಲಿ ತಂದು ಸುರಿದು, ನೇರವಾಗಿ ಬಾಯ್ಲರ್‌ಗೆ ಕಳಿಸಲಾಗುತ್ತಿತ್ತು. ಇದರಿಂದಾಗಿ, ಕೆಲ ಉರಿಯದ ವಸ್ತುಗಳು ಸೇರಿದಂತೆ ಹಸಿಕಸವು ಅರೆಬರೆ ಉರಿದಿತ್ತು. ಬೂದಿಯಾಗಿ ಬರುವ ಚಿಮಣಿಯಲ್ಲಿ ಅರೆಬರೆ ಬೆಂದ ಕಸ ಕಟ್ಟಿಕೊಂಡಿತ್ತು' ಎಂದು ಮೂಲಗಳು ಹೇಳಿವೆ.

ಇಷ್ಟಕ್ಕೂ ಸ್ಥಾವರ ಕಾರ್ಯಾಚರಣೆಗೆ ಅಗತ್ಯವಿರುವಷ್ಟು ಕಾರ್ಮಿಕರು, ಅದರಲ್ಲೂ ನುರಿತ ಕಾರ್ಮಿಕರು ಕೆಲಸ ಮಾಡುತ್ತಿರಲಿಲ್ಲ. ಕಡಿಮೆ ಕಾರ್ಮಿಕರನ್ನೇ ಬಳಸಿಕೊಂಡೇ ಪ್ರಾಯೋಗಿಕ ಕಾರ್ಯಾಚರಣೆ ಆರಂಭಿಸಲಾಗಿತ್ತು. ಹಾಗಾಗಿ, ನಿರ್ದಿಷ್ಟ ಕೆಲಸಕ್ಕೆ ನುರಿತ ಕಾರ್ಮಿಕರು ಸ್ಥಾವರದಲ್ಲಿ ಇರಲಿಲ್ಲ ಎನ್ನುತ್ತವೆ ಮೂಲಗಳು.

ಜ. 4ರಂದು ಸಂಭವಿಸಿದ್ದ ಅವಘಡದಲ್ಲಿ ಬಿಸಿ ಬೂದಿ ಮೈ ಮೇಲೆ ಸಿಡಿದು ಗಂಭೀರವಾಗಿ ಗಾಯಗೊಂಡಿದ್ದ ಐವರ ಕಾರ್ಮಿಕರ ಪೈಕಿ, ನಾಲ್ವರು ಮೃತಪಟ್ಟಿದ್ದಾರೆ. ಸದ್ಯ ಒಬ್ಬರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಐವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಬಿಡದಿ ಪೊಲೀಸರು, ಇಸ್ಗೆಕ್ ಕಂಪನಿಯ ವ್ಯವಸ್ಥಾಪಕನನ್ನು ಬಂಧಿಸಿದ್ದಾರೆ. ಉಳಿದ ನಾಲ್ವರು ತಲೆಮರೆಸಿಕೊಂಡಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ಕಂಪನಿ ಮುಖ್ಯಸ್ಥರು, ಕೆಪಿಸಿಎಲ್ ಸೇರಿದಂತೆ ಕೆಲ ಇಲಾಖೆಗಳ ಅಧಿಕಾರಿಗಳಿಗೆ ಪೊಲೀಸರು ನೋಟಿಸ್ ಕೊಟ್ಟಿದ್ದಾರೆ.

ಅಂಕಿ ಅಂಶ

₹310 ಕೋಟಿ
ಸ್ಥಾವರ ನಿರ್ಮಾಣದ ವೆಚ್ಚ

11.5 ಮೆಗಾವಾಟ್
ಸ್ಥಾವರದ ವಿದ್ಯುತ್ ಉತ್ಪಾದನೆ ಸಾಮರ್ಥ್ಯ

600 ಟನ್
ವಿದ್ಯುತ್ ಉತ್ಪಾದನೆಗೆ ಬೇಕಾದ ಒಣಕಸ

ಎಸ್‌ಒಪಿ ನಿರ್ಲಕ್ಷ್ಯದಡಿ ಪ್ರಕರಣ

ಸ್ಥಾವರದಲ್ಲಿ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ಪಾಲಿಸಿಲ್ಲ. ಅವಘಡಕ್ಕೆ ಇದೇ ಕಾರಣ. ಒಣಕಸವನ್ನು ಸ್ಥಾವರಕ್ಕೆ ಹಾಕುವುದರಿಂದ ಹಿಡಿದು ಅದು ಉರಿದು ಬೂದಿಯಾಗಿ ಕೆಳಕ್ಕೆ ಬೀಳುವವರೆಗೆ ವಿವಿಧ ಹಂತಗಳಲ್ಲಿ ನಿರ್ವಹಿಸಬೇಕಾದ ಕೆಲಸಗಳಿಗೆ ಅನುಸರಿಸಬೇಕಾದ ಎಸ್‌ಒಪಿಯನ್ನು ಸ್ಥಾವರದಲ್ಲಿ ಕಡೆಗಣಿಸಲಾಗಿದೆ.

ಸ್ಥಾವರಕ್ಕೆ ಅಗತ್ಯವಿರುವ ಉರಿಯಬಹುದಾದ ಒಣಕಸವನ್ನು ಮಾತ್ರ ಹಾಕಬೇಕು. ಆದರೆ, ಇಲ್ಲಿ ಹಸಿಕಸವೂ ಮಿಶ್ರಣವಾಗಿರುವುದು ಕಂಡುಬಂದಿದೆ. ಅಲ್ಲದೆ, ಉರಿದ ಕಸ ಬೂದಿಯಾಗಿ ಬೀಳುವ ಚಿಮಣಿಯಲ್ಲಿ ಕಟ್ಟಿಕೊಳ್ಳದಂತೆ ಮುನ್ನೆಚ್ಚರಿಕೆ ವಹಿಸಬೇಕು. ಒಂದು ವೇಳೆ ಕಟ್ಟಿಕೊಂಡರೆ, ಕಾರ್ಯಾಚರಣೆ ನಿಲ್ಲಿಸಿ ಅದನ್ನು ತೆರವುಗೊಳಿಸಬೇಕು. ಕಾರ್ಯಾಚರಣೆ ಹಂತದಲ್ಲೇ ತೆರವು ಮಾಡುವುದಾದರೆ ವೈಯಕ್ತಿಕ ಸುರಕ್ಷತಾ ಪರಿಕರ (ಪಿಪಿಇ) ಬಳಸಬೇಕು. ಆದರೆ, ಸ್ಥಾವರದಲ್ಲಿ ಇವೆರಡನ್ನು ಮಾಡಿಲ್ಲ. ಈ ಕುರಿತು ಬಿಎನ್‌ಎಸ್ ಸೆಕ್ಷನ್ 223ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದು, ಮೇಲಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಮೂಲಗಳು ತಿಳಿಸಿವೆ.

'ರಾಜಕೀಯ ಅಸ್ತಿತ್ವಕ್ಕೆ ಜಾತಿಗಣತಿಗೆ ವಿರೋಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ತಮ್ಮದೇ ದೊಡ್ಡ ಸಮುದಾಯ ಎಂದು ಬಿಂಬಿಸಿಕೊಂಡಿರುವ ಎರಡು ಸಮುದಾಯಗಳ ನಾಯಕರು ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಜಾತಿಗಣತಿಯನ್ನು ವಿರೋಧಿಸುತ್ತಿದ್ದಾರೆ' ಎಂದು ರಾಮಮನೋಹರ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್.ಶಿವಣ್ಣ ಆರೋಪಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಹಿಂದೆ ಮಂಡಲ್ ವರದಿ, ಹಾವನೂರು ವರದಿಗಳನ್ನು ವಿರೋಧಿಸಿದ್ದವರೇ ಈಗ ಕಾಂತರಾಜ ಆಯೋಗದ ವರದಿಯನ್ನು ನಿರಾಕರಿಸುತ್ತಿದ್ದಾರೆ. ಜಾತಿಗಣತಿಯ ದತ್ತಾಂಶಗಳು ಹೊರಬಂದರೆ ಎರಡು ಪ್ರಬಲ ಸಮುದಾಯಗಳ ಜನಸಂಖ್ಯೆ ಕಡಿಮೆ

ಇದೆ ಎಂಬುದು ಗೊತ್ತಾಗುತ್ತದೆ. ಇದರಿಂದ ರಾಜಕೀಯ ಸಮೀಕರಣ ಬದಲಾಗುತ್ತದೆ ಎಂಬುದೇ ನಿರಾಕರಣೆಯ ಹಿಂದಿರುವ ಉದ್ದೇಶ' ಎಂದರು.

'ಕಾಂತರಾಜ ವರದಿ ಹಳೆಯದಾಯಿತು ಎನ್ನುವವರು, ತಾವು ಅಧಿಕಾರದಲ್ಲಿ ಇದ್ದಾಗ ವರದಿಯನ್ನು ಏಕೆ ಸ್ವೀಕರಿಸಲಿಲ್ಲ? 2018ರಲ್ಲಿ ವರದಿ ಸಿದ್ಧವಾಗಿದ್ದರೂ, 2018ರಿಂದ 2023ರವರೆಗೆ ಮುಖ್ಯಮಂತ್ರಿ ಆಗಿದ್ದ ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ವರದಿ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ' ಎಂದರು.

'ಜಾತಿ ಸಮೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಲಾಗಿರುವ ಕಾಂತರಾಜ ವರದಿಯ ಸಾಧಕ–ಬಾಧಕಗಳನ್ನು ಪರಿಶೀಲಿಸಬೇಕು. ಅದರಲ್ಲಿನ ಕೊರತೆಗಳನ್ನು ಸರಿಪಡಿಸಿಕೊಂಡು, ಜಾರಿಗೆ ತರಬೇಕು. ಕೇಂದ್ರ ಸರ್ಕಾರವು ಸಿದ್ಧತೆ ಮಾಡಿಕೊಂಡಿರುವ ಜನಗಣತಿಯಲ್ಲೇ ಮತ್ತಷ್ಟು ವಿವರ ಕಲೆ ಹಾಕಿ, ಜಾತಿಗಣತಿಯನ್ನೂ ನಡೆಸಬೇಕು. ಈ ಸಂಬಂಧ ರಾಜ್ಯ ಸರ್ಕಾರವು ನಿರ್ಣಯ ಅಂಗೀಕರಿಸಿ, ಕೇಂದ್ರಕ್ಕೆ ಕಳುಹಿಸಬೇಕು. ಇದನ್ನು ಒತ್ತಾಯಿಸಿ ರಾಜ್ಯದಾದ್ಯಂತ ಜಾಥಾ ನಡೆಸುತ್ತೇವೆ' ಎಂದರು.

ಲೇಖಕ ಬಂಜಗೆರೆ ಜಯಪ್ರಕಾಶ್, 'ಹಳೆಯದಾಯಿತು ಎಂದು ಇಡೀ ವರದಿಯನ್ನೇ ನಿರಾಕರಿಸುವುದು ಸರಿಯಲ್ಲ. ಮತ್ತಷ್ಟು ದತ್ತಾಂಶಗಳನ್ನು ಕಲೆಹಾಕಿ ಸರಿದೂಗಿಸಬೇಕು. ಜತೆಗೆ ಕೇಂದ್ರ ಸರ್ಕಾರವೇ ಜಾತಿಗಣತಿ ನಡೆಸಿದರೆ, ಇನ್ನಷ್ಟು ಅನುಕೂಲವಾಗಲಿದೆ' ಎಂದರು.

'ಎಚ್‌ಡಿಕೆ ಸುಳ್ಳು ಹೇಳುವುದು ನಿಲ್ಲಿಸಲಿ'



ಬಿ.ಎಸ್.ಶಿವಣ್ಣ

'ಕೇಂದ್ರ ಸರ್ಕಾರವೇ ಜಾತಿಗಣತಿ ನಡೆಸಲು ತೀರ್ಮಾನಿಸಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಈಚೆಗೆ ಹೇಳಿದ್ದಾರೆ. ಈ ಬಗ್ಗೆ ಅವರು ಸುಳ್ಳು ಹೇಳಿ, ಜನರ ಹಾದಿ ತಪ್ಪಿಸುವುದನ್ನು ಬಿಡಬೇಕು' ಎಂದು ಬಿ.ಎಸ್.ಶಿವಣ್ಣ ಒತ್ತಾಯಿಸಿದರು.

'ಜಾತಿಗಣತಿ ನಡೆಸಲು ಕೇಂದ್ರ ಸರ್ಕಾರ ಯಾವಾಗ ತೀರ್ಮಾನಿಸಿತು? ಈ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರವಾಗಿದೆಯೇ ಅಥವಾ ಆದೇಶವನ್ನೇನಾದರೂ ಹೊರಡಿಸಿದೆಯೇ? ನಿರ್ಧಾರವು ದಾಖಲೆಗಳಲ್ಲಿ ಇದ್ದರೆ ಅದನ್ನು ಕುಮಾರಸ್ವಾಮಿ ಅವರು ಜನರ ಮುಂದೆ ಇಡಬೇಕು' ಎಂದು ಒತ್ತಾಯಿಸಿದರು.

'ಜಾತಿಗಣತಿ ವರದಿ ಮಂಡನೆಗೆ ಒತ್ತಾಯ ಹೆಚ್ಚುತ್ತಿರುವ ಸಂದರ್ಭದಲ್ಲೇ ಕುಮಾರಸ್ವಾಮಿ ಈ ರೀತಿ ಸುಳ್ಳು ಹೇಳಿದ್ದಾರೆ. ಇದೆಲ್ಲವನ್ನೂ ಬಿಟ್ಟು, ಅವರೊಬ್ಬ ಕೇಂದ್ರ ಸಚಿವರಂತೆ ಮಾತನಾಡಬೇಕು' ಎಂದರು.

ಬಿಒಬಿ 'ಫಿಜಿಟಲ್' ಶಾಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ (ಬಿಒಬಿ) ನಗರದ ಸೌತ್ ಎಂಡ್ ರಸ್ತೆಯಲ್ಲಿ 'ಫಿಜಿಟಲ್' ಶಾಖೆ ಆರಂಭಿಸಿದೆ.

ಈ ಶಾಖೆಯಲ್ಲಿ ಗ್ರಾಹಕರು ಪ್ಯಾನ್ ನವೀಕರಣ, ಇ–ಮೇಲ್ ಮೂಲಕ ಖಾತೆ ಹೇಳಿಕೆ ಸ್ವೀಕರಿಸುವುದು, ಟಿಡಿಎಸ್ ಪ್ರಮಾಣ ಪತ್ರ ಸ್ವೀಕಾರ, ನಾಮಿನಿ ನವೀಕರಣ ಇತ್ಯಾದಿ ಸೇವೆಯನ್ನು ಪಡೆಯಬಹುದು ಎಂದು ಬ್ಯಾಂಕ್ ತಿಳಿಸಿದೆ.

ಗೃಹ ಸಾಲದ ಬಗ್ಗೆ ವಿಚಾರಣೆ, ಉಳಿತಾಯ ಖಾತೆ, ಅವಧಿ ಠೇವಣಿ, ಕಾರು ಸಾಲ ಮುಂತಾದ ಎಲ್ಲಾ ವೈಯಕ್ತಿಕಗೊಳಿಸಿದ ಮತ್ತು ಹಣಕಾಸುಯೇತರ ಸೇವೆಗಳ ಸಹಾಯಕ್ಕಾಗಿ ಗ್ರಾಹಕರು ವಿಡಿಯೊ ಕರೆ ಮೂಲಕ ಬ್ಯಾಂಕ್‌ನ ಸಂಪರ್ಕ ಕೇಂದ್ರವನ್ನು ನೇರವಾಗಿ ಸಂಪರ್ಕಿಸಬಹುದು ಎಂದು ತಿಳಿಸಿದೆ.

ಉದ್ಘಾಟನೆ: ಶಾಖೆ ಉದ್ಘಾಟಿಸಿದ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಸಂಜಯ್ ವಿ. ಮುದಲಿಯಾರ್, 'ಗ್ರಾಹಕರ ಅಗತ್ಯತೆ ಪೂರೈಸಲು ಬ್ಯಾಂಕ್ ಬೆಂಗಳೂರಿನಲ್ಲಿ ಮೊದಲ ಫಿಜಿಟಲ್ ಶಾಖೆ ಆರಂಭಿಸಿದೆ. ಇದರೊಂದಿಗೆ ಫಿಜಿಟಲ್ ಶಾಖೆಗಳ ಸಂಖ್ಯೆ 4ಕ್ಕೆ ಏರಿದೆ. ಇದು ಗ್ರಾಹಕರಿಗೆ ಭೌತಿಕ ಮತ್ತು ಡಿಜಿಟಲ್ ಸೇವೆಗಳನ್ನು ಒದಗಿಸುತ್ತದೆ' ಎಂದು ಹೇಳಿದರು.

ಈ ವೇಳೆ ಬ್ಯಾಂಕ್‌ನ ಉಪ ಪ್ರಧಾನ ವ್ಯವಸ್ಥಾಪಕ ಮಾನಸ್ ಮಿಶ್ರಾ ಮತ್ತು ಪ್ರಾದೇಶಿಕ ಮುಖ್ಯಸ್ಥ ಪ್ರಶಾಂತ್ ಅವಾದ್ ಹಾಜರಿದ್ದರು.



ಬೆಂಗಳೂರಿನ ಸೌತ್ ಎಂಡ್ ರಸ್ತೆಯಲ್ಲಿ ಇತ್ತೀಚೆಗೆ ಬ್ಯಾಂಕ್ ಆಫ್ ಬರೋಡಾದ ಕಾರ್ಯ ನಿರ್ವಾಹಕ ನಿರ್ದೇಶಕ ಸಂಜಯ್ ವಿ. ಮುದಲಿಯಾರ್ ಅವರು, 'ಫಿಜಿಟಲ್' ಶಾಖೆಯನ್ನು ಉದ್ಘಾಟಿಸಿದರು. ಬ್ಯಾಂಕ್‌ನ ಉಪ ಪ್ರಧಾನ ವ್ಯವಸ್ಥಾಪಕ ಮಾನಸ್ ಮಿಶ್ರಾ ಮತ್ತು ಪ್ರಾದೇಶಿಕ ಮುಖ್ಯಸ್ಥ ಪ್ರಶಾಂತ್ ಅವಾದ್ ಹಾಜರಿದ್ದರು

ಅರಕೆರೆ ಗ್ರಾ.ಪಂ ಉಪಾಧ್ಯಕ್ಷರ ಆಯ್ಕೆ

ಯಲಹಂಕ: ಅರಕೆರೆ ಗ್ರಾ.ಪಂ ಉಪಾಧ್ಯಕ್ಷರಾಗಿ ಎಸ್.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆ.ಎಂ. ಅರಸೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಬುಧವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 22 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಮಂಜುನಾಥ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಏಷ್ಯಾದಲ್ಲಿಯೇ ಅತಿ ಎತ್ತರ • 480 ಟನ್ ತೂಕ

ಏಕಶಿಲಾ ಹನುಮ ಮೂರ್ತಿ ಪ್ರತಿಷ್ಠಾಪನೆ



ಕಾಚರಕನಹಳ್ಳಿನ ಶ್ರೀ ಕೋದಂಡರಾಮ ದೇವಸ್ಥಾನದ ಆವರಣದಲ್ಲಿ ಪ್ರತಿಷ್ಠಾಪನೆಗೊಂಡಿರುವ 'ಶ್ರೀರಾಮಲಕ್ಷ್ಮಣರ ಸಮೇತ ಬೃಹದ್ರೂಪಿ ಹನುಮ' ಏಕಶಿಲಾ ಮೂರ್ತಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಏಷ್ಯಾ ಖಂಡದಲ್ಲಿಯೇ ಅತಿ ಎತ್ತರದ ಮೂರ್ತಿ ಎಂಬ ಹೆಗ್ಗಳಿಕೆ ಹೊಂದಿರುವ, 72 ಅಡಿ ಎತ್ತರದ 'ಶ್ರೀರಾಮಲಕ್ಷ್ಮಣರ ಸಮೇತ ಬೃಹದ್ರೂಪಿ ಹನುಮ' ಏಕಶಿಲಾ ಮೂರ್ತಿಯನ್ನು ಕಾಚರಕನಹಳ್ಳಿನ ಶ್ರೀ ಕೋದಂಡರಾಮ ದೇವಸ್ಥಾನದ ಆವರಣದಲ್ಲಿ ಬುಧವಾರ ಪ್ರತಿಷ್ಠಾಪನೆ ಮಾಡಲಾಯಿತು.

ಮೂರ್ತಿಯು 480 ಟನ್ ತೂಕ ಹೊಂದಿದ್ದು, ಅತ್ಯಾಧುನಿಕ ತಂತ್ರಜ್ಞಾನದ ಯಂತ್ರಗಳ ಮೂಲಕ ಪ್ರತಿಷ್ಠಾಪನೆಗೊಂಡಿದೆ. ಎಲ್ಲ ರೀತಿಯ ಸ್ಥಾಪನಾ ಕಾರ್ಯಗಳು ಪೂರ್ಣಗೊಳ್ಳಲು ಇನ್ನೂ ಎರಡು ತಿಂಗಳು ಬೇಕಾಗುತ್ತದೆ ಎಂದು ಶ್ರೀರಾಮ ಚೈತನ್ಯ ವರ್ಧಿನಿ ಸಭಾ ಟ್ರಸ್ಟ್ ಮತ್ತು ಬೃಹದ್ರೂಪಿ ಹನುಮಾನ್ ಚಾರಿಟಬಲ್ ಟ್ರಸ್ಟ್ ತಿಳಿಸಿದೆ.

'ಹೊಸಕೋಟೆ ಸಮೀಪದ ಪ್ರದೇಶದಿಂದ ಸಾವಿರ ಟನ್ ತೂಕದ ಬಂಡೆಯನ್ನು ತರಲು ಮೂವತ್ತು ದಿನಗಳು ಬೇಕಾದವು. ಖ್ಯಾತ ಶಿಲ್ಪಿಗಳು ಮೂರು ವರ್ಷ ಕೆತ್ತನೆ ಕಾರ್ಯ ನಡೆಸಿದ್ದಾರೆ. ಏಕಶಿಲಾ ಮೂರ್ತಿಯಾಗಿರುವುದರಿಂದ ತಂತ್ರಜ್ಞಾನ ಹಾಗೂ ಯಂತ್ರಗಳ ಸಹಾಯದಿಂದ ಸ್ಥಾಪನಾ ಕಾರ್ಯ ಮುಗಿಯಬೇಕಿದೆ. ಅದು ಪೂರ್ಣಗೊಂಡ ಮೇಲೆ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು' ಎಂದು ಟ್ರಸ್ಟ್ ಅಧ್ಯಕ್ಷ ಎಂ.ಎನ್.ರೆಡ್ಡಿ ಹೇಳಿದರು.

ವಿಶ್ವಕ್ಷೇನ ಗಣಪತಿ ಪೂಜೆ, ಪುಣ್ಯಾಹ, ಸ್ವಸ್ತಿವಾಚನ, ನವಗ್ರಹ ಪೂಜೆ, ರಾಮತಾರಕ ಹೋಮ, ಮಹಾಲಕ್ಷ್ಮಿ ಶ್ರೀಸೂಕ್ತ ಹೋಮ, ಮಹಾಪೂರ್ಣಾಹುತಿ, ಸರ್ವತೋಭದ್ರ ಮಂಡಲ ಆರಾಧನೆ, ಪವಮಾನ ಹೋಮದ ನಂತರ ಪ್ರತಿಷ್ಠಾಪನೆಗೆ ಚಾಲನೆ ನೀಡಲಾಯಿತು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಾನಿಧ್ಯದಲ್ಲಿ ಪ್ರತಿಷ್ಠಾಪನೆ ನಡೆಯಿತು.

ಸಚಿವರಾದ ಕೆ.ಜೆ.ಜಾರ್ಜ್, ಬೈರತಿ ಸುರೇಶ್, ಸಂಸದ ಪಿ.ಸಿ.ಮೋಹನ್, ಶಾಸಕರಾದ ಬೈರತಿ ಬಸವರಾಜ, ಧೀರಜ್ ಮುನಿರಾಜು, ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ, ನಗರ ಘಟಕದ ಜೆಡಿಎಸ್ ಅಧ್ಯಕ್ಷ ರಮೇಶ್ ಗೌಡ, ಸಪ್ತಗಿರಿಗೌಡ, ಬಿಬಿಎಂಪಿ ಮಾಜಿ ಸದಸ್ಯ ಪದ್ಮನಾಭರೆಡ್ಡಿ ಪಾಲ್ಗೊಂಡಿದ್ದರು.

ಮೊದಲು ಅರ್ಧದಿನ ಮುಂದೂಡಿದ್ದ ಪರೀಕ್ಷೆ; ಮತ್ತೆ ನಿರ್ಧಾರ ಬದಲಾಯಿಸಿದ ವಿ.ವಿ

ಇಂದಿನ ಬಿ.ಕಾಂ ಪರೀಕ್ಷೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಜ.16ರಂದು (ಗುರುವಾರ) ಬೆಳಿಗ್ಗೆ ನಡೆಯಬೇಕಿದ್ದ ಪ್ರಥಮ ವರ್ಷದ ಬಿ.ಕಾಂ ಪರೀಕ್ಷೆಯನ್ನು ಮೊದಲು ಅರ್ಧದಿನ ಮುಂದೂಡಿ, ಆಮೇಲೆ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹಾಕಲಾಗಿದೆ.

ಎಸ್‌ಇಪಿ ಮೊದಲ ಸೆಮಿಸ್ಟರ್‌ನ ಸ್ನಾತಕ ಪದವಿ ಕೋರ್ಸ್‌ಗಳ ಪರೀಕ್ಷೆಗಳನ್ನು ಗುರುವಾರ ಬೆಳಿಗ್ಗೆ 9.30ಕ್ಕೆ ನಡೆಸಲು ನಗರ ವಿಶ್ವವಿದ್ಯಾಲಯ ಅವಧಿ ನಿಗದಿಪಡಿಸಿತ್ತು. ಈ ಪರೀಕ್ಷೆಗಳನ್ನು ಅನಿವಾರ್ಯ ಕಾರಣಗಳಿಂದ ಮಧ್ಯಾಹ್ನ 2ಕ್ಕೆ ಮುಂದೂಡಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಬುಧವಾರ ಅಧಿಸೂಚನೆ ಹೊರಡಿಸಿದ್ದರು.

ಮಧ್ಯಾಹ್ನದ ಬಳಿಕ ಸಿಎ ಪರೀಕ್ಷೆ ಕೂಡ ಇದ್ದಿದ್ದರಿಂದ ಎರಡೂ ಪರೀಕ್ಷೆಗಳಿಗೆ ಸಿದ್ಧರಾಗಿದ್ದ ವಿದ್ಯಾರ್ಥಿಗಳು ಈ ಅಧಿಸೂಚನೆಯಿಂದ ಕಂಗಾಲಾಗಿದ್ದರು. ಒಂದೇ ಸಮಯದಲ್ಲಿ ಎರಡು ಪರೀಕ್ಷೆಗಳು ನಡೆದರೆ ಯಾವ ಪರೀಕ್ಷೆಗೆ ಹಾಜರಾಗುವುದು? ಯಾವುದನ್ನು ಬಿಡುವುದು ಎಂದು ಗೊಂದಲಕ್ಕೆ ಸಿಲುಕಿದ್ದರು.



ವಿಶ್ವವಿದ್ಯಾಲಯಗಳ ಪರೀಕ್ಷೆ ಇರುವ ದಿನಗಳಲ್ಲಿ ಯಾವುದೇ ಪರೀಕ್ಷೆ ನಡೆಸುವಂತಿಲ್ಲ ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ. ಸಿಎ ಪರೀಕ್ಷೆ ಇದೇ ದಿನ ಇರುವ ಬಗ್ಗೆ ಮಾಹಿತಿ ಇಲ್ಲ. ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಯಾವ ದಿನಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ ಎಂದು ಅವರಿಗೆ ದಿನಾಂಕಗಳನ್ನು ಹಿಂದೆಯೇ ನೀಡಲಾಗಿತ್ತು' ಎಂದು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಆನಂದಕುಮಾರ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದರು.

ಬಳಿಕ ಬುಧವಾರ ರಾತ್ರಿ ಕುಲಸಚಿವರು ಇನ್ನೊಂದು ಅಧಿಸೂಚನೆ ಹೊರಡಿಸಿದ್ದಾರೆ. ಜ.16ರಂದು ಮಧ್ಯಾಹ್ನ 2ಕ್ಕೆ ನಿಗದಿ ಮಾಡಲಾಗಿರುವ ಎಸ್‌ಇಪಿ 1ನೇ ಸೆಮಿಸ್ಟರ್‌ನ ಎಲ್ಲ ಸ್ನಾತಕ ಪದವಿ ಕೋರ್ಸ್‌ಗಳ ಪರೀಕ್ಷೆಯನ್ನು ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ಸದ್ಯದಲ್ಲಿಯೇ ತಿಳಿಸಲಾಗುವುದು ಎಂದು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತವಾಗಿದ್ದ ವಿರೋಧ

'ವಿಶ್ವವಿದ್ಯಾಲಯವು ಯಾವುದೇ ಕಾರಣಗಳನ್ನು ನೀಡದೇ ಒಂದು ದಿನ ಮೊದಲು ಪರೀಕ್ಷೆಯ ಸಮಯ ಬದಲಾಯಿಸಿದ್ದರಿಂದ ಬೆಳಿಗ್ಗೆ ಬಿ.ಕಾಂ ಪರೀಕ್ಷೆಗೆ, ಮಧ್ಯಾಹ್ನ ಸಿಎ ಪರೀಕ್ಷೆಗೆ ಹಾಜರಾಗಲು ತಯಾರಾಗಿದ್ದ ವಿದ್ಯಾರ್ಥಿನಿಗೆ ಸಮಸ್ಯೆಯಾಗಿರುವುದನ್ನು ವಿದ್ಯಾರ್ಥಿನಿಯ ತಂದೆ ಹೇಳಿಕೊಂಡರು. ಈ ಬಗ್ಗೆ ನಾನು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಅವರ ಆಪ್ತ ಕಾರ್ಯದರ್ಶಿ ಜೊತೆಗೆ ಮಾತನಾಡಿ ಕುಲಸಚಿವರೊಂದಿಗೆ ಸಂಪರ್ಕ ಸಾಧಿಸಿದರೂ ಪರೀಕ್ಷೆ ಮುಂದೂಡಿದ್ದನ್ನು ಸಮರ್ಥಿಸಿಕೊಂಡಿದ್ದಾರೆ. ಇದರಿಂದ ವಿದ್ಯಾರ್ಥಿನಿಗೆ ಅನ್ಯಾಯವಾಗಿದೆ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದರು.

'ಯಾವುದೇ ವಿಶ್ವವಿದ್ಯಾಲಯವು ಕೇವಲ 24 ಗಂಟೆ ಮುಂಚೆ ಪರೀಕ್ಷೆ ಮುಂದೂಡುವುದು ವಿಶ್ವವಿದ್ಯಾಲಯದ ವಿಶ್ವಾಸಾರ್ಹತೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಈ ವಿದ್ಯಾರ್ಥಿನಿ ಸೇರಿದಂತೆ ಎರಡೂ ಪರೀಕ್ಷೆ ಬರೆಯಲು ತಯಾರಾಗಿದ್ದ ಎಲ್ಲರಿಗೂ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದ್ದರು.

ಇದೀಗ ವಿಶ್ವವಿದ್ಯಾಲಯವು ಪರೀಕ್ಷೆ ಮುಂದೂಡಿರುವುದರಿಂದ ವಿದ್ಯಾರ್ಥಿಗಳಿಗೆ ಎರಡೂ ಪರೀಕ್ಷೆಗಳನ್ನು ಬರೆಯಲು ಅವಕಾಶ ಸಿಕ್ಕಿದಂತಾಗಿದೆ.



ಕರ್ಣ ಅವರ ತಾಯಿ ಸವರಿ ಅಮ್ಮಾಳ್, ಸಹೋದರಿ ಅಮುದಾ ಅವರಿಗೆ ಸಚಿವ ಜಮೀರ್ ಅಹಮದ್ ಖಾನ್ ಹಸುಗಳನ್ನು ಹಸ್ತಾಂತರಿಸಿದರು

ಕರ್ಣ ಕುಟುಂಬಕ್ಕೆ ಮೂರು ಹಸು ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ವಿನಾಯಕ ನಗರದಲ್ಲಿ ನಡೆದ ಹಸುವಿನ ಕೆಚ್ಚಲು ಕೊಯ್ದ ಪ್ರಕರಣದಲ್ಲಿ ಹಸುವಿನ ಮಾಲೀಕ ಕರ್ಣ ಅವರ ತಾಯಿ ಮತ್ತು ಸಹೋದರಿಗೆ ಸ್ಥಳೀಯ ಶಾಸಕರೂ ಆಗಿರುವ ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಮೂರು ಹಸು ಕೊಡಿಸಿದ್ದಾರೆ.

ಕರ್ಣ ಅವರು ಹಸು ಪಡೆಯಲು ಮೊದಲು ಒಪ್ಪಿಕೊಂಡಿದ್ದರೂ ನಂತರ ನಿರಾಕರಿಸಿದ್ದರು. ಅವರ ತಾಯಿ ಸವರಿ ಅಮ್ಮಾಳ್, ಸಹೋದರಿ ಅಮುದಾ ಹಸು ಪಡೆಯಲು ಒಪ್ಪಿದ್ದರಿಂದ ಅವರಿಗೆ ಜಮೀರ್ ಅಹಮದ್ ಖಾನ್ ಸುಮಾರು ₹3 ಲಕ್ಷ ವೆಚ್ಚದಲ್ಲಿ ಮೂರು ಹಸು ಖರೀದಿಸಿ, ಬುಧವಾರ ಹಸ್ತಾಂತರಿಸಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಲ್ತಾಫ್ ಖಾನ್, ಮುಖಂಡರಾದ ಅತುಶ್, ಗೌಸಿ, ವಿನಾಯಕ್, ಪ್ರಸಾದ್ ಉಪಸ್ಥಿತರಿದ್ದರು.

ಅಮುದಾ ಮಾತನಾಡಿ, 'ಹಸು ಪಡೆಯಲು ನಿರಾಕರಿಸಿದ ಸಹೋದರನ ಪರವಾಗಿ ನಾನು ಕ್ಷಮೆ ಕೋರುತ್ತೇನೆ. ಜಮೀರಣ್ಣ ಅವರು ಒಳ್ಳೆ ಮನಸ್ಸಿನಿಂದ ಹಸು ಕೊಡಿಸಿದ್ದಾರೆ. ಕೆಲವರು ರಾಜಕೀಯ ಮಾಡಿದ್ದಾರೆ. ನಾವು ಶಾಸಕರ ಜತೆ ಇದ್ದೇವೆ' ಎಂದು ತಿಳಿಸಿದರು.

ಹಸುಗಳ ಕೆಚ್ಚಲು ಕೊಯ್ದ ಪ್ರಕರಣ: ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ವಿನಾಯಕ ನಗರದ ಓಲ್ಡ್ ಪೆನ್ಷನ್ ಮೊಹಲ್ಲಾದ ರಸ್ತೆಯ ಬದಿಯ ಶೆಡ್‌ನಲ್ಲಿ ಕಟ್ಟಿದ್ದ ಮೂರು ಹಸುಗಳ ಕೆಚ್ಚಲು ಕೊಯ್ದ ಪ್ರಕರಣ ಖಂಡಿಸಿ ಬಿಜೆಪಿ ರೈತ ಮೋರ್ಚಾದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ರೈತ ಮೋರ್ಚಾದ ರಾಜ್ಯ ಕಾರ್ಯದರ್ಶಿ ಸತೀಶ್ ಕಡತನಮಲೆ ಮಾತನಾಡಿ, 'ಗೋವುಗಳ ಕೆಚ್ಚಲು ಕತ್ತರಿಸುವ ಮೂಲಕ ಕೋಟ್ಯಂತರ ಹಿಂದೂಗಳ ಭಾವನೆಗೆ ಧಕ್ಕೆ ಉಂಟು ಮಾಡಲಾಗಿದೆ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕು. ಆರೋಪಿಗಳಿಗೆ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು' ಎಂದು ಆಗ್ರಹಿಸಿದರು.

'ಈ ಕೃತ್ಯ ಎಸಗಲು ಕುಮ್ಮಕ್ಕು ನೀಡಿದವರನ್ನೂ ಬಂಧಿಸಬೇಕು. ಆದರೆ, ಸರ್ಕಾರ ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತಿಲ್ಲ' ಎಂದು ದೂರಿದರು.

ಇದೇ ವೇಳೆ ಗೋವುಗಳನ್ನು ರಕ್ಷಿಸಿ ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು.

ರೈತ ಮೋರ್ಚಾದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಅಶೋಕ್ ಮುಕ್ಕಸಂದ್ರ, ರೈತ ಮೋರ್ಚಾದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಬಿಜೆಪಿ ರೈತ ಮೋರ್ಚಾದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು

ಚಿತ್ರಾವಳಿ



ಸದಾ ಗಿಜಿಗುಡುವ ನಗರ್ತಪೇಟೆಯ ಎಸ್‌.ಪಿ.ರಸ್ತೆ ಮತ್ತು ಒಟಿಸಿ ರಸ್ತೆ ಜಂಕ್ಷನ್‌ನಲ್ಲಿ ಪೈಪ್ ಅಳವಡಿಸುವ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದ್ದು, ಮಣ್ಣು, ಗುಂಡಿಗಳ ಮಧ್ಯೆಯೇ ಜನರು ರಸ್ತೆ ದಾಟುತ್ತಿದ್ದಾರೆ ಚಿತ್ರ: ಪ್ರಶಾಂತ್ ಎಚ್‌.ಜಿ.



ನಗರದ ಎನ್‌ಆರ್‌.ಕಾಲೊನಿಯಲ್ಲಿ ನೆಟ್ಟಕಲ್ಲಪ್ಪ ವೃತ್ತದ ಬಳಿಯಿರುವ ಸುಬ್ಬರಾಮ ಚೆಟ್ಟಿ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿಗಾಗಿ ಡಾಂಬರು ರಸ್ತೆಯನ್ನು ಅಗೆದು ಹಾಕಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗಿದೆ ಚಿತ್ರ: ಪ್ರಶಾಂತ್ ಎಚ್‌.ಜಿ.

'ಮೆಟ್ರೊ ಪ್ರಯಾಣ ದರ ಏರಿಕೆ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಪ್ರಯಾಣ ದರ ಹೆಚ್ಚಳ ಪ್ರಸ್ತಾವವನ್ನು ಕೈಬಿಡಬೇಕು ಎಂದು ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ) ಕಮ್ಯುನಿಸ್ಟ್ ಬೆಂಗಳೂರು ಜಿಲ್ಲಾ ಸಮಿತಿ ಆಗ್ರಹಿಸಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಬಸ್ ಟಿಕೆಟ್ ದರ ಏರಿಕೆಗಳಿಂದ ಜನ ಜೀವನ ಅಸಹನೀಯವಾಗಿದೆ. ಇಂಥ ಸಂದರ್ಭದಲ್ಲಿ ಮೆಟ್ರೊ ಪ್ರಯಾಣದ ದರವನ್ನೂ ಏರಿಕೆ ಮಾಡಲು ಮುಂದಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

'ನಮ್ಮ ಮೆಟ್ರೊ ನಷ್ಟವನ್ನು ತುಂಬಲು ಶೇಕಡ 40ರಿಂದ ಶೇ 45ರಷ್ಟು ಏರಿಕೆ ಮಾಡಲು ದರ ನಿಗದಿ ಸಮಿತಿ ಶಿಫಾರಸು ಮಾಡಿರುವುದು ಜನರಿಗೆ ಆಘಾತವನ್ನುಂಟು ಮಾಡಿದೆ. ಮೆಟ್ರೊ ಸಂಚಾರವು ಬೆಂಗಳೂರು ನಗರದ ಜನರ ಜೀವನಾಡಿಯಾಗಿದ್ದು, ಮೆಟ್ರೊ ಸೇವೆಯನ್ನು ಲಾಭ-ನಷ್ಟದಲ್ಲಿ ನೋಡಬಾರದು. ನಷ್ಟಕ್ಕೆ ಕಾರಣ ಏನು ಎಂಬುದನ್ನು ಕಂಡುಕೊಂಡು ಖರ್ಚು ಕಡಿಮೆ ಮಾಡುವ ಮೂಲಕ ನಷ್ಟ ನಿಭಾಯಿಸಬೇಕು' ಎಂದು ಎಸ್‌ಯುಸಿಐ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ.ಎನ್. ಶ್ರೀರಾಮ್ ಒತ್ತಾಯಿಸಿದ್ದಾರೆ.

ಮರುಪರಿಶೀಲನೆಗೆ ಗ್ರೀನ್‌ಪೀಸ್ ಇಂಡಿಯಾ ಆಗ್ರಹ

ನಮ್ಮ ಮೆಟ್ರೊ ಸಂಚಾರ ದರವನ್ನು ಏರಿಸುವ ಪ್ರಸ್ತಾವವನ್ನು ಮರುಪರಿಶೀಲಿಸಬೇಕು ಎಂದು ಗ್ರೀನ್‌ಪೀಸ್ ಇಂಡಿಯಾ ಆಗ್ರಹಿಸಿದೆ.

'2017 ರಲ್ಲಿ ಹೆಚ್ಚಿಸಲಾಗಿದ್ದ ಪ್ರಯಾಣ ದರವು ಕಡಿಮೆ ಆದಾಯದ ವರ್ಗಗಳಿಗೆ ಮೆಟ್ರೊ ಪ್ರಯಾಣವನ್ನು ಕೈಗೆ ನಿಲುಕದಂತೆ ಮಾಡಿತ್ತು. ಇದೀಗ ಮತ್ತೆ ಏರಿಕೆ ಮಾಡುವ ಪ್ರಸ್ತಾವವು ಜನಸಾಮಾನ್ಯರಿಗೆ ಸಂಕಷ್ಟ ಉಂಟು ಮಾಡಿದೆ' ಎಂದು ಗ್ರೀನ್‌ಪೀಸ್ ಇಂಡಿಯಾ ಪ್ರಚಾರಕ ಆಕಿಜ್ ಫಾರೂಕ್ ಹೇಳಿದ್ದಾರೆ.

'ಮೆಟ್ರೊ ಪ್ರಯಾಣ ದರ ಏರಿಕೆ ಮಾಡಬಾರದು. ಸಾರಿಗೆ ನಿಗಮಗಳು ಇತ್ತೀಚೆಗೆ ಶೇ 15ರಷ್ಟು ದರ ಹೆಚ್ಚಳ ಮಾಡಿದ್ದು, ಅದನ್ನು ಕೂಡ ಇಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಅರ್ಜುನ' ಸ್ಮಾರಕ ನಿರ್ಮಾಣಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರಿನಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಯೋಜನೆಗಳಿಗೆ ನೆರವು ಒದಗಿಸಬೇಕೆಂದು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದರು.

ಈ ಸಂಬಂಧ ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಬುಧವಾರ ಭೇಟಿ ಮಾಡಿದ ಅವರು, ಮೈಸೂರಿನ ಪಾರಂಪರಿಕತೆಗೆ ತಕ್ಕಂತೆ ಎಲ್‌ಐಸಿ ಸರ್ಕಲ್ ಬಳಿ ಅರ್ಜುನ ಸ್ಮಾರಕ ಮತ್ತು ಮೈಸೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯನ್ನು ಯೋಗ ಮ್ಯೂಸಿಯಂ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅರ್ಜುನ ಸ್ಮಾರಕ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಅವರು ವಿನಂತಿಸಿದರು.

ಸಂಪೂರ್ಣ ಯೋಜನೆಯ ವರದಿ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಅರ್ಜುನ ಆನೆಯ ಬೃಹತ್ ಪ್ರತಿಮೆ ನಿರ್ಮಾಣ ಸೇರಿದಂತೆ ಯೋಜನೆಯ ಒಟ್ಟು ವೆಚ್ಚ ₹20 ಕೋಟಿ ಆಗಲಿದೆ ಎಂದು ಸಂಸದರು ಮನವಿ ಪತ್ರದಲ್ಲಿ ಮಾಹಿತಿ ನೀಡಿದ್ದಾರೆ.

ಬಿಬಿಎಂಪಿಗೆ ಹಲವು ಬಾರಿ ದೂರು ಸಲ್ಲಿಸಿದರೂ ಕ್ರಮವಿಲ್ಲ: ಸ್ಥಳೀಯರ ಅಸಮಾಧಾನ

'ಐಟಿಐ ಬಡಾವಣೆ ಉದ್ಯಾನ ಅವ್ಯವಸ್ಥೆಯ ಆಗರ'

• ಚಿಕ್ಕರಾಮು

ರಾಜರಾಜೇಶ್ವರಿನಗರ: ಐಟಿಐ ಬಡಾವಣೆಯಲ್ಲಿರುವ ಉದ್ಯಾನದ ಮುಖ್ಯದ್ವಾರವೇ ಕಿತ್ತು ಬಂದಿದೆ, ಪಾದಚಾರಿ ಮಾರ್ಗ ಕಿತ್ತುಹೋಗಿ, ಗುಂಡಿಗಳು ಬಿದ್ದಿವೆ, ತಂತಿಬೇಲಿ ಕಿತ್ತುಹೋಗಿ, ಶೌಚಾಲಯದ ಕಡೆ ಸುಳಿಯದಂತಹ ಪರಿಸ್ಥಿತಿ ನಿರ್ಮಾಣವಾಗಿ ವರ್ಷಗಳು ಕಳೆದರೂ ಬಿಬಿಎಂಪಿ ಅಧಿಕಾರಿಗಳು ಇತ್ತ ತಿರುಗಿ ನೋಡುತ್ತಿಲ್ಲ.

'ಗೇಟು ಕಿತ್ತುಹೋಗಿ ಐದು ವರ್ಷವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ಹಲವು ಬಾರಿ ದೂರು ಸಲ್ಲಿಸಲಾಗಿದ್ದರೂ ಕ್ರಮ ಕೈಗೊಂಡಿಲ್ಲ' ಎಂದು ವಾಯುವಿಹಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

'ಉದ್ಯಾನದಲ್ಲಿ ಅಳವಡಿಸಿರುವ ಬೆಂಚುಗಳು ಮುರಿದುಬಿದ್ದಿವೆ. ಪಾದಚಾರಿ ಮಾರ್ಗ ಅಲ್ಲಲ್ಲಿ ಕಿತ್ತುಹೋಗಿ, ಗುಂಡಿಗಳು ಬಿದ್ದಿದ್ದರೂ ಉದ್ಯಾನ ನಿರ್ವಹಣೆಗೆ ಲಕ್ಷಾಂತರ ವೆಚ್ಚ ಮಾಡುವ ಬಿಬಿಎಂಪಿ ಎಂಜಿನಿಯರ್‌ಗಳು ಇತ್ತ ಗಮನ ಹರಿಸಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಉದ್ಯಾನ ಅವ್ಯವಸ್ಥೆಯ ಆಗರವಾಗಿದೆ' ಎಂದು ಸ್ಥಳೀಯರು ದೂರಿದರು.





ಐಟಿಐ ಬಡಾವಣೆಯಲ್ಲಿರುವ ಉದ್ಯಾನದ ಗೇಟು ಕಿತ್ತುಹೋಗಿರುವುದು (ಎಡಚಿತ್ರ) ಉದ್ಯಾನದಲ್ಲಿನ ಬೆಂಚಿನ ಸ್ಥಿತಿ

ಸ್ಥಳೀಯ ನಿವಾಸಿ ಪದ್ಮಾ ಭಟ್ ಮಾತನಾಡಿ, 'ಐಟಿಐ, ಎಂಪಿಎಂ ಬಡಾವಣೆಯಲ್ಲಿರುವ ಉದ್ಯಾನಗಳ ನಿರ್ವಹಣೆ ಸರಿಯಾಗಿಲ್ಲ. ಹಲವು ವರ್ಷಗಳು ಕಳೆದಿದ್ದರೂ ಕಿತ್ತುಹೋಗಿರುವ ಬೆಂಚು, ತಂತಿಬೇಲಿಯನ್ನು ದುರಸ್ತಿ ಮಾಡಿಲ್ಲ. ಶೌಚಾಲಯದಲ್ಲಿ ಸ್ವಚ್ಛತೆ ಇಲ್ಲ. ಮೂಲಸೌಕರ್ಯ ಮರೀಚಿಕೆಯಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳ ಬೇಜಾವಾಬ್ದಾರಿಯಿಂದ ಉದ್ಯಾನದಲ್ಲಿ ಅಸಹ್ಯಕರ ವಾತಾವರಣ ನಿರ್ಮಾಣವಾಗಿದೆ' ಎಂದರು.

'ಆರೋಗ್ಯ, ಮಾನಸಿಕ ನೆಮ್ಮದಿಗಾಗಿ ವಯಸ್ಸಿನ ಅಂತರವಿಲ್ಲದೆ ಪ್ರತಿನಿತ್ಯ ವಾಯುವಿಹಾರ ನಡೆಸಲು ವೃದ್ಧರು, ಮಧುಮೇಹಿಗಳು, ಬಾಲಕರು ಉದ್ಯಾನಕ್ಕೆ ಬರುತ್ತಾರೆ. ನಂತರ ಕೊಂಚ ವಿಶ್ರಾಂತಿ ಪಡೆಯಲೂ ಇಲ್ಲಿ ಸಾಧ್ಯವಿಲ್ಲದಂತಾಗಿದೆ' ಎಂದು ವಾಯುವಿಹಾರಿ ಸುನೀಲ್ ಹೇಳಿದರು.

ತೋಟಗಾರಿಕೆ ಅಧೀಕ್ಷಕ ಎಸ್‌.ಎಚ್‌.ಕೇಶವ ಮಾತನಾಡಿ, 'ಬಿಬಿಎಂಪಿಯ ಯೋಜನಾ ವಿಭಾಗದಿಂದ ನಮ್ಮ ವಿಭಾಗಕ್ಕೆ ಉದ್ಯಾನ ನಿರ್ವಹಣೆ ಹಸ್ತಾಂತರ ಪ್ರಕ್ರಿಯೆಯಲ್ಲಿದೆ. ಇದು ಮುಗಿದ ಮೇಲೆ, ಕ್ರಿಯಾಯೋಜನೆ ತಯಾರಿಸಿ ಉದ್ಯಾನ ಅಭಿವೃದ್ಧಿ ಮಾಡಲಾಗುವುದು' ಎಂದರು.

ಆರ್‌.ಆರ್. ನಗರ ವಲಯ ಜಂಟಿ ಆಯುಕ್ತೆ ಆರತಿ ಆನಂದ್, 'ವಲಯ ಆಯುಕ್ತರ ಜೊತೆ ಶೀಘ್ರದಲ್ಲಿಯೇ ಸಭೆ ನಡೆಸಿ ಎಲ್ಲಾ ಉದ್ಯಾನಗಳ ಅಭಿವೃದ್ಧಿ, ದುರಸ್ತಿಗೆ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಲಾಲ್‌ಬಾಗ್‌ನಲ್ಲಿ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನಕ್ಕೆ ಇಂದು ಚಾಲನೆ • 10 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆ

ಪುಷ್ಪಗಳಲ್ಲಿ ವಾಲ್ಮೀಕಿ ಚರಿತ್ರೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಿಕವಿ ಮಹರ್ಷಿ ವಾಲ್ಮೀಕಿ ವಿಷಯ ಆಧಾರಿತ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನವು ಲಾಲ್‌ಬಾಗ್‌ನಲ್ಲಿ ಜನವರಿ 16ರಿಂದ 27ರವರೆಗೆ ನಡೆಯಲಿದೆ' ಎಂದು ತೋಟಗಾರಿಕೆ ಇಲಾಖೆಯ ನಿರ್ದೇಶಕ ಡಿ.ಎಸ್. ರಮೇಶ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ಮಹರ್ಷಿ ವಾಲ್ಮೀಕಿ ಅವರಿಗೆ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ವಾಲ್ಮೀಕಿ ಅವರ ಜೀವನ, ಸಾಧನೆ, ರಾಮಾಯಣದ ಚರಿತ್ರೆಯನ್ನು ಹೂವುಗಳಲ್ಲಿ ಅನಾವರಣ ಮಾಡಲಾಗುತ್ತದೆ. ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ 10 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡುವ ನಿರೀಕ್ಷೆ ಇದೆ' ಎಂದರು.

'ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿರುವ 217ನೇ ಫಲಪುಷ್ಪ ಪ್ರದರ್ಶನ ಇದಾಗಿದೆ. ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ವೇದಿಕೆ ಸಜ್ಜು ಮಾಡಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ (ಜ. 16) ಬೆಳಿಗ್ಗೆ 10ಕ್ಕೆ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಭಾಗವಹಿಸಲಿದ್ದು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.



ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನದಲ್ಲಿ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆಯನ್ನು ಕಲಾವಿದರು ಅಳವಡಿಸಿದರು ಪ್ರಜಾವಾಣಿ ಚಿತ್ರ



ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಆಯೋಜಿಸಿರುವ₹ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನಕ್ಕೆ ರಾಮಾಯಣ ಗ್ರಂಥದ ಮಾದರಿಯನ್ನು ಜೋಡಿಸಿದ ಕಾರ್ಮಿಕರು ಪ್ರಜಾವಾಣಿ ಚಿತ್ರ



'ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ಬೃಹತ್ ಹುತ್ತದ ಮಾದರಿಯೊಳಗೆ ಮಹರ್ಷಿ ವಾಲ್ಮೀಕಿ ಅವರು ತಪಸ್ಸು ಮಾಡುವ ಭಂಗಿಯ ಪ್ರತಿಕೃತಿಯನ್ನು ಪ್ರದರ್ಶಿಸಲಾಗುತ್ತದೆ. ಇದು 10 ಅಡಿ ಎತ್ತರ ಹಾಗೂ 38 ಅಡಿ ಸುತ್ತಳತೆಯನ್ನು ಹೊಂದಿದೆ. ಒಂದು ಬಾರಿಗೆ 1.5 ಲಕ್ಷ ಡಚ್ ಗುಲಾಬಿ, 400 ಕೆ.ಜಿ. ಪಿಂಚ್ಡ್ ಗುಲಾಬಿ ಹಾಗೂ 300 ಕೆ.ಜಿ. ಹೈದರಾಬಾದ್ ಸೇವಂತಿಗೆ ಹೂವುಗಳನ್ನು ಬಳಸಿಕೊಂಡು ಈ ಪರಿಕಲ್ಪನೆಯನ್ನು ಸಿದ್ಧಪಡಿಸಲಾಗಿದೆ. ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯ ಬರೆಯುತ್ತಿರುವ ಭಂಗಿಯ ಪ್ರತಿಮೆ, ರಾಮಾಯಣದ ಪಂಚವಟಿ ಬಿಂಬಿಸುವ 3ಡಿ ಕಲಾಕೃತಿಗಳು, ವಾಲ್ಮೀಕಿ ಆಶ್ರಮ, ಹನುಮ, ಜಟಾಯು, ಜಾಂಬವಂತ, ಅಳಿಲಿನ ಕಲಾಕೃತಿಗಳು ಹಾಗೂ ಹಲವಾರು ಕವಿಗಳ ಪುತ್ಥಳಿಗಳು ಇರಲಿವೆ' ಎಂದರು.

ಜ. 18ರಂದು ನಡೆಯುವ ಇಕೆಬಾನ, ತರಕಾರಿ ಕೆತ್ತನೆ, ಪುಷ್ಪಭಾರತಿ, ಬೋನ್ಸಾಯ್, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂರು ಒಣಹೂವಿನ ಜೋಡಣೆಯ ಕಲೆಗಳ ಸ್ಪರ್ಧೆಯ ಪ್ರದರ್ಶನವನ್ನು ಚಲನಚಿತ್ರ ನಟಿ ಪ್ರೇಮಾ ಉದ್ಘಾಟಿಸಲಿದ್ದಾರೆ. ಇಕೆಬಾನ ಸೇರಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಜ. 24ರಂದು ಬಹುಮಾನಗಳನ್ನು ವಿತರಿಸಲಾಗುತ್ತದೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ಉಪ ನಿರ್ದೇಶಕ ಬಾಲಕೃಷ್ಣ ಟಿ.ಎಚ್., ಸುದ್ದಿಗೋಷ್ಠಿಯಲ್ಲಿದ್ದರು.

₹2.75 ಕೋಟಿ	10 ಲಕ್ಷ	136	400	30 ಲಕ್ಷ
ಫಲಪುಷ್ಪ ಪ್ರದರ್ಶನದ ಒಟ್ಟು ವೆಚ್ಚ	ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವವರ ಅಂದಾಜು ಸಂಖ್ಯೆ	ಉದ್ಯಾನದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು	ಭದ್ರತೆಗೆ ನಿಯೋಜಿಸಿರುವ ಪೊಲೀಸರ ಸಂಖ್ಯೆ	ಅಂದಾಜು ಬಳಕೆಯಾಗುವ ಹೂ ಕುಂಡಗಳು, ಪ್ರತ್ಯೇಕಿಸಿದ ಹೂವುಗಳ ಸಂಖ್ಯೆ

ಪ್ರವೇಶ ಶುಲ್ಕ ಹೀಗಿದೆ...

ಲಾಲ್‌ಬಾಗ್‌ನ ಎಲ್ಲ ಪ್ರವೇಶ ದ್ವಾರಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳ ವ್ಯವಸ್ಥೆ ಮಾಡಲಾಗಿದೆ. https:/hasiru.karnataka.gov.in/flowershow/login.aspx ಕೊಂಡಿ ಬಳಸಿ ಆನ್‌ಲೈನ್ ಮೂಲಕ ಟಿಕೆಟ್ ಬುಕ್ಕಿಂಗ್ ಮಾಡಿಕೊಳ್ಳಬಹುದು.

- ವಯಸ್ಕರಿಗೆ ₹80
- ರಜೆ ದಿನಗಳಲ್ಲಿ ₹100
- ಮಕ್ಕಳಿಗೆ ₹30
- ಸಮವಸ್ತ್ರ ಧರಿಸಿ ಬರುವ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ
- **ಪ್ರದರ್ಶನದ ಸಮಯ:** ಬೆಳಿಗ್ಗೆ 6ರಿಂದ ಸಂಜೆ 6.30ರವರೆಗೆ

ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ಜನವರಿ 16ರಿಂದ 27ರ ವರೆಗೆ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ಲಾಲ್‌ಬಾಗ್ ಸುತ್ತಮುತ್ತಲ ರಸ್ತೆಗಳ ಬದಿಯಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ. ಅಲ್ಲದೇ ವಾಹನ ನಿಲುಗಡೆಗೆ ಕೆಲವು ಸ್ಥಳಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ನಿಲುಗಡೆಗೆ ಅವಕಾಶ ಕಲ್ಪಿಸಿರುವ ಸ್ಥಳಗಳು

- ಎಂ.ಎಚ್.ಮರಿಗೌಡ ರಸ್ತೆ, ಅಲ್ ಅಮೀನ್ ಕಾಲೇಜ್ ಆವರಣದಲ್ಲಿ ದ್ವಿಚಕ್ರ ವಾಹನಗಳು
- ಕೆ.ಎಚ್.ರಸ್ತೆ, ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಮೇಲೆ ನಾಲ್ಕು ಚಕ್ರದ ವಾಹನಗಳು
- ಮರಿಗೌಡ ರಸ್ತೆ– ಹಾಪ್‌ಕಾಮ್ಸ್‌ನಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳು
- ಜೆ.ಸಿ.ರಸ್ತೆಯ ಬಿಬಿಎಂಪಿ ಪಾರ್ಕಿಂಗ್ ಸ್ಥಳದಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳು

ವಾಹನಗಳ ನಿಲುಗಡೆ ನಿಷೇಧಿಸಿರುವ ರಸ್ತೆಗಳು

- ಮರಿಗೌಡ ರಸ್ತೆ, ಲಾಲ್‌ಬಾಗ್ ಮುಖ್ಯದ್ವಾರದಿಂದ ನಿಮ್ಹಾನ್ಸ್‌ವರೆಗೆ ರಸ್ತೆಯ ಎರಡೂ ಬದಿ
- ಕೆ.ಎಚ್.ರಸ್ತೆ, ಕೆ.ಎಚ್.ವೃತ್ತದಿಂದ ಶಾಂತಿನಗರ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿ
- ಲಾಲ್‌ಬಾಗ್ ರಸ್ತೆ, ಸುಬ್ಬಯ್ಯ ವೃತ್ತದಿಂದ ಲಾಲ್‌ಬಾಗ್ ಮುಖ್ಯದ್ವಾರದವರೆಗೆ
- ಸಿದ್ದಯ್ಯ ರಸ್ತೆ, ಊರ್ವಶಿ ಚಿತ್ರಮಂದಿರದ ಜಂಕ್ಷನ್‌ನಿಂದ ವಿಲ್ಸನ್ ಗಾರ್ಡನ್ 12ನೇ ಕ್ರಾಸ್‌ವರೆಗೆ
- ಲಾಲ್‌ಬಾಗ್ ವೆಸ್ಟ್‌ಗೇಟ್‌ನಿಂದ ಆರ್.ವಿ.ಟೀಚರ್ಸ್ ಕಾಲೇಜುವರೆಗೆ
- ಅರ್‌ವಿ ಟೀಚರ್ಸ್ ಕಾಲೇಜ್‌ನಿಂದ ಅಶೋಕ ಪಿಲ್ಲರ್‌ವರೆಗೆ
- ಅಶೋಕ ಪಿಲ್ಲರ್‌ನಿಂದ ಸಿದ್ದಾಪುರ ಜಂಕ್ಷನ್‌ವರೆಗೆ

ಸಮೂಹ ಸಾರಿಗೆ ಬಳಸಿ

ಮರಿಗೌಡ ರಸ್ತೆ, ಲಾಲ್‌ಬಾಗ್ ರಸ್ತೆ, ಕೆ.ಎಚ್. ರಸ್ತೆಗಳಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗುವುದರಿಂದ ಸಾರ್ವಜನಿಕರು ಸಮೂಹ ಸಾರಿಗೆಗಳಾದ ಬಿಎಂಟಿಸಿ ಬಸ್‌ಗಳು, ಮೆಟ್ರೊ, ಕ್ಯಾಬ್‌ಗಳನ್ನು ಬಳಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

2.5 ಎಕರೆ ಪ್ರದೇಶ • ₹55 ಲಕ್ಷ ವೆಚ್ಚದಲ್ಲಿ ಮರು ಅಭಿವೃದ್ಧಿ • 100ಕ್ಕೂ ಅಧಿಕ ಗಿಡಗಳು

ಸಸ್ಯಕಾಶಿ: ಬೋನ್ಸಾಯ್ ಉದ್ಯಾನಕ್ಕೆ ಆಧುನಿಕ ಸ್ಪರ್ಶ



ಲಾಲ್‌ಬಾಗ್‌ನಲ್ಲಿ ನಿರ್ಮಿಸುತ್ತಿರುವ ಬೋನ್ಸಾಯ್ ಉದ್ಯಾನ ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್



ಬೋನ್ಸಾಯ್ ಗಿಡವನ್ನು ಸಿದ್ಧಪಡಿಸುತ್ತಿರುವ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಕೃತಿಕವಾಗಿ ಬೃಹತ್ ಗಾತ್ರದಲ್ಲಿ ಬೆಳೆಯುವ ಮರಗಳನ್ನು ಇಲ್ಲಿ ಕುಬ್ಜಗೊಳಿಸಿ, ಅವುಗಳನ್ನು ಕುಂಡಗಳಲ್ಲಿ ಬೆಳೆದು ಅದಕ್ಕೊಂದು ರೂಪ ನೀಡಲಾಗಿದೆ. ಎರಡೂ ಕೈಗಳಿಂದ ತಬ್ಬಿಕೊಳ್ಳಲಾರದಂತಹ ಬೃಹದಾಕಾರವಾಗಿ ಬೆಳೆಯುವ ವಿವಿಧ ಜಾತಿಯ ಸಸ್ಯಗಳನ್ನು ಬೋನ್ಸಾಯ್ ಪದ್ಧತಿಯ ಮೂಲಕ ಕುಬ್ಜಗೊಳಿಸಿದ್ದು, ಮರಗಳನ್ನು ಕೈಗಳಲ್ಲಿ ಹಿಡಿದುಕೊಂಡು ಹೋಗಬಹುದು. ಹೊಸ ಆಕರ್ಷಣೆಯೊಂದಿಗೆ ಸಾರ್ವಜನಿಕರನ್ನು ಸ್ವಾಗತಿಸಲು ಬೋನ್ಸಾಯ್ ಉದ್ಯಾನ ಸಜ್ಜಾಗುತ್ತಿದೆ.



80 ವರ್ಷದ ಬೋನ್ಸಾಯ್ ಗಿಡ

ಇದು ಲಾಲ್‌ಬಾಗ್‌ನಲ್ಲಿರುವ ಬೋನ್ಸಾಯ್ (ಕುಬ್ಜ ಪ್ರಭೇದದ ಸಸ್ಯ) ಉದ್ಯಾನದಲ್ಲಿ ಕಂಡು ಬರುವ ದೃಶ್ಯಗಳು.

ಲಾಲ್‌ಬಾಗ್‌ನ 2.5 ಎಕರೆ ಪ್ರದೇಶದಲ್ಲಿರುವ ಬೋನ್ಸಾಯ್ ಉದ್ಯಾನಕ್ಕೆ ಆಧುನಿಕ ಸ್ಪರ್ಶ ನೀಡುವ ಸಲುವಾಗಿ ಮೂರು ವರ್ಷಗಳಿಂದ ಕಾಮಗಾರಿ ನಡೆಯುತ್ತಿದೆ. 10 ವರ್ಷದಿಂದ 80 ವರ್ಷದವರೆಗಿನ 100ಕ್ಕೂ ಹೆಚ್ಚು ಬೋನ್ಸಾಯ್ ಗಿಡಗಳನ್ನು ವಿವಿಧ ಹಂತಗಳಲ್ಲಿ ವಿನ್ಯಾಸಗೊಳಿಸಿ ಪ್ರದರ್ಶನಕ್ಕೆ ಇಡಲಾಗಿದೆ. ಬೋನ್ಸಾಯ್ ಕಲಾವಿದೆ ಅನುಪಮಾ ವೇದಾಚಲ ಅವರ ಮಾರ್ಗದರ್ಶನದಲ್ಲಿ ಈ ಉದ್ಯಾನದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ.

'ದೆಹಲಿ, ಕೋಲ್ಕತ್ತ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಹಲವಾರು ಬೋನ್ಸಾಯ್ ಗಿಡಗಳನ್ನು ತರಿಸಲಾಗಿದೆ. ಸುಮಾರು ಮೂರು ವರ್ಷಗಳಿಂದ ಅವುಗಳ ಬೆಳವಣಿಗೆ, ಅವುಗಳಿಗೆ ಒಂದು ರೂಪ ನೀಡುವ ಕೆಲಸ ಪ್ರಗತಿಯಲ್ಲಿದೆ. ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಒಂದು ಬೋನ್ಸಾಯ್ ಉದ್ಯಾನದ ನಿರ್ಮಿಸುವ ಉದ್ದೇಶದಿಂದ ಈ ಕಾಮಗಾರಿ ಕೈಗೊಳ್ಳಲಾಗಿದೆ. ಇದಕ್ಕೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಂಪೂರ್ಣವಾಗಿ ಬೆಂಬಲ ನೀಡುತ್ತಿದ್ದಾರೆ ಎಂದು ಅನುಪಮಾ ವೇದಾಚಲ ಅವರು 'ಪ್ರಜಾವಾಣಿ'ಗೆ ತಿಳಿಸಿದರು.



> **₹55 ಲಕ್ಷ ವೆಚ್ಚದಲ್ಲಿ ಈ ಉದ್ಯಾನದ ಮರು ನಿರ್ಮಾಣದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇನ್ನೂ ಒಂದು ವರ್ಷದಲ್ಲಿ ಎಲ್ಲ ಕಾಮಗಾರಿ ಪೂರ್ಣಗೊಳ್ಳಲಿದೆ. ದೇಶದ ಪ್ರಥಮ ಬೋನ್ಸಾಯ್ ಉದ್ಯಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ**
> **ಎಂ. ಜಗದೀಶ್,** ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

'ಇಲ್ಲಿ ಗಿಡಗಳಿಗೆ ಸಂಬಂಧಿಸಿದ ಮಾಹಿತಿ ಒದಗಿಸುವ ಸ್ಟುಡಿಯೊವನ್ನು ನಿರ್ಮಿಸಲಾಗಿದೆ. ಸುಮಾರು 80ಕ್ಕೂ ಹೆಚ್ಚು ಪ್ರಭೇದದ ಬೋನ್ಸಾಯ್ ಸಸಿಗಳ ರಕ್ಷಣೆ ಮಾಡಿ, ಅವುಗಳನ್ನು ಪೋಷಿಸುವ ಕೆಲಸ ನಡೆಯುತ್ತಿದೆ. ನಗರ ಪ್ರದೇಶಗಳಲ್ಲಿ ಹಸಿರು ಪ್ರದೇಶ ಕಡಿಮೆಯಾಗುತ್ತಿದೆ. ದೊಡ್ಡ ಮರಗಳನ್ನು ಕುಬ್ಜಗೊಳಿಸಿ, ಅಪಾರ್ಟ್‌ಮೆಂಟ್‌ಗಳಲ್ಲಿ ಬೆಳೆಯಬಹುದು. ಪ್ರಕೃತಿದತ್ತವಾದ ಕಲ್ಲುಕೆತ್ತನೆಯೊಳಗೆ ಕುಬ್ಜ ಮರಗಳು ಬೆಳೆದಿರುವಂತೆ ಸೃಷ್ಟಿಸಲಾಗುತ್ತದೆ. ಒಂದು ಗಿಡವನ್ನು ಬೆಳೆಸಬೇಕಾದರೆ ಕನಿಷ್ಠ 3 ರಿಂದ 4 ವರ್ಷ ಸಮಯ ಬೇಕಾಗುತ್ತದೆ' ಎಂದು ವಿವರಿಸಿದರು.

'ಬೋನ್ಸಾಯ್ ಉದ್ಯಾನದ ಅಭಿವೃದ್ಧಿ ಕಾಮಗಾರಿಗಳು ಶೇಕಡ 40ರಷ್ಟು ಪೂರ್ಣಗೊಂಡಿವೆ. ಇನ್ನೂ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಮೂರು ವರ್ಷಗಳಿಂದ ಈ ಉದ್ಯಾನ ಸಾರ್ವಜನಿಕರಿಗೆ ನಿರ್ಬಂಧಿಸಲಾಗಿತ್ತು. ಜ. 16ರಿಂದ ಸಾರ್ವಜನಿಕರ ಪ್ರವೇಶಕ್ಕೆ ಈ ಉದ್ಯಾನ ಮುಕ್ತಗೊಳಿಸಲಾಗುವುದು' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಮಾಹಿತಿ ನೀಡಿದರು.

'ಮರದ ಜಾತಿಯ ಎಲ್ಲ ಸಸ್ಯಗಳನ್ನು ಬೆಳೆಸಬಹುದು'



ಅನುಪಮಾ ವೇದಾಚಲ

'ಬೋನ್ಸಾಯ್ ಪದ್ಧತಿಯಲ್ಲಿ ಮರವಾಗಿ ಬೆಳೆಯುವ ಜಾತಿಯ ಎಲ್ಲ ಸಸ್ಯಗಳನ್ನೂ ಕುಬ್ಜವಾಗಿ ಬೆಳೆಸಬಹುದು. ಎತ್ತರಕ್ಕೆ ಬೆಳೆಯಲು ಬಿಡುವಂತಿಲ್ಲ. ಆಗಾಗ ಕತ್ತರಿಸುತ್ತಿರಬೇಕಾಗುತ್ತದೆ. ಆಲ, ಫೈನ್, ಫೈಕಾಸ್ ಜಾತಿಯ ಮರಗಳು, ಕ್ರಿಸ್‌ಮಸ್ ಟ್ರೀ ಮತ್ತು ಸಂಪಿಗೆ, ನಿಂಬೆ ಮತ್ತಿತರ ಹಣ್ಣಿನ ಜಾತಿಯ ಗಿಡಗಳನ್ನು ಈ ಪದ್ಧತಿಯಲ್ಲಿ ಬೆಳೆಸಬಹುದು' ಎಂದು ಅನುಪಮಾ ವೇದಾಚಲ ತಿಳಿಸಿದರು.

ಮರದ ಬುಡ ಮುಚ್ಚಿದ ಡಾಂಬರು



ಅರಣ್ಯ ನೌಕರರ ಬಡಾವಣೆಯಲ್ಲಿ ಮರಗಳ ಬುಡಕ್ಕೂ ಡಾಂಬರು ಹಾಕಲಾಗಿದೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಹದಿನೈದು ವರ್ಷಗಳ ನಂತರ ಅರಣ್ಯ ನೌಕರರ ಬಡಾವಣೆಯ ರಸ್ತೆಗಳಿಗೆ ಮರಗಳ ಬುಡವನ್ನೂ ಬಿಡದಂತೆ ಡಾಂಬರು ಹಾಕಲಾಗಿದೆ.

ನಗರಸಭೆ ಅವಧಿಯಲ್ಲಿ ಬಡಾವಣೆ ನಿರ್ಮಿಸಿದ ಸಂದರ್ಭದಲ್ಲಿ ರಸ್ತೆ ಮತ್ತು ಒಳಚರಂಡಿ ನಿರ್ಮಿಸಲಾಗಿತ್ತು. ಬಿಬಿಎಂಪಿಗೆ ಸೇರ್ಪಡೆ ನಂತರ ಕಾಮಗಾರಿ ನಡೆದಿರಲಿಲ್ಲ. ಡಿ.ಕೆ. ಸುರೇಶ್ ಅವರು ಲೋಕಸಭೆ ಸದಸ್ಯರಾಗಿದ್ದಾಗ ಬಡಾವಣೆಗೆ ಭೇಟಿ ನೀಡಿದ್ದಾಗ, ನಾಗರಿಕರು ರಸ್ತೆ ಅಭಿವೃದ್ಧಿಗೆ ಮನವಿ ಮಾಡಿಕೊಂಡಿದ್ದರು. ಇದೀಗ ರಸ್ತೆ ಅಭಿವೃದ್ಧಿಯಾಗಿದೆ.

'ಅರಣ್ಯ ಪ್ರದೇಶವಾಗಿದ್ದ ಅರಣ್ಯ ನೌಕರರ ಬಡಾವಣೆ ರಸ್ತೆ ಡಾಂಬರೀಕರಣದಿಂದ ಕಂಗೊಳಿಸುತ್ತಿದೆ. ಆದರೆ, ಅಧಿಕಾರಿಗಳಿಗೆ ಉತ್ಸಾಹ ಹೆಚ್ಚಾಗಿ, ರಸ್ತೆ ಬದಿಯಲ್ಲಿರುವ ಮರಗಳ ಬುಡಗಳಿಗೂ ಡಾಂಬರು ಹಾಕಿದ್ದಾರೆ. ಈಗಾಗಲೇ ಹಲವು ಮರಗಳಿಗೆ ಬೆಂಕಿ ಇಟ್ಟಿದ್ದರು. ಇದೀಗ, ಬಿಬಿಎಂಪಿ ಅಧಿಕಾರಿಗಳು, ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಮರಗಳ ಬುಡಕ್ಕೇ ಬಿಸಿ ಡಾಂಬರು ಬಿದ್ದು, ಮರಗಳು ಹಾಳಾಗಲಿವೆ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವರನಾರಾಯಣ, 'ಮರದ ಬುಡದ ಸುತ್ತಹಾಕಿರುವ ಡಾಂಬರು ತೆರವುಗೊಳಿಸುತ್ತೇನೆ' ಎಂದು ಭರವಸೆ ನೀಡಿದರು. ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ ಮಾತನಾಡಿ, 'ಡಾಂಬರೀಕರಣ ಮುಗಿದಿದೆ. ಇನ್ನು ರಸ್ತೆ ಚರಂಡಿಗಳನ್ನು ಮಾಡುತ್ತೇವೆ' ಎಂದರು.

ಅರಣ್ಯ ಇಲಾಖೆ ಸರ್ವೆ ವಿಧಾನಕ್ಕೆ ರಮೇಶ್ ಕುಮಾರ್ ಆಕ್ಷೇಪ

ಮುಗಿಯದ ಗೊಂದಲ: ಮತ್ತೆ ಸರ್ವೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ಸತತ ಮೂರು ಬಾರಿ ಮುಂದೂಡಿಕೆಯಾಗಿದ್ದ ತಾಲ್ಲೂಕಿನ ಹೊಸಹುಡ್ಯ ಗ್ರಾಮದ ಜಿಗಲಕುಂಟೆ ಅರಣ್ಯ ಪ್ರದೇಶದ ಸರ್ವೆ ನಂಬರ್ 1 ಮತ್ತು 2ರ ಜಮೀನಿನ ಜಂಟಿ ಸಮೀಕ್ಷೆ ಕಾರ್ಯ ಕೊನೆಗೂ ಬುಧವಾರ ಅರ್ಜಿದಾರ ಹಾಗೂ ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್ ಹಾಜರಿಯಲ್ಲಿ ಆರಂಭಗೊಂಡಿತು.

ತಮ್ಮ ಒಡೆತನದ ಜಮೀನಿನ ವಿಚಾರದಲ್ಲಿ ಸರ್ವೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಬೆಳಿಗ್ಗೆ ಹೇಳಿದ್ದ ರಮೇಶ್ ಕುಮಾರ್, ಸಂಜೆ ವೇಳೆಗೆ ಅರಣ್ಯ ಇಲಾಖೆಯ ಸರ್ವೆ ವಿಧಾನಕ್ಕೆ ಆಕ್ಷೇಪದ ಧ್ವನಿ ಎತ್ತಿದರು. ಹೀಗಾಗಿ, ಸರ್ವೆ ಸಂಬಂಧ ಗೊಂದಲ ಮುಂದುವರಿದಿದೆ. ಅಪೂರ್ಣಗೊಂಡ ಕಾರಣ ಗುರುವಾರಕ್ಕೆ ಮುಂದೂಡಲಾಗಿದೆ.

ಕಂದಾಯ ಇಲಾಖೆಯ ಸರ್ವೆ ಕ್ರಮ ಒಪ್ಪಿಕೊಂಡ ಅವರು, ಅರಣ್ಯ ಇಲಾಖೆಯ ಸರ್ವೆ ವಿಧಾನಕ್ಕೆ (ಗಂಟರ್ಸ್ ಚೈನ್ ಬಳಕೆ) ತಕರಾರು ತೆಗೆದರು. ಗೋಮಾಳ ಜಮೀನನ್ನು ಸರ್ವೆ ಇಲಾಖೆಯವರು ಅಳತೆ ಮಾಡಬೇಕು. ಅರಣ್ಯ ಇಲಾಖೆಯವರು ಹೇಗೆ ಸರ್ವೆ ಮಾಡುತ್ತಾರೆಂದು ಪ್ರಶ್ನಿಸಿದರು.

ಹೈಕೋರ್ಟ್ ನಿರ್ದೇಶನದಂತೆ ಜಿಲ್ಲಾಧಿಕಾರಿ ಎಂ.ಆರ್.ರವಿ ನೇತೃತ್ವದಲ್ಲಿ ಡಿಸಿಎಫ್ ಸರೀನಾ ಸಿಕ್ಕಲಿಗಾರ್, ಡಿಡಿಎಲ್‌ಆರ್ ಸಂಜಯ್ ಅವರನ್ನೊಳಗೊಂಡ ಸಮಿತಿ ಜಂಟಿ ಸಮೀಕ್ಷೆ ನಡೆಸುತ್ತಿದೆ. ಜೊತೆಗೆ ಉಪವಿಭಾಗಾಧಿಕಾರಿ ಡಾ.ಮೈತ್ರಿ, ಶ್ರೀನಿವಾಸಪುರ ತಹಶೀಲ್ದಾರ್ ಜಿ.ಎನ್.ಸುಧೀಂದ್ರ, ಕಂದಾಯ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ನೇತೃತ್ವದಲ್ಲಿ ನೂರಾರು ಪೊಲೀಸರು ಭದ್ರತೆ ನೀಡಿದ್ದರು.

ಬೆಳಿಗ್ಗೆ 9 ಗಂಟೆಗೆ ರಮೇಶ್ ಕುಮಾರ್ ಹಾಜರಿಯಲ್ಲಿ ಸರ್ವೆ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಈ ಜಮೀನಿಗೆ ಸಂಬಂಧಿಸಿದಂತೆ ಇದೇ ಮೊದಲ ಬಾರಿ ಅವರು ಸರ್ವೆ ಕಾರ್ಯದಲ್ಲಿ ಭಾಗಿಯಾಗಿ, ಸಹಿ ಕೂಡ ಹಾಕಿದರು.

'ಸರ್ವೆ ಕಾರ್ಯಕ್ಕೆ ನಾನು ಸಹಕಾರ ನೀಡುತ್ತೇನೆ. ಯಾವುದೇ ಕಾರಣಕ್ಕೂ ಅಡ್ಡಿಪಡಿಸುವುದಿಲ್ಲ, ಭಯವೂ ಇಲ್ಲ. ನಾನು ಯಾವುದೇ ಅರಣ್ಯ ಜಮೀನು ಒತ್ತುವರಿ ಮಾಡಿಕೊಂಡಿಲ್ಲ. ಬೇರೊಬ್ಬರಿಂದ ಈ ಜಮೀನನ್ನು ಖರೀದಿಸಿದ್ದು, ಜಂಟಿ ಸರ್ವೆ ಮಾಡಿಕೊಡುವಂತೆ ಹಿಂದೆ ನಾನೇ ಕೋರಿದ್ದೇನೆ. ಆದರೂ ನನ್ನನ್ನೇ ಒತ್ತುವರಿದಾರ ಎಂದು ಕೆಲವರು ಆರೋಪಿಸುತ್ತಿದ್ದಾರೆ' ಎಂದು ರಮೇಶ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಸರ್ವೆಗೆ ಅರಣ್ಯ ಇಲಾಖೆ ಚೈನ್ ಬಳಸಲು ತಮ್ಮ ವಿರೋಧವಿದೆ ಅಲ್ಲವೇ ಎಂಬ ಜಿಲ್ಲಾಧಿಕಾರಿ ಮಾತಿಗೆ, 'ಹೌದು, ಈಗಲೂ ನನ್ನ ವಿರೋಧವಿದೆ' ಎಂದು ಹೇಳಿದರು.



ಶ್ರೀನಿವಾಸಪುರ ತಾಲ್ಲೂಕಿನ ಹೊಸಹುಡ್ಯ ಗ್ರಾಮದ ಜಿಗಲಕುಂಟೆ ಅರಣ್ಯ ಪ್ರದೇಶದ ಸರ್ವೆ ನಂಬರ್ 1 ಮತ್ತು 2ರ ಜಮೀನಿನ ಜಂಟಿ ಸಮೀಕ್ಷೆ ವೇಳೆ ತೆಗೆದ ಚಿತ್ರ

ಮುಖ್ಯಾಂಶಗಳು

- ಗುರುವಾರ ರೋವರ್ ಯಂತ್ರ, ಅರಣ್ಯ ಹಾಗೂ ಕಂದಾಯ ಚೈನ್ ಬಳಸಿ ಸಮೀಕ್ಷೆ
- ನಾಲ್ಕು ತಂಡ ರಚಿಸಿ ಜಂಟಿ ಸರ್ವೇ ಕಾರ್ಯ
- ಮಧ್ಯಾಹ್ನದೊಳಗೆ ಸರ್ವೆ ಪೂರ್ಣ ಸಾಧ್ಯತೆ

'ಖರೀದಿದಾರ; ಒತ್ತುವರಿದಾರ ಅಲ್ಲ'

'2013–14ರ ಸರ್ವೆ ವರದಿಯಲ್ಲಿಯೇ ಎಲ್ಲವೂ ಇದೆ. ಈಗ ನೀವು ಏನೆಲ್ಲಾ ಮಾಡುತ್ತಿದ್ದೀರಿ ಅದೆಲ್ಲಾ ಆಗಲೇ ನ್ಯಾಯಾಲಯದ ಆದೇಶ ಪ್ರಕಾರ ನಡೆದಿದೆ. ಅಂದಿನ ಜಿಲ್ಲಾಧಿಕಾರಿ, ಡಿಸಿಎಫ್ ಡಿಡಿಎಲ್‌ಆರ್ ಬಂದು ಅಳತೆ ಮಾಡಿ ಸರ್ಕಾರಕ್ಕೆ ವರದಿ ನೀಡಿದ್ದರು. ಅದರ ಪ್ರಕಾರ ಈ ಜಾಗ ಇವತ್ತಿಗೂ ಕಂದಾಯ ಇಲಾಖೆಗೆ ಸೇರಿದ ಗೋಮಾಳವಾಗಿದೆ, ಖರಾಬ್ ಎಂದೇ ಇದೆ.

ಸರ್ಕಾರಿ ಭೂಮಿ ಅಳತೆ ಮಾಡುವ ಅಧಿಕಾರ ಇರುವುದು ಸರ್ವೆ ಇಲಾಖೆಗೆ ಮಾತ್ರ. ಇದೇ ವಿಚಾರವನ್ನು ಹಿಂದಿನ ವರದಿಯಲ್ಲಿ ನಮೂದಿಸಲಾಗಿದೆ.

ನಾನು ಇಲ್ಲಿಗೆ ಬಂದಿರುವುದು ಕೆಲವರಿಗೆ ನಿರಾಸೆ ಉಂಟು ಮಾಡಿದೆ. ಏಕೆಂದರೆ ನಾನು ಘರ್ಷಣೆಗೆ ಮುಂದಾಗುತ್ತೇನೆ ಎಂಬುದಾಗಿ ಅವರೆಲ್ಲಾ ಭಾವಿಸಿದ್ದರು. ಕಾನೂನು ನನ್ನ ಪರ ಇರುವಾಗ, ದಾಖಲೆಗಳು ಸರಿ ಇರುವಾಗ ನಾನೇಕೆ ಘರ್ಷಣೆ ಮಾಡಲಿ, ನಾನೇಕೆ ಅಂಜಲಿ? ಭಯಪಡುವ ಅಗತ್ಯವಿಲ್ಲ. ಹತ್ತು ಬಾರಿ ಕರೆದರೂ ಬರುತ್ತೇನೆ'

–ಕೆ.ಆರ್.ರಮೇಶ್ ಕುಮಾರ್, ಮಾಜಿ ಸಚಿವ (ಸರ್ವೆ ಅಧಿಕಾರಿಗಳಿಗೆ ಹೇಳಿದ್ದು)

ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕ್‌ಗೆ ನಿರ್ದೇಶಕರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಂಕರ ಮಠದಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ಇತ್ತೀಚೆಗೆ ಚುನಾವಣೆ ನಡೆಯಿತು.

ನಿರ್ದೇಶಕರಾಗಿ ಅನೂಪ್ ಹಾರನಹಳ್ಳಿ, ಗಣೇಶ್ ಎಲ್., ಗೋಪಿನಾಥ್‌ರಾವ್ ಎಚ್.ಎನ್., ವೇದವ್ಯಾಸ ಬಿ.ಎಸ್., ಕಿರಣ್ ನಾಡಿಗ್, ಲಕ್ಷ್ಮೀನಾರಾಯಣ ಎಸ್., ರವಿಶಂಕರ್ ಬಿ.ಎಸ್., ಶ್ರೀನಿವಾಸ ರಾವ್ ಎಸ್.ಎಸ್., ರವಿಕುಮಾರ್ ಎಸ್., ಗೋಪಿನಾಥ್ ಎಚ್.ಆರ್., ಮುರಳೀಧರನ್ ವಿ.ಎ., ರಘು ಎಸ್. ಮತ್ತು ವೆಂಕಟೇಶ್ ಕೆ.ಎನ್. (ಸಾಮಾನ್ಯ ಕ್ಷೇತ್ರ), ನಳಿನಿ ಶಿವಶಂಕರ್ ಮತ್ತು ಮಮತಾ ಎ.ಎಸ್. (ಮಹಿಳಾ ಮೀಸಲು) ಆಯ್ಕೆಯಾಗಿದ್ದಾರೆ.

ಈ ನಿರ್ದೇಶಕರ ಅಧಿಕಾರಾವಧಿ ಐದು ವರ್ಷ ಇರಲಿದೆ ಎಂದು ರಿಟರ್ನಿಂಗ್ ಅಧಿಕಾರಿ ಎನ್. ಚಂದ್ರಶೇಖರ್ ತಿಳಿಸಿದ್ದಾರೆ.

ನಿಧನ ವಾರ್ತೆ

ಎಂ.ಎಸ್. ಶ್ರೀಹರಿ



ಬೆಂಗಳೂರು: ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ಕೆ.ಆರ್. ರಸ್ತೆಯ ನಿವಾಸಿ ಎಂ.ಎಸ್. ಶ್ರೀಹರಿ (93) ಬುಧವಾರ ನಿಧನರಾದರು.

ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಶ್ರೀಹರಿ ಅವರು ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. ವಿವಿಧ ಭಾರತಿಯಲ್ಲಿ ಮುಖ್ಯ ಅಧಿಕಾರಿಯಾಗಿ, ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ, ನಿವೃತ್ತಿಯಾಗಿದ್ದರು.

ಗುರುವಾರ ಮಧ್ಯಾಹ್ನ 3ಗಂಟೆಗೆ ಬನಶಂಕರಿಯ ಚಿತಾಗಾರದಲ್ಲಿ ಶ್ರೀಹರಿ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪ್ರಜಾವಾಣಿ ಗುರುವಾರ, 16 ಜನವರಿ 2025

ಸ್ಪರ್ಧಾ ವಾಣಿ

4

ವಿಶ್ವ ಪರಂಪರೆ ಕಡಲ ತಾಣದ ಜೀವಿಗಳು ಅಳಿವಿನಂಚಿನಲ್ಲಿ!

ಚನ್ನಬಸಪ್ಪ ರೊಟ್ಟಿ

ತಾಪಮಾನ ಏರಿಕೆ, ಪರಿಸರ ಮಾಲಿನ್ಯ ಹಾಗೂ ಹವಾಮಾನ ಬದಲಾವಣೆಗಳಿಂದ ಸಮುದ್ರ ಪರಿಸರ ವ್ಯವಸ್ಥೆಗಳು ಶಿಥಿಲಗೊಳ್ಳುತ್ತಿದ್ದು, ವಿಶ್ವ ಪರಂಪರೆಯ ಮಾನ್ಯತೆ ಪಡೆದಿರುವ ಕಡಲ ತಾಣಗಳಲ್ಲಿನ ಶೇ 20ರಷ್ಟು ಪ್ರಜಾತಿಗಳು ಅಳಿವಿನಂಚಿಗೆ ತಲುಪಿವೆ ಎಂದು ಯುನೆಸ್ಕೊ ವರದಿ ಕಳವಳ ವ್ಯಕ್ತಪಡಿಸಿದೆ.

ವಿಶ್ವ ಪರಂಪರೆಯ ಕಡಲ ತಾಣಗಳೆಂದು ಗುರುತಿಸಿರುವ ಭಾರತದ 'ಸುಂದರಬನ್ಸ್' ಪ್ರದೇಶದ ಶೇ 20ರಷ್ಟು, 'ಬೆಲೀಜ್' ಹವಳದ ದಿಬ್ಬ ಪ್ರದೇಶದ ಶೇ 53ರಷ್ಟು, ಕೊಯಿಬಾ ರಾಷ್ಟ್ರೀಯ ಉದ್ಯಾನದ ಶೇ 26.6ರಷ್ಟು ಹಾಗೂ ಎವರ್‌ಗ್ಲೇಡ್ಸ್ ರಕ್ಷಿತ ಪ್ರದೇಶದ ಶೇ 24.4ರಷ್ಟು ಸಾಗರ ಪ್ರಭೇದಗಳು ಅಸ್ತಿತ್ವದ ಅಪಾಯವನ್ನು ಎದುರಿಸುತ್ತಿವೆ.

ಒಟ್ಟು 4,406 ಸಮುದ್ರ ಪ್ರಭೇದಗಳ ಪೈಕಿ 881 ಪ್ರಭೇದಗಳು ಅಪಾಯವನ್ನು ಎದುರಿಸುತ್ತಿದ್ದು, ಸಮುದ್ರದ ನೀರಿನಲ್ಲಿ ತಾಪಮಾನ ಹೆಚ್ಚಿದ್ದರಿಂದ ಬಹುತೇಕ ಸಮುದ್ರ ಜೀವಿಗಳ ಸಂತಾನೋತ್ಪತ್ತಿ ಸಾಮರ್ಥ್ಯದಲ್ಲಿ ಕುಸಿತ ಕಂಡುಬಂದಿದೆ. ಕೆಲ ಪ್ರಭೇದಗಳು ಅನಾರೋಗ್ಯಕ್ಕೆ ಈಡಾಗುತ್ತಿವೆ. ಇನ್ನೂ ಕೆಲ ಪ್ರಭೇದಗಳು ಬೇರೆಡೆ ವಲಸೆ ಹೋಗಿವೆ. ಬೆರಳೆಣಿಕೆಯಷ್ಟು ಪ್ರಭೇದಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡಿವೆ.

ಜಾಗತಿಕ ಸಮುದ್ರದ ಮೇಲ್ಮೈ ತಾಪಮಾನ 1884ಕ್ಕೆ ಹೋಲಿಸಿದರೆ 2024ರಲ್ಲಿ ಸರಾಸರಿ 1 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಹಸಿರುಮನೆ ಅನಿಲಗಳ ಹೊರಸೂಸುವಿಕೆ ಈಗಿನ ಪ್ರಮಾಣದಲ್ಲಿಯೇ ಮುಂದುವರಿದರೆ ಈ ಶತಮಾನದ ಅಂತ್ಯದ ವೇಳೆಗೆ ಸಮುದ್ರದ ಮೇಲ್ಮೈ ತಾಪಮಾನ ಸರಾಸರಿ 4.4 ಡಿಗ್ರಿ ಸೆಲ್ಸಿಯಸ್ ಏರಿಕೆ ಆಗಲಿದ್ದು, ಇಡೀ ಸಮುದ್ರ ಪ್ರಜಾತಿಗಳ ಅಸ್ತಿತ್ವಕ್ಕೆ ಕುತ್ತು ತರಲಿದೆ. ಬೆಚ್ಚಗಿನ ನೀರಿನಲ್ಲಿ ಆಮ್ಲಜನಕ ಮತ್ತು ಪೋಷಕಾಂಶಗಳ ಪರಿಚಲನೆ ಕುಸಿಯುವುದರಿಂದ ಸಮುದ್ರ ಜೀವಿಗಳು ಬದುಕುವುದು ಕಷ್ಟವಾಗುತ್ತಿದೆ.

ಎವರ್‌ಗ್ಲೇಡ್ಸ್' ರಕ್ಷಿತ ಪ್ರದೇಶ

ಅಮೆರಿಕದಲ್ಲಿರುವ 'ಎವರ್‌ಗ್ಲೇಡ್ಸ್ ಹೆಡ್‌ವಾಟರ್ಸ್' ರಾಷ್ಟ್ರೀಯ ವನ್ಯಜೀವಿ ಆಶ್ರಯ ತಾಣ ಮತ್ತು ಸಂರಕ್ಷಣಾ ಪ್ರದೇಶವನ್ನು ಯುನೈಟೆಡ್ ಸ್ಟೇಟ್ಸ್ ನ್ಯಾಷನಲ್ ವೈಲ್ಡ್‌ಲೈಫ್ ರೆಫ್ಯೂಜ್ (NWR) ವ್ಯವಸ್ಥೆಯಡಿ 2012ರಲ್ಲಿ 9000 ಎಕರೆ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿದೆ. ಹಾರ್ಡೀ ಕೌಂಟಿ, ಹೈಲ್ಯಾಂಡ್ಸ್ ಕೌಂಟಿ, ಮತ್ತು ಪೋಲ್ಕ್ ಕೌಂಟಿ, ಏವನ್ ಪಾರ್ಕ್ ಲೇಕ್ಸ್, ಫ್ಲೋರಿಡಾ ಪ್ರಾಂತಗಳ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಈ ರಕ್ಷಿತಾರಣ್ಯ ಪ್ರಸ್ತುತ 'IUCN ವರ್ಗ V' ಸಂರಕ್ಷಣಾ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ.

ಈ ಭಾಗದಲ್ಲಿರುವ ಸಾಗರ ಪ್ರಭೇದಗಳಾದ ಕೆರಿಬಿಯನ್ ರೀಫ್ ಶಾರ್ಕ್, ಪಿಗ್ಮಿ ಫ್ರಿಂಜ್ಟ್ರೀ, ಸ್ಯಾಂಡ್ ಸ್ಕಿಂಕ್, ಈಸ್ಟರ್ನ್ ಇಂಡಿಗೊ ಸ್ನೇಕ್, ಸ್ಯಾಂಡ್ ಪೈನ್, ಸ್ಕ್ರಬ್ ಬೇರ್‌ಗ್ರಾಸ್, ಸ್ಕ್ರಬ್ ಬ್ಲೇಜಿಂಗ್ ಸ್ಟಾರ್ ಅಳಿವಿನಂಚಿಗೆ ತಲುಪಿವೆ. ಅಲ್ಲದೇ, ಕಪ್ಪು ಚಿರತೆ, ಕಪ್ಪು ಕರಡಿಗಳು ಹಾಗೂ ಮೀನು ಪ್ರಭೇದಗಳಾದ ಜೂಜೂಬಿ, ಕ್ಲೆರಿಕ್ ಓಕ್ ಸ್ಕ್ರಬ್, ಮಿರ್ಟ್ಲ್ ಓಕ್, ಚಾಪ್ಮನ್ ಓಕ್, ಸ್ಯಾಂಡ್-ಲೈವ್ ಓಕ್, ಸ್ಕ್ರಬ್ ಹೋಲಿ, ಸ್ಕ್ರಬ್ ಪ್ಲಮ್, ಹಿಕ್ಕರಿ, ರೋಸ್ಮರಿ, ಪಲ್ಮೆಟ್ಟೊ, ಝಿಫಸ್, ಫ್ರೆಶ್‌ವಾಟರ್ ಮಾರ್ಷ್, ವೆಟ್ ಪ್ರೈರೀ, ಪಿಕರೆಲ್ ವೀಡ್, ಗರಗಸ ಮೀನು, ಮೇಡನ್‌ಕೇನ್, ಬಾಣದ ಮೂತಿಯ ಮೀನು, ಕ್ಯಾಟೈಲ್, ಸ್ಪೈಕ್ ರಶ್, ಬುಲ್ ರಶ್, ವೈಟ್ ವಾಟರ್ ಲಿಲಿ, ವಾಟರ್ ಶೀಲ್ಡ್ ಭವಿಷ್ಯದಲ್ಲಿ ಅಪಾಯಕ್ಕೆ ಸಿಲುಕಲಿವೆ.




'ಬೆಲೀಜ್' ಹವಳದ ದಿಬ್ಬ

ಮೆಸೊ ಅಮೆರಿಕನ್ ಬ್ಯಾರಿಯರ್ ರೀಫ್ ಸಿಸ್ಟಮ್‌ನ ಭಾಗವಾಗಿರುವ ಮೆಕ್ಸಿಕೊದ ಯುಕಾಟಾನ್ ಪೆನಿನ್ಸುಲಾದ ಈಶಾನ್ಯ ತುದಿಯಲ್ಲಿರುವ ಕ್ಯಾನ್‌ಕನ್‌ನಿಂದ ಗ್ವಾಟೆಮಾಲಾವರೆಗೆ ಹಬ್ಬಿರುವ 'ಬೆಲೀಜ್' ಹವಳದ ಬಂಡೆಗಳ ಸರಣಿಯಾಗಿದ್ದು, ಉತ್ತರದಲ್ಲಿ ಸರಿಸುಮಾರು 300 ಮೀಟರ್ (1,000 ಅಡಿ) ಸಮುದ್ರತೀರದಲ್ಲಿ ಮತ್ತು ಭೂವ್ಯಾಪ್ತಿಯಲ್ಲಿ ದಕ್ಷಿಣದಲ್ಲಿ 40 ಕಿ.ಮೀ. ದೂರ ವ್ಯಾಪಿಸಿದೆ. 900 ಕಿ.ಮೀ. ಉದ್ದದ ಇದು 'ಆಸ್ಟ್ರೇಲಿಯಾದ ಗ್ರೇಟ್ ಬ್ಯಾರಿಯರ್ ರೀಫ್' ನಂತರ ವಿಶ್ವದ ಎರಡನೇ ಅತಿದೊಡ್ಡ ಹವಳದ ಬಂಡೆ ವ್ಯವಸ್ಥೆ ಎಂಬ ಪ್ರಸಿದ್ಧಿ ಪಡೆದಿದೆ. ಈ ರಕ್ಷಿತ ಪ್ರದೇಶದಲ್ಲಿನ 'ಅಹೆರ್ಮಾಟಿಪಿಕ್' ಮತ್ತು 'ಹೆರ್ಮಾಟಿಪಿಕ್' ಹವಳಗಳು ಹಾಗೂ ವಿವಿಧ ಪ್ರಭೇದದ ಪಾಚಿಗಳು, ಶಿಲಾವಲ್ಕಗಳು ಉಷ್ಣತೆಯ ಏರಿಕೆಯಿಂದ ಬಿಳಿಚಿಕೊಂಡಿದ್ದು, ಅಳಿವಿನಂಚಿಗೆ ತಲುಪಿವೆ. ಸುರಕ್ಷತೆ ಕ್ರಮ ವಹಿಸದಿದ್ದರೆ ಈ ಹವಳದ ದಿಬ್ಬ ಹಾಗೂ ಅದನ್ನು ಅವಲಂಬಿಸಿದ ಜೀವವೈವಿಧ್ಯ 2100ರ ಹೊತ್ತಿಗೆ ಸಂಪೂರ್ಣ ನಾಶವಾಗಲಿದೆ. ಈಗಾಗಲೇ ಈ ಭಾಗದಲ್ಲಿರುವ 'ಅಟ್ಲಾಂಟಿಕ್ ಬಾಟಲ್‌ನೋಸ್ ಡಾಲ್ಫಿನ್' ಅಳಿವಿನಂಚಿಗೆ ತಲುಪಿದೆ.

'ಕೊಯಿಬಾ' ರಾಷ್ಟ್ರೀಯ ಉದ್ಯಾನ

ಪನಾಮದ ಅತಿದೊಡ್ಡ ದ್ವೀಪ 'ಕೊಯಿಬಾ' ವಿಶಾಲವಾದ ಸಾಗರ ಉದ್ಯಾನವನ್ನು ಒಳಗೊಂಡಿದೆ. ಈ ಉದ್ಯಾನದ ಒಟ್ಟು 2,70,125 ಹೆಕ್ಟೇರ್ ವಿಸ್ತರಣೆಯ ಪೈಕಿ 2,16,543 ಹೆಕ್ಟೇರ್ ಪ್ರದೇಶ ಸಮುದ್ರದ ಅಡಿಯಲ್ಲಿದೆ. ಈ ದ್ವೀಪ ಉತ್ತರದಿಂದ ದಕ್ಷಿಣಕ್ಕೆ 20 ಮೈಲು ಮತ್ತು ಪೂರ್ವದಿಂದ ಪಶ್ಚಿಮಕ್ಕೆ 10 ಮೈಲು ವ್ಯಾಪ್ತಿಯನ್ನು ಒಳಗೊಂಡಿದ್ದು, ಒಟ್ಟಾರೆ 191 ಚದರ ಮೈಲಿ (494 ಚ.ಕಿ.ಮೀ.) ವಿಸ್ತೀರ್ಣ ಹೊಂದಿದೆ. ಈ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ 147 ಪಕ್ಷಿಗಳು, 36 ಸಸ್ತನಿಗಳು ಮತ್ತು 39 ಉಭಯಚರಗಳು ಮತ್ತು ಸರಿಸೃಪಗಳು ನೆಲೆಸಿವೆ. ಇದನ್ನು 2005ರಲ್ಲಿ ವಿಶ್ವ ಪರಂಪರೆಯ ತಾಣ ಎಂದು ಘೋಷಿಸಲಾಗಿದೆ. ಇಲ್ಲಿನ ಅಪರೂಪದ 'ಹಂಪ್‌ಬ್ಯಾಕ್' ತಿಮಿಂಗಿಲಗಳ ಅಸ್ತಿತ್ವ ಅಪಾಯದಂಚಿನಲ್ಲಿದೆ.



'ಸುಂದರಬನ್ಸ್' ಪ್ರಭೇದಗಳಿಗೂ ಕುತ್ತು!

ಭಾರತದ ಪಶ್ಚಿಮ ಬಂಗಾಳ ಹಾಗೂ ಬಾಂಗ್ಲಾ ದೇಶದಲ್ಲಿ ಹರಡಿಕೊಂಡಿರುವ 'ಮ್ಯಾಂಗ್ರೋವ್' (ಕಾಂಡ್ಲಾವನ) ಪರಿಸರ ವ್ಯವಸ್ಥೆಯನ್ನು 'ಸುಂದರಬನ್ಸ್' ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿನ ನದಿಮುಖಜ ಪ್ರದೇಶದ ಮೊಸಳೆಗಳು, ನೀರು ಹಲ್ಲಿಗಳು, ಗಂಗಾ ಜಲಾನಯನ ಪ್ರದೇಶದಲ್ಲಿನ ಡಾಲ್ಫಿನ್‌ಗಳು ಮತ್ತು ಆಲಿವ್ ರಿಡ್ಲಿ ಆಮೆಗಳ ಅಸ್ತಿತ್ವಕ್ಕೆ ಉಷ್ಣತೆಯ ಏರಿಕೆಯಿಂದ ಕುತ್ತು ಒದಗಿಬಂದಿದೆ.

ಸುಂದರಬನ್ಸ್ ಪ್ರದೇಶ 6000 ಚ.ಕಿ.ಮೀ. ವಿಸ್ತಾರ ಹೊಂದಿದ್ದು, ಪ್ರಪಂಚದಲ್ಲೇ ಅತಿ ದೊಡ್ಡ 'ಮ್ಯಾಂಗ್ರೋವ್' ಕಾಡು ಎನಿಸಿದೆ. ಗಂಗಾ, ಬ್ರಹ್ಮಪುತ್ರ ಮತ್ತು ಮೇಘನಾ ನದಿಗಳ ಮುಖಜ ಭೂಮಿಯಲ್ಲಿ ಈ ಕಾಡುಗಳು ವ್ಯಾಪಿಸಿವೆ.

ಭಾರತದ ಮ್ಯಾಂಗ್ರೋವ್ ಕಾಡುಗಳನ್ನು 1987ರಲ್ಲಿ ಮತ್ತು ಬಾಂಗ್ಲಾದೇಶದ ಮ್ಯಾಂಗ್ರೋವ್ ಕಾಡುಗಳನ್ನು 1997ರಲ್ಲಿ ಯುನೆಸ್ಕೊ ವಿಶ್ವ ಪರಂಪರೆಯ ತಾಣಗಳೆಂದು ಗುರುತಿಸಲಾಗಿದೆ. ಜನವರಿ 2019ರಲ್ಲಿ 'ರಾಮ್‌ಸರ್ ಕನ್ವೆನ್ಷನ್' ಅಡಿಯಲ್ಲಿ 'ಸುಂದರಬನ್ಸ್' ಅನ್ನು 'ಅಂತರರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ತೇವಭೂಮಿ' ಎಂದು ಗುರುತಿಸಲಾಗಿದೆ. ಇಲ್ಲಿರುವ 'ರಾಯಲ್ ಬೆಂಗಾಲ್ ಟೈಗರ್'ಗಳು ಪರಿಸರ ವ್ಯವಸ್ಥೆಯ ಸೂಕ್ಷ್ಮ ಸಮತೋಲನವನ್ನು ನಿರ್ವಹಿಸುವ ಅಗ್ರ ಪರಭಕ್ಷಕಗಳಾಗಿದ್ದು, 'ಭಾರತದ ರಾಷ್ಟ್ರೀಯ ಪ್ರಾಣಿ' ಎಂಬ ಅಧಿಕೃತ ಸ್ಥಾನಮಾನ ಪಡೆದಿವೆ. 2011ರಲ್ಲಿ ಭಾರತ ಮತ್ತು ಬಾಂಗ್ಲಾದೇಶ ಸುಂದರಬನ್ಸ್ ಸಂರಕ್ಷಣೆ ಕುರಿತು ಒಪ್ಪಂದ ಮಾಡಿಕೊಂಡಿವೆ. ಸುಂದರಬನ್ಸ್ ಒಂದು ಜೀವಗೋಳ ಮೀಸಲು (BR) ಆಗಿದ್ದು, ಇಲ್ಲಿ ಭಾರತದ ವ್ಯಾಪ್ತಿಗೆ ಒಳಪಟ್ಟಂತೆ ಒಂದು ರಾಷ್ಟ್ರೀಯ ಉದ್ಯಾನ ಮತ್ತು ಮೂರು ವನ್ಯಜೀವಿ ಅಭಯಾರಣ್ಯ ಹಾಗೂ ಬಾಂಗ್ಲಾ ದೇಶದ ವ್ಯಾಪ್ತಿಗೊಳಪಟ್ಟಂತೆ ಒಂದು ಮೀಸಲು ಅರಣ್ಯಗಳಿವೆ.

'ಮ್ಯಾಂಗ್ರೋವ್' ಕಾಡುಗಳೆಂದರೆ...

'ಮ್ಯಾಂಗ್ರೋವ್' (ಕಾಂಡ್ಲಾವನ) ಸಸ್ಯವರ್ಗ ಅತಿ ಹೆಚ್ಚು ಲವಣ (ಸೋಡಿಯಂ ಕ್ಲೋರೈಡ್) ಇರುವ ಜೌಗುಪ್ರದೇಶಗಳಲ್ಲಿ ಮಾತ್ರ ಬೆಳೆಯುವ ವಿಶಿಷ್ಟ ಪ್ರಭೇದವಾಗಿದೆ. ಭಾರತದಲ್ಲಿ ಪಶ್ಚಿಮ ಬಂಗಾಳ, ಮುಂಬಯಿಯಿಂದ ಕೇರಳದವರೆಗಿನ ಕರಾವಳಿಯ ಕೆಲ ಭಾಗಗಳಲ್ಲಿ, ತಮಿಳುನಾಡಿನ ಎನ್ನೋರ್ ಮತ್ತು ಪಿಚಾವರಂ ಕರಾವಳಿಯಲ್ಲಿ, ಗೋದಾವರಿ ನದಿ ಮುಖಜಭೂಮಿಯಲ್ಲಿ, ಅಂಡಮಾನ್-ನಿಕೋಬಾರ್ ದ್ವೀಪಗಳಲ್ಲಿ ಹಾಗೂ ಮಯನ್ಮಾರ್‌ನ ನದಿಮುಖಜಗಳಲ್ಲಿ ಈ ಬಗೆಯ ಕಾಡುಗಳು ಕಂಡುಬರುತ್ತವೆ. ಈ ಸಸ್ಯವರ್ಗಕ್ಕೆ ಉಪ್ಪು ನೀರಿನ ಸಸ್ಯಗಳು ಅಥವಾ 'ಹಾಲೊಫೈಟ್ಸ್' ಎಂಬ ವೈಜ್ಞಾನಿಕ ಹೆಸರಿದೆ.

ಮ್ಯಾಂಗ್ರೋವ್ ಪರಿಸರ ವ್ಯವಸ್ಥೆಯು ಉಷ್ಣವಲಯ ಮತ್ತು ಉಪೋಷ್ಣವಲಯದ ಪ್ರದೇಶಗಳಲ್ಲಿ ಭೂಮಿ ಮತ್ತು ಸಮುದ್ರದ ನಡುವಿನ 'ಇಕೋಟೋನ್' ಆಗಿದೆ. 'ಇಕೋಟೋನ್' ಎಂದರೆ, ಎರಡು ಜೈವಿಕ ಸಮುದಾಯಗಳ ನಡುವಿನ ಪರಿವರ್ತನೆಯ ಸಸ್ಯವರ್ಗದ ಪ್ರದೇಶ. ಇದನ್ನು ತೀಕ್ಷ್ಣ ಜೈವಿಕ ಗಡಿರೇಖೆ' ಎಂದೂ ಗುರುತಿಸಲಾಗುತ್ತದೆ. ಈ ಸ್ಥಳದಲ್ಲಿ ಎರಡು ಪ್ರತ್ಯೇಕ ಪ್ರಭೇದಗಳು ಸಂಧಿಸುತ್ತವೆ ಹಾಗೂ ಪರಸ್ಪರ ಸಂಯೋಜನೆಗೆ ಒಳಪಡುತ್ತವೆ. 'ಮ್ಯಾಂಗ್ರೋವ್ ಪರಿಸರ' ಸಿಹಿನೀರು ಮತ್ತು ಉಪ್ಪು ನೀರಿನ ಪ್ರದೇಶಗಳ ಜೀವವೈವಿಧ್ಯದ ಸಂಯೋಜನೆಯಾಗಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಇತ್ತೀಚೆಗೆ ಸಾಲಮನ್ ದ್ವೀಪಗಳು ಕೆಳಗಿನ ಯಾವ ರಾಷ್ಟ್ರದೊಂದಿಗೆ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿದೆ?

ಎ. ಚೀನಾ. ಬಿ. ಜಪಾನ್.
ಸಿ. ಉತ್ತರ ಕೊರಿಯಾ. ಡಿ. ದಕ್ಷಿಣ ಕೊರಿಯಾ.

ಉತ್ತರ : ಎ

2. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಕೆಳಗಿನ ಯಾವ ಸ್ಥಾನಮಾನವನ್ನು ಕಲ್ಪಿಸಲಾಗಿದೆ?

ಎ. ಶಾಸನೀಯ ಸ್ಥಾನಮಾನ.
ಬಿ. ಸಂವಿಧಾನಾತ್ಮಕ ಸ್ಥಾನಮಾನ.
ಸಿ. ಶಾಸನೀಯೇತರ ಸ್ಥಾನಮಾನ.
ಡಿ. ನಿಗಮದ ಸ್ಥಾನಮಾನ.

ಉತ್ತರ : ಎ

3. ರಾಷ್ಟ್ರೀಯ ಮಹಿಳಾ ಆಯೋಗವು ಕೆಳಗಿನ ಯಾವ ಕಾರ್ಯಗಳನ್ನು ನಿರ್ವಹಿಸುತ್ತದೆ?

1. ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದ ಅಧ್ಯಯನ ಚಟುವಟಿಕೆಗಳು.
2. ಮಹಿಳೆಯರ ಸಬಲೀಕರಣ.
3. ಮಹಿಳೆಯರಿಗೆ ಕಾನೂನಿನ ನೆರವು.
4. ಉದ್ಯೋಗಾವಕಾಶಗಳ ಸೃಷ್ಟಿ ಸಂಬಂಧಿತ ಚಟುವಟಿಕೆಗಳು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. ಒಂದು ಕಾರ್ಯ ಸರಿಯಾಗಿದೆ.
ಬಿ. ಎರಡು ಕಾರ್ಯಗಳು ಸರಿಯಾಗಿದೆ.
ಸಿ. ಮೂರು ಕಾರ್ಯಗಳು ಸರಿಯಾಗಿದೆ.
ಡಿ. ನಾಲ್ಕು ಕಾರ್ಯಗಳು ಸರಿಯಾಗಿವೆ.

ಉತ್ತರ : ಡಿ

4. ಇತ್ತೀಚೆಗೆ ಕೆಳಗಿನ ಯಾವ ಒಕ್ಕೂಟ ಶ್ರೀಲಂಕಾ ಅಧ್ಯಕ್ಷರ ಪ್ರಸ್ತಾಪವನ್ನು ತಿರಸ್ಕರಿಸಿದೆ?

ಎ. ತಮಿಳು ರಾಷ್ಟ್ರೀಯ ಒಕ್ಕೂಟ.
ಬಿ. ತಮಿಳು ಪ್ರಾದೇಶಿಕ ಒಕ್ಕೂಟ.
ಸಿ. ತಮಿಳು ರಾಷ್ಟ್ರೀಯ ಸ್ವಗೌರವ ಒಕ್ಕೂಟ.
ಡಿ. ತಮಿಳು ಅಂತರರಾಷ್ಟ್ರೀಯ ಒಕ್ಕೂಟ.

ಉತ್ತರ : ಎ

5. ಭಾರತ-ಶ್ರೀಲಂಕಾ-1987ರ ಒಪ್ಪಂದದ ನಂತರ ಕೆಳಗಿನ ಯಾವ ತಿದ್ದುಪಡಿಗಳನ್ನು ಶ್ರೀಲಂಕಾದ ಸಂವಿಧಾನಕ್ಕೆ ತರಲಾಯಿತು?

ಎ. 11ನೇ ತಿದ್ದುಪಡಿ.
ಬಿ. 13ನೇ ತಿದ್ದುಪಡಿ.
ಸಿ. 15ನೇ ತಿದ್ದುಪಡಿ.
ಡಿ.18ನೇ ತಿದ್ದುಪಡಿ.

ಉತ್ತರ : ಬಿ

6. ಪ್ರಸ್ತುತ ವರ್ಷದ ಆವೃತ್ತಿಯ ಡುರಾಂಡ್ ಕಪ್ ಕ್ರೀಡಾಕೂಟದಲ್ಲಿ ಕೆಳಗಿನ ಯಾವ ರಾಷ್ಟ್ರಗಳ ತಂಡಗಳು ಭಾಗವಹಿಸಲಿದೆ?

1. ಬಾಂಗ್ಲಾದೇಶ.
2. ಪಾಕಿಸ್ತಾನ.
3. ಭೂತಾನ್.
4. ನೇಪಾಳ.
5. ಶ್ರೀಲಂಕಾ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 3 ಮತ್ತು 4 ಬಿ. 1, 2, 3 ಮತ್ತು 4
ಸಿ. 2 ಮತ್ತು 5 ಡಿ. 3 ಮತ್ತು 5

ಉತ್ತರ : ಎ

7. ಜಂಜತಿಯ ಖೇಲ್ ಮಹೋತ್ಸವದಲ್ಲಿ ಕೆಳಗಿನ ಯಾವ ರಾಜ್ಯಗಳು ಸಮಗ್ರ ಅಂಕಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ಪಡೆದುಕೊಂಡಿವೆ?

1. ಒಡಿಸ್ಸಾ.
2. ತಮಿಳುನಾಡು.
3. ಕರ್ನಾಟಕ.
4. ಗುಜರಾತ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

24. What qualities of Wangjia do you like?
Ans:- We like Wangjia the most in the story. He was so young to take such a risk. We like his selfless hard work. He did a great task for the benefit of his people: He faced many hardships during his task. He didn't care his life also. To work for others is really a good job, everyone will appreciate his work.

18. What were the opinions of the Buddha and Avvai regarding the caste divisions?
Ans: Buddha never believed caste divisions. Fie only believed In the divisions between noble and ignoble and wholesome and unwholesome. According to Tamil poetess. there are only two castes In the world namely. the charitable who give and are superior and the misers who do not and are, therefore Inferior.

25. How did Swami become a hero overnight though he was not courageous?
Ans:- Whenever Swami's father, cook and a servant caught the burglar, the next day congratulations were showered on Swami. though he was not so courageous, the timely spirit made him as hero. Swami bite the burglar with all his strength to escape from him. His timely action made him as hero.

26. How does the poet Marina de Bellagenta express the feelings of the land?
Ans:- The Poetess herself being the earth and says what are the things she had to tolerate and challenged the man that he cannot put a fence around the planet earth (her). Earth as a whole planet is very big and the man cannot put a fence and it is impossible for him. She can wait because she is the mother (land.)

VI. Answer the following questions in 2 or 3 sentences each :

27. In the darkness swamy felt something was moving down. What did he do then?
Ans: Swamy saw something was moving down, he thought that his end had come, why should he wait? As it came nearer, he hugged it and bite it with all his strength like a mortal weapons to escape from it.

28. Satish saw a bird through the window. How did the bird appear to him?
Ans : Satish saw a bird through the window, it was a rare bird and he had never seen that type of bird before. That bird had a longish tail and black crest. It had restless energy. Its eyes always kept moving here and there and bird was ready for flight at any moment. So he was attracted by it.

29. Smitha, on seeing the newspaper, almost shouted with excitement why she did react so?
Ans : Smitha read the news that Pandit Ravi Shankar will give a concert, at shanmukha kannada Auditorium next day. She and her brother was fan Ravishnkar, so she shouted with excitement because it was the life time importunately for them.

30. What reward does a scientist get from the study of science? How is it different from those of lawyers and business people in this respect?
Ans : Science is an exciting adventure where major reward comes from the discovery itself. Scientist get freedom, camaraderie and independence. The honours and promotions will depend on himself more than in other occupations like layers and business people.

31. What is uncommon about the desire or the quality of the grand mother? How does the poet term this uncommon quality or desire?
Ans : Grandma had the desire of climbing the tree. It is uncommon or unusual because even at the age of 62 she climbed a tree. The poet termed this uncommon quality as genius.

32. Give at least two descriptions of the jazz player to show that he is sad while not playing the instrument.
Ans : When the Jazz Player was not playing the instruments he was sad because he lost his on tersest in the life. He didn't care to wore the term dress. He had more pain that could be seen in each wrinkle of his face.

33. The sailors in the 'Ballad of the Tempest' shuddered in silence. When did they do so ?
Ans:- When the ship was to break apart by the gust of wind. The sailors heard the rattling sound of the trumpet and some one thundered to cut away the most. All sailors shuddered in silence out of fear.

34. The following paragraph has *two* errors. Edit the paragraph and rewrite it in the answer-book :
(*) Dr. Sarabhai realise the importance of industries in India. He set up Sarabhai chemicals, a pharmaceutical industri at Ahmedabad.
a) Spelling mistake to be corrected
b) Verbal mistake to be corrected.
Ans. : a) industry
b) realised

VII. Read the following extracts and answer the questions that follow:

34. 'Friend', he said, 'I do not like to have you speak to me in that manner'.
a. Who is the speaker?
Ans:- Don Anselmo is the speaker.
b. Who did he address as friend?
Ans:- He addressed the author (mediator) as a friend.
c. Why didn't he like the manner of speaking?
Ans:- The authors way by talking and the proposal made by him was not liked because Don Anselmo was a man of principles. He didn't agree to take more money. The author's offer made him insult.

35. 'I've-I've.......... always wanted to hear him and see him ..... '
a. Who is 'I' here?

(Contd....)


ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ


II PUC -CHEMISTRY


REVISION : MODEL QUESTIONS

1) Among the following alkyl benzenes which one will not give the benzoic acid on oxidation with acidic $KMnO_4$ solution.

a) 

b) 

c) 

d) 

Ans:-b

2) An ambidentate ligand is ....

a) Cl^- b) CN^-
c) OH^- c) NO_2^+

Ans:-b

3)
The E° of Fe^{2+}/Fe, Zn^{2+}/Zn and Sn^{2+}/Sn are –0.44 V, –0.76 V and –0.14 V respectively. Which metal/s is/are act as sacrificial electrode to protect iron from rusting?

a) Both Zn and Sn b) Zn only
c) Sn Only d) neither Zn nor Sn.

Ans:-b

4) The chemical name of phosgene is ....

a) chromyl chloride b) triphenylphosphine
c) phosphorusoxychloride d) carbonyl chloride

Ans:-d

5) Aquatic species are more comfortable in cold water rather than in warm water. This is due to

a) solubility of oxygen is more in warm water.
b) solubility of oxygen is more in cold water.
c) solubility of gases increases with decrease of temperature.
d) both (b) and (c).

Ans:- d) both (b) and (c).

6) Which of the following cell was used in Apollo space programme?

a) Mercury cell b) Daniel cell
c) H_2–O_2 Fuel cell d) Dry cell

Ans:-C

7)Fill in the blanks by choosing the appropriate word from those given in the brackets: (phosgene, tin, hydrogen, molecularity, zinc, cellulose acetate)

16. The semi permeable membrane used in the reverse osmosis is ________________
Ans:- **cellulose acetate**

17. The number of molecules taking part in the elementary reaction is called ________
Ans:- **molecularity**

18. The non-transitional metal present in brass is ________
Ans:- **zinc**

19. The poisonous gas formed when chloroform is exposed to air and lightis ________
Ans:- **phosgene**

20. Solubility of ethylamine in water is due to formation of ________bonding with water
Ans:- **hydrogen**

I. Answer ALL of the following:-

1. Define the term 'Molarity'.
Ans:- Number of moles of solute in one dm^2 of solution is called molarity.

2. Mention the enthalpy of mixing ($\Delta_{mix}H$) value to form an ideal solution.
Ans:- The enthalpy of mixing (($\Delta_{mix}H$) value to form an ideal solution is Zero.

3. What is a secondary ccell?
Ans:- The cells which are recharged repeatedly are called secondary cell.

4. For the reaction $2HI \rightarrow H_2 + I_2$ write its molecularity.
Ans:- The molecularity of the reaction is 2.

5. Write the catalyst used in the decomposition of potassium chlorate to get potassium chloride and oxygen.
Ans:- Manganese dioxide.

6. Name the refining method used to produce semiconductors.
Ans:- Zone refining.

7. Give a reason for chemical inertness of Nobel gases.
Ans:- They have octate electronic configuration (ns^2np^6) in the valence shell.

8. $H_3C - Br + AgF \rightarrow H_3C - F + AgBr$. Name the reaction.
Ans:- Swart's reaction.

9. Mention the hybridized state of carbonyl carbon atom.
Ans:- sp^2 hybridized.

10. Which is the nitrogenous base present only in RNA but not in DNA?
Ans:- Uracil

II. Answer any five of the following:-

11. Aluminium crystallizes in an FCC structure. Atomic radius of the metal is 125pm. Calculate the edge length of unit cell of the metal.
Ans:- $a = 2\sqrt{2} \times r = 2\sqrt{2} \times 125 = 353.5$ pm

(Contd.....)

ವರೂರು ನವಗ್ರಹ ತೀರ್ಥಕ್ಷೇತ್ರ: ರಾಜ್ಯಪಾಲ, ಸಂತರು ಭಾಗಿ

ಪ್ರತಿಷ್ಠಾ ಮಹೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ತಾಲ್ಲೂಕಿನ ವರೂರಿನ ನವಗ್ರಹ ತೀರ್ಥ ಕ್ಷೇತ್ರದಲ್ಲಿ 405 ಅಡಿ ಎತ್ತರದ ಸುಮೇರು ಪರ್ವತ ಜಿನ ಬಿಂಬಗಳ ಪಂಚಕಲ್ಯಾಣಕ ಪ್ರತಿಷ್ಠಾ ಮಹೋತ್ಸವ, ನವ ತೀರ್ಥಂಕರರ ಮಹಾಮಸ್ತಕಾಭಿಷೇಕ ಕಾರ್ಯಕ್ರಮಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಬುಧವಾರ ಚಾಲನೆ ನೀಡಿದರು.

ಕಾರ್ಯಕ್ರಮದ ಪ್ರಯುಕ್ತ ಬೆಳಿಗ್ಗೆ ಧ್ವಜಾರೋಹಣ, ಜಿನ ಪುರಾತನ ವಿಗ್ರಹದ ಮೆರವಣಿಗೆ, ಮಹಾ ಮಂಡಲಾರಾಧನೆ ಮತ್ತು ಮಹಾಯಾಗ ಮಂಡಲ ವಿಧಾನ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ನಾನು ಜೈನ ಧರ್ಮೀಯ ಅಲ್ಲ. ಆದರೆ, ಸನಾತನ, ಜೈನ ಧರ್ಮದಿಂದ ಪ್ರೇರಣೆ ಪಡೆದಿದ್ದೇನೆ. ನನ್ನ ಇಬ್ಬರು ಮೊಮ್ಮಕ್ಕಳು ಜೈನ ಧರ್ಮದವರನ್ನು ವಿವಾಹವಾಗಿದ್ದಾರೆ. ನಾನು ಯಾವುದೇ ವ್ಯಸನ ಹೊಂದಿಲ್ಲ. ರಾಜ್ಯಪಾಲನಾಗಿ ಬಂದ ನಂತರ ರಾಜಭವನದಲ್ಲಿ ಮಾಂಸಾಹಾರ ನಿಲ್ಲಿಸಿದ್ದೇನೆ. ವಿದೇಶಗಳಿಂದ ಬರುವ ಅತಿಥಿಗಳಿಗೂ ಸಸ್ಯಾಹಾರ ಊಟ ನೀಡಲಾಗುತ್ತದೆ' ಎಂದರು.



ಹುಬ್ಬಳ್ಳಿ ತಾಲ್ಲೂಕಿನ ವರೂರಿನ ನವಗ್ರಹ ತೀರ್ಥಕ್ಷೇತ್ರದಲ್ಲಿ ಬುಧವಾರ ನಡೆದ ಪಂಚಕಲ್ಯಾಣಕ ಪ್ರತಿಷ್ಠಾ ಮಹೋತ್ಸವದಲ್ಲಿ ಕುಂಥು ಸಾಗರ ಮಹಾರಾಜರು ಮಾತನಾಡಿದರು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಆಚಾರ್ಯ ಗುಣಧರನಂದಿ ಮಹಾರಾಜರು ಹಾಜರಿದ್ದರು

'ನಾವು ಪ್ರಕೃತಿಯ ಪೂಜೆ ಮಾಡುತ್ತೇವೆ. ಪ್ರಸ್ತುತ ದಿನಗಳಲ್ಲಿ ಪರಿಸರದಲ್ಲಿ ಅಸಮತೋಲನ ಆಗುತ್ತಿದೆ. ಅದನ್ನು ಸರಿಪಡಿಸಲು ಜೈನ ಧರ್ಮದ ಸಿದ್ಧಾಂತ, ತತ್ವಗಳನ್ನು ಪಾಲಿಸಬೇಕು. ಪರಿಸರ ರಕ್ಷಣೆ ಎಲ್ಲರ ಕರ್ತವ್ಯ' ಎಂದು ಹೇಳಿದರು.

'ಆಚಾರ್ಯ ಗುಣಧರ ನಂದಿ ಮಹಾರಾಜರು 17ನೇ ವರ್ಷಕ್ಕೆ ದಿಗಂಬರ ಮುನಿ ದೀಕ್ಷೆ ಪಡೆದರು. 21ನೇ ವರ್ಷದಲ್ಲಿ ಆಚಾರ್ಯರಾದರು. ಅವರು ವರೂರಿನ 40 ಎಕರೆ ವಿಶಾಲ ಪ್ರದೇಶದಲ್ಲಿ ನವಗ್ರಹ ತೀರ್ಥ ಕ್ಷೇತ್ರ ಸ್ಥಾಪಿಸಿದ್ದಾರೆ. ಎಜಿಎಂ ಶಿಕ್ಷಣ ಸಂಸ್ಥೆ ಮೂಲಕ ಅವರು ಮಾನವೀಯ, ಸದ್ಗುಣ ಬಿತ್ತುವ, ಸಂಸ್ಕಾರ ನೀಡುವ ಕೆಲಸ ಮಾಡುತ್ತಿದ್ದಾರೆ' ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ಗುಣಧರ ನಂದಿ ಮಹಾರಾಜರ ಸಂಕಲ್ಪದಂತೆ ಸುಮೇರು ಪರ್ವತ ನಿರ್ಮಾಣ ಆಗಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಕ್ಷೇತ್ರದ ಅಭಿವೃದ್ಧಿಗೆ ನೆರವು ನೀಡಿದ್ದಾರೆ. ಶ್ರೀಗಳ ಆಶೀರ್ವಾದಿಂದ ನನಗೆ ಶಾಸಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ' ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ಶಾಸಕರಾದ ಪ್ರಸಾದ ಅಬ್ಬಯ್ಯ, ಎಂ.ಆರ್.ಪಾಟೀಲ, ನಟ ರಮೇಶ್ ಅರವಿಂದ್, ಕುಂಥು ಸಾಗರ ಮಹಾರಾಜರು ಸೇರಿದಂತೆ ವಿವಿಧ ಆಚಾರ್ಯರು ಮತ್ತು ಸಂತರು ಇದ್ದರು.

ನಟ 'ಸರಿಗಮ ವಿಜಿ' ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರಿಗಮ ವಿಜಿ' ಎಂದೇ ಪ್ರಸಿದ್ಧರಾಗಿದ್ದ ನಟ ವಿಜಯಕುಮಾರ್(76) ಅವರು ಬುಧವಾರ (ಜ.15) ಬೆಳಗ್ಗೆ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಬುಧವಾರ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಗುರುವಾರ(ಜ.16) ಅಂತ್ಯಕ್ರಿಯೆ ನಡೆಯಲಿದೆ.

ಶ್ವಾಸಕೋಶದ ಸೋಂಕು, ಕಿಡ್ನಿ ಹಾಗೂ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ವಾರದ ಹಿಂದೆ ದಾಖಲಿಸಲಾಗಿತ್ತು. ಬೆಂಗಳೂರಿನ ವಿಮಾನಪುರದಲ್ಲಿ(ಎಚ್‌ಎಎಲ್ ಪ್ರದೇಶ) ಜನಿಸಿದ ವಿಜಯಕುಮಾರ್, ನಾಟಕದ ನಂಟು ಇಟ್ಟುಕೊಂಡು ಸಿನಿಮಾಲೋಕ ಪ್ರವೇಶಿಸಿದರು. 'ಬೆಳುವಲದ ಮಡಿಲಲ್ಲಿ' ಚಿತ್ರದಲ್ಲಿ ಸಹ ನಿರ್ದೇಶಕನಾಗಿ, ನಟನಾಗಿ ಮೊದಲ ಹೆಜ್ಜೆ ಇಟ್ಟ ಅವರು, ಎನ್‌ಜಿಇಎಫ್ ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ದುಡಿದವರು. ಈ ಅವಧಿಯಲ್ಲೇ ಅವರು 'ಸಂಸಾರದಲ್ಲಿ ಸರಿಗಮ' ಎಂಬ ನಾಟಕ ಬರೆದರು. ಇದು ರವೀಂದ್ರ ಕಲಾಕ್ಷೇತ್ರ ಮತ್ತು ಪುರಭವನ ಸೇರಿದಂತೆ ಹೊರರಾಜ್ಯಗಳಲ್ಲೂ ಪ್ರದರ್ಶನ ಕಂಡಿದೆ. ಸಾವಿರಕ್ಕೂ ಅಧಿಕ ಪ್ರದರ್ಶನ ಕಂಡಿರುವ ಈ ನಾಟಕದ ಯಶಸ್ಸು ಅವರಿಗೆ 'ಸರಿಗಮ ವಿಜಿ' ಎಂಬ ಹೆಸರು ತಂದುಕೊಟ್ಟಿತು. ಪ್ರತಿ ಯುಗಾದಿಗೆ ಈ ನಾಟಕ ಪ್ರದರ್ಶನ ನೀಡುತ್ತಿದ್ದರು. ನಟಿಯರಾದ ಉಮಾಶ್ರೀ, ಭವ್ಯ, ರೇಖಾದಾಸ್, ಪ್ರಮೀಳಾ ಜೋಷಾಯ್ ಮುಂತಾದವರು ಈ ನಾಟಕದಲ್ಲಿ ನಟಿಸಿದ್ದರು.

ಶಂಕರ್‌ನಾಗ್, ಕಲ್ಯಾಣ್‌ಕುಮಾರ್, ಅನಂತನಾಗ್, ಅಂಬರೀಶ್, ವಿಷ್ಣುವರ್ಧನ್, ದೇವರಾಜ್, ಶಿವರಾಜ್ ಕುಮಾರ್, ಪುನೀತ್ ರಾಜ್‌ಕುಮಾರ್ ಮುಂತಾದ ನಟರ ಜೊತೆ ತೆರೆ ಹಂಚಿಕೊಂಡಿದ್ದಾರೆ. ಟೈಗರ್ ಪ್ರಭಾಕರ್ ಅವರ ಹೆಚ್ಚಿನ ಸಿನಿಮಾಗಳಲ್ಲಿ ನಟಿಸಿದ್ದರು. ಹಾಸ್ಯ ಪಾತ್ರಗಳಲ್ಲಿ ಮಿಂಚಿದ್ದರು. ಹಲವು ಧಾರಾವಾಹಿಗಳಲ್ಲೂ ಅವರು ಬಣ್ಣಹಚ್ಚಿದ್ದಾರೆ. 300ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಅವರು 80ಕ್ಕೂ ಅಧಿಕ ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ, ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ತೆಲುಗು ವಿಜ್ಞಾನ ಸಮಿತಿ ನೀಡುವ 'ಶ್ರೀಕೃಷ್ಣದೇವರಾಯ ಪುರಸ್ಕಾರ', ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ.



ಪಾಲಿಕೆ ಆಯುಕ್ತರ ಪಿಎ ಸೇರಿ ಐವರ ಸೆರೆ

ಕಲಬುರಗಿ: ನಕಲಿ ಸಹಿ ಮಾಡಿ ₹36 ಲಕ್ಷ ವಂಚನೆ ಆರೋಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ಮಹಾನಗರ ಪಾಲಿಕೆ ಚೆಕ್‌ಗಳನ್ನು ದುರುಪಯೋಗಪಡಿಸಿಕೊಂಡು, ಆಯುಕ್ತರ ಸಹಿ ನಕಲು ಮಾಡಿ ಪಾಲಿಕೆಗೆ ₹36.56 ಲಕ್ಷ ವಂಚಿಸಿದ್ದ ಪ್ರಕರಣದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ₹30.75 ಲಕ್ಷ ನಗದು ವಶಕ್ಕೆ ಪಡೆದಿದ್ದಾರೆ.

ಆಯುಕ್ತರ ಆಪ್ತ ಸಹಾಯಕರಾಗಿದ್ದ, ಪ್ರಥಮದರ್ಜೆ ಸಹಾಯಕ ಮಹಮದ್ ನಯಿಮುದ್ದೀನ್ (38), ಅಕೌಂಟೆಂಟ್ (ಗುತ್ತಿಗೆ ಆಧಾರ) ನಾಸೀರ್ ಅಹೆಮದ್ (28), ಸೀನಿಯರ್ ಪ್ರೋಗ್ರಾಮರ್ (ಗುತ್ತಿಗೆ ಆಧಾರ) ಮೊಹಮದ್ ಅಬ್ದುಲ್ ರೆಹಮಾನ್ (28), ನಯಿಮುದ್ದೀನ್ ಸಹಚರರಾದ ವಾಜೀದ್ ಇಮ್ರಾನ್ (34), ಮಿರ್ಜಾ ಆರೀಫ್ ಬೇಗ್ (31) ಬಂಧಿತ ಆರೋಪಿಗಳು.

'ಕೃತ್ಯದ ರೂವಾರಿ ಪಾಲಿಕೆ ಆಯುಕ್ತರ ಪಿಎ ನಯಿಮುದ್ದೀನ್, ಸಾಲ ಮಾಡಿಕೊಂಡಿದ್ದ. ಅದರಿಂದ ಹೊರಬರಲು ಸಹಚರರ ಜೊತೆಗೂಡಿ ಕೋಟ್ಯಂತರ ರೂಪಾಯಿ ವಂಚಿಸುವ ಯೋಜನೆ ಹಾಕಿದ್ದನು. ₹36.56 ಲಕ್ಷ ದೋಚುವಲ್ಲಿ ಯಶಸ್ವಿಯಾಗಿದ್ದ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ದೂರ ಸಂಪರ್ಕ ಸೇವಾ ಪೂರೈಕೆದಾರ ಕಂಪನಿಯೊಂದರಿಂದ ಬರಬೇಕಿದ್ದ ಶುಲ್ಕದ ಐದು ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ) ಅನ್ನು ನಯಿಮುದ್ದೀನ್ ಸಂಗ್ರಹಿಸಿದ್ದ. ಚಾಲ್ತಿಯಲ್ಲಿರುವ ಖಾತೆಗೆ ಜಮೆ ಮಾಡದೆ, ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದ ಮತ್ತೊಂದು ಖಾತೆಗೆ ₹1.86 ಕೋಟಿ ಡಿ.ಡಿ ಹಣವನ್ನು, ಸಹಿ ನಕಲು ಮಾಡಿದ್ದ ಚೆಕ್‌ಗಳನ್ನು ಬಳಸಿಕೊಂಡು ಹಂತ ಹಂತವಾಗಿ ವರ್ಗಾವಣೆ ಮಾಡಿದ್ದ' ಎಂದು ತಿಳಿಸಿದರು.

ಕೊಪ್ಪಳ: ಗವಿಸಿದ್ಧೇಶ್ವರ ಮಹಾರಥೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಲಕ್ಷಾಂತರ ಭಕ್ತರ ಸಂಗಮ, ಸಂಭ್ರಮ ಹಾಗೂ ಉದ್ಘೋಷಗಳ ನಡುವೆ ಬುಧವಾರ ನಡೆದ ಇಲ್ಲಿನ ಪ್ರಸಿದ್ಧ ಗವಿಸಿದ್ಧೇಶ್ವರ ಮಠದ ಮಹಾರಥೋತ್ಸವದಲ್ಲಿ ಜನಜಾತ್ರೆಯೇ ಕಂಡುಬಂದಿತು.

ಮಠದ ಧಾರ್ಮಿಕ ಕಾರ್ಯಕ್ರಮಗಳನ್ನು ಪೂರೈಸಿದ ಬಳಿಕ ಹೆಸರಾಂತ ಹಿಂದೂಸ್ತಾನಿ ಗಾಯಕ ಪಂಡಿತ್ ಎಂ. ವೆಂಕಟೇಶ ಕುಮಾರ್ ಅವರು ಷಟಸ್ಥಲ ಧ್ವಜ ಏರಿಸುವ ಮೂಲಕ ಮಹಾ ರಥೋತ್ಸವಕ್ಕೆ ಚಾಲನೆ ನೀಡಿದಾಗ ಭಕ್ತರಲ್ಲಿ ಸಂಭ್ರಮ ಮನೆ ಮಾಡಿತು.

ಮೂಲ ಸ್ಥಾನದಿಂದ ಪಾದಗಟ್ಟೆಯತ್ತ ರಥ ಹೊರಟಾಗ ಜನ ಭಕ್ತಿಯಿಂದ ಕೈ ಮುಗಿದರು. ಮರಳಿ ಸ್ವ ಸ್ಥಾನಕ್ಕೆ ಬಂದಾಗ ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ವೆಂಕಟೇಶ ಕುಮಾರ್, 'ನಾನು ಇದೇ ಮಠದ ವಿದ್ಯಾರ್ಥಿಯಾಗಿದ್ದರೂ ಜಾತ್ರೆ ಇಷ್ಟೊಂದು ಅದ್ದೂರಿಯಾಗಿ ಆಗಿದ್ದನ್ನು ಎಂದೂ ನೋಡಿರಲಿಲ್ಲ. ಓದುವಾಗಿನ ಹಾಗೂ ಈಗಿನ ಜಾತ್ರೆಗೆ ಭೂಮಿ–ಆಕಾಶದಷ್ಟು ವ್ಯತ್ಯಾಸವಿದೆ' ಎಂದು ಬಣ್ಣಿಸಿದರು.

ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, 'ಸಮುದ್ರದ ತುಂಬಾ ನೀರು ಇರುವಂತೆ ಕೊಪ್ಪಳ ಜಾತ್ರೆಯಲ್ಲಿ ಎಲ್ಲಿ ನೋಡಿದರೂ ಜನಜಾತ್ರೆಯೇ ಇರುತ್ತದೆ' ಎಂದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ರಥೋತ್ಸವಕ್ಕೆ ಬೆಳಿಗ್ಗೆಯಿಂದಲೇ ಜನರು ಜಿಲ್ಲೆ, ಹೊರಜಿಲ್ಲೆ, ಹೊರರಾಜ್ಯಗಳಿಂದ ಬಂದು ಪಾಲ್ಗೊಂಡಿದ್ದರು. ಬಂದ ಎಲ್ಲ ಭಕ್ತರಿಗೂ ಸಾವಯವ ಬೆಲ್ಲದ ಜಿಲೇಬಿ, ಮಾದಲಿ, ಜೋಳದ ರೊಟ್ಟಿ, ಅನ್ನ, ಸಾರು ಸೇರಿದಂತೆ ತರಹೇವಾರಿ ತಿನಿಸು ಒಳಗೊಂಡ ಊಟ ಬಡಿಸಲಾಯಿತು.

ಪಲ್ಲಕ್ಕಿ ಹೊತ್ತ ವಿಜಯೇಂದ್ರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಲಕ್ಷಾಂತರ ಜನರ ನಡುವೆ ಗವಿಮಠದ ಮಹಾರಥೋತ್ಸವದ ವೇಳೆ ಪಲ್ಲಕ್ಕಿ ಹೊತ್ತು ಭಕ್ತಿ ಸಮರ್ಪಿಸಿದರು.

ಈ ವೇಳೆ ಮಾತನಾಡಿ 'ಗವಿಸಿದ್ದೇಶ್ವರ ಜಾತ್ರೆಗೆ ಬರಬೇಕು ಎನ್ನುವ ಅಪೇಕ್ಷೆಯಿತ್ತು. ಅದು ಈಗ ಈಡೇರಿದೆ. ಜಗತ್ತಿನ ಯಾವುದೇ ಪವಿತ್ರ ಸ್ಥಳದಲ್ಲಿ ಇಂತಹ ದೃಶ್ಯ ನೋಡಲು ಸಾಧ್ಯವಿಲ್ಲ. ಜಾತ್ರೆಯಲ್ಲಿ ಪಾಲ್ಗೊಂಡಿದ್ದು ಸೌಭಾಗ್ಯ' ಎಂದು ಹೇಳಿದರು.

₹3 ಲಕ್ಷ ಲಂಚ: ಬೆಸ್ಕಾಂ ಎಇ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹3 ಲಕ್ಷ ಲಂಚ ಪಡೆದ ಬೆಸ್ಕಾಂ ಸಹಾಯಕ ಎಂಜಿನಿಯರ್ (ಎಇ) ರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ವಿದ್ಯುತ್ ಕಾಮಗಾರಿ ಗುತ್ತಿಗೆದಾರ ಮಧು ಗೌಡ, ಬಸವನಗರ ವ್ಯಾಪ್ತಿಯಲ್ಲಿ ಕಟ್ಟಡವೊಂದರ ವೈರಿಂಗ್ ಕಾಮಗಾರಿ ನಡೆಸುತ್ತಿದ್ದಾರೆ. ವಿದ್ಯುತ್ ಸಂಪರ್ಕ ಪಡೆಯಲು ಬಸವನಗರದ ಬೆಸ್ಕಾಂ ಕಚೇರಿಗೆ ಅರ್ಜಿ ಸಲ್ಲಿಸಿದ್ದರು' ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

'ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಂಬಂಧಿತ ಕಚೇರಿಯ ಸಹಾಯಕ ಎಂಜಿನಿಯರ್ ಎಲ್.ಯೋಗರಾಜ್ (41) ಅವರು ಮಧು ಅವರಿಂದ ₹3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರ ವಿರುದ್ಧ ಮಧು ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು' ಎಂದಿದೆ.

'ಲೋಕಾಯುಕ್ತ ಎಸ್‌ಪಿ ಕೋನ ವಂಶಿಕೃಷ್ಣ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಯಿತು. ಮಧು ಅವರು ಬುಧವಾರ ಬೆಸ್ಕಾಂ ಕಚೇರಿ ಬಳಿ ತೆರಳಿದ್ದರು. ಯೋಗರಾಜ್ ಸೂಚನೆಯಂತೆ, ಹೊರಗುತ್ತಿಗೆ ಚಾಲಕ ಮುರಳಿ (42) ಅವರಿಗೆ ₹3 ಲಕ್ಷ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಮುರಳಿ ಅವರನ್ನು ಬಂಧಿಸಲಾಯಿತು' ಎಂದು ತಿಳಿಸಿದೆ.

ಜೋಯಾಲುಕ್ಕಾಸ್ ಸಮೂಹಕ್ಕೆ 2 ಪುರಸ್ಕಾರ

ನ್ಯಾಷನಲ್ ರಿಟೇಲ್ ಜ್ಯುವೆಲರ್ ಮ್ಯಾಗಜೈನ್‌ನ ಎಂಡಿ ಮತ್ತು ಸಿಇಒ ಪ್ರಶಸ್ತಿ–2025

ಬೆಂಗಳೂರು: ಭಾರತದ ಪ್ರಮುಖ ಆಭರಣ ಬ್ರ್ಯಾಂಡ್‌ಗಳಲ್ಲಿ ಒಂದಾದ ಜೋಯಾಲುಕ್ಕಾಸ್ ಸಮೂಹ 'ರೀಟೇಲ್ ಜ್ಯುವೆಲರ್ ಮ್ಯಾಗಜೈನ್‌ನ ಎಂಡಿ ಮತ್ತು ಸಿಇಒ ಅವಾರ್ಡ್ಸ್–2025'ರ ಎರಡು ವಿಶಿಷ್ಟ ಪ್ರಶಸ್ತಿಗಳಿಗೆ ಭಾಜನವಾಗಿದೆ.

ಮುಂಬೈನ ವರ್ಲ್ಡ್ ಗೋಲ್ಡ್ ಕೌನ್ಸಿಲ್ (ಡಬ್ಲ್ಯುಜಿಸಿ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜೋಯಾಲುಕ್ಕಾಸ್ ಇಂಡಿಯಾ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ ಅವರು 'ಅತ್ಯುತ್ತಮ ಕಾರ್ಯತಂತ್ರ ಮತ್ತು ಸಂಯೋಜಿತ ಮಾರ್ಕೆಟಿಂಗ್ 2025' ಮತ್ತು 'ವರ್ಷದ ರಾಷ್ಟ್ರೀಯ ಚಿಲ್ಲರೆ ಸರಣಿ 2025' ಎರಡು ಪ್ರತಿಷ್ಠಿತ ಪ್ರಶಸ್ತಿಗಳನ್ನು ಸ್ವೀಕರಿಸಿದರು.



ಜೋಯಾಲುಕ್ಕಾಸ್ ಇಂಡಿಯಾ ಲಿ.ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ ಅವರು ನಟಿ ಸಯಾಮಿ ಖೇರ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ಚಿಲ್ಲರೆ ಆಭರಣ ಸಮೂಹಗಳು ಆಭರಣ ಉದ್ಯಮದಲ್ಲಿ ಮಾಡುವ ಅಸಾಧಾರಣ ಸಾಧನೆಗಳು ಹಾಗೂ ಕೊಡುಗೆಗಳನ್ನು ಗುರುತಿಸಿ ಡಬ್ಲ್ಯುಜಿಸಿ ಈ ಪ್ರಶಸ್ತಿಗಳನ್ನು ನೀಡಲಿದೆ. ಇದರ ಜತೆ ಉದ್ಯಮದಲ್ಲಿ ತೋರುವ ನಾವೀನ್ಯತೆ, ಕಾರ್ಯತಂತ್ರದ ಶ್ರೇಷ್ಠತೆ ಮತ್ತು ಗ್ರಾಹಕ ಸೇವೆಯ ಬದ್ಧತೆಯನ್ನು ಪರಿಗಣಿಸಲಿದೆ. ಕಳೆದ ವರ್ಷದಲ್ಲಿ ಜೋಯಾಲುಕ್ಕಾಸ್ ಸಮೂಹದ ಗಮನಾರ್ಹ ಬೆಳವಣಿಗೆ ಮತ್ತು ರಿಟೇಲ್ ವಿಸ್ತರಣೆಯನ್ನು ಗುರುತಿಸಿ, 2025ರಲ್ಲಿ ರಾಷ್ಟ್ರೀಯ ಚಿಲ್ಲರೆ ಸರಣಿ ಪ್ರಶಸ್ತಿ ನೀಡಿ ಗೌರವಿಸಿದೆ.

ಜೋಯಾಲುಕ್ಕಾಸ್‌ನ ಅತ್ಯುತ್ತಮ ಕಾರ್ಯಗಳಿಗೆ ಪ್ರಶಸ್ತಿ ಲಭಿಸಿರುವ ಬಗ್ಗೆ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜಾಯ್ ಅಲುಕ್ಕಾಸ್ ಅವರು ಸಂತಸ ವ್ಯಕ್ತಪಡಿಸಿದರು. 'ಪ್ರಶಸ್ತಿಗಳು ಜೋಯಾಲುಕ್ಕಾಸ್ ತಂಡದ ಕಠಿಣ ಪರಿಶ್ರಮ, ಸಮರ್ಪಣಾ ಮನೋಭಾವ ಮತ್ತು ಗ್ರಾಹಕರ ಬಗ್ಗೆ ಇರುವ ಅಚಲ ಬದ್ಧತೆಗೆ ಸಾಕ್ಷಿಯಾಗಿವೆ. ನಮ್ಮ ಸಮೂಹದ ಎಲ್ಲ ಸದಸ್ಯರೊಂದಿಗೆ ಈ ಗೌರವವನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಅಲ್ಲದೆ, ವಿಶ್ವದಾದ್ಯಂತ ಅತ್ಯುತ್ತಮ ಆಭರಣ ಶಾಪಿಂಗ್ ಅನುಭವಗಳನ್ನು ತಲುಪಿಸುವ ನಮ್ಮ ಉದ್ದೇಶದಲ್ಲಿ ನಾವು ಸದಾ ದೃಢವಾಗಿರುತ್ತೇವೆ' ಎಂದರು.

ಸಾಂಪ್ರದಾಯಿಕ ಮೌಲ್ಯಗಳನ್ನು ಆಧುನಿಕ ತಂತ್ರಗಳೊಂದಿಗೆ ಸಂಯೋಜಿಸುವ ಜೋಯಾಲುಕ್ಕಾಸ್ ಗ್ರೂಪ್‌ನ ನಿರಂತರ ಪ್ರಯತ್ನಗಳು ಆಭರಣ ವ್ಯಾಪಾರದಲ್ಲಿ ಮನೆಮಾತಾಗಿ, ಈ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಭದ್ರಗೊಳಿಸಿದೆ. ಇಂತಹ ಪುರಸ್ಕಾರಗಳು ಸಮಗ್ರತೆ, ಸೃಜನಶೀಲತೆ ಮತ್ತು ಗ್ರಾಹಕ ಕೇಂದ್ರಿತ ಉದ್ಯಮವನ್ನಾಗಿ ಮುನ್ನಡೆಸುವ ಸಂಕಲ್ಪವನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ ಎಂದಿದ್ದಾರೆ.

ಪ್ರಸ್ತುತಿ; ಪಿವಿ ಬ್ರ್ಯಾಂಡ್ ಸ್ಪಾಟ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ-ಮೇಲ್ : editpage@prajavani.co.in



ಸುಭಾಷಿತ

ಗುರಿಯನ್ನು ಬೇಗ ತಲುಪಬೇಕು ಎನ್ನುವವರು ದಾರಿಯಲ್ಲಿ ವಿಶ್ರಮಿಸುತ್ತಾ ಕುಳಿತುಕೊಳ್ಳಬಾರದು.

–ಪಾಟೀಲ ಪುಟ್ಟಪ್ಪ

ಕೆಲಸದ ಅವಧಿ ಹೆಚ್ಚಳ ಹೇಳಿಕೆ ಅಸಂಗತ, ದಮನಕಾರಿ ನಿಲುವು

ಲಾರ್ಸನ್ ಆ್ಯಂಡ್ ಟೂಬ್ರೊ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಸುಬ್ರಹ್ಮಣ್ಯನ್ ಅವರು ಕೆಲಸಗಾರರ ಉತ್ಪಾದಕತೆ ಹೆಚ್ಚಳವಾಗಬೇಕು ಎಂಬ ಕುರಿತು ನೀಡಿದ ಹೇಳಿಕೆಯೊಂದು ಭಾರಿ ಚರ್ಚೆಗೆ ಕಾರಣವಾಗಿದೆ. ಅವರ ಈ ಹೇಳಿಕೆಗೆ ಕೆಲವರಿಂದ ಬೆಂಬಲವೂ ವ್ಯಕ್ತವಾಗಿದೆ. ಈ ಎಲ್ಲವನ್ನೂ ಗಮನಿಸಿದರೆ, ನಮ್ಮ ದೇಶದಲ್ಲಿ ಜನರ ಕೆಲಸ ಮತ್ತು ನಿತ್ಯದ ಬದುಕಿನ ವಾಸ್ತವ ಏನಿದೆ ಎಂಬುದರ ಅರಿವು ಉದ್ಯಮ ರಂಗದ ನಾಯಕರಿಗೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಹೇಳಿಕೆಯು ಅಸಂಗತವಾಗಿದೆ ಎಂಬ ಕಾರಣಕ್ಕೆ ಮಾತ್ರವಲ್ಲ, ಅದರ ಒರಟುತನದಿಂದಾಗಿ ಕೂಡ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯ ವಸ್ತುವಾಗಿದೆ. ಉದ್ಯೋಗಿಗಳು ವಾರಕ್ಕೆ 90 ತಾಸು ಕೆಲಸ ಮಾಡಬೇಕು, ವಾರಾಂತ್ಯಗಳಲ್ಲಿಯೂ ಕೆಲಸ ಮಾಡಬೇಕು ಎಂದು ಅವರು ಹೇಳಿದ್ದಾರೆ. ಜೊತೆಗೆ ಕೀಳು ಅಭಿರುಚಿಯ ವಾಕ್ಯವೊಂದನ್ನೂ ಸೇರಿಸಿದ್ದರು. ‘ಎಷ್ಟು ಹೊತ್ತು ಹೆಂಡತಿಯ ಮುಖವನ್ನೇ ನೋಡುತ್ತಾ ಕುಳಿತಿರುತ್ತೀರಿ, ಹೆಂಡತಿ ನಿಮ್ಮ ಮುಖವನ್ನು ಎಷ್ಟು ಹೊತ್ತು ನೋಡುತ್ತಾ ಕುಳಿತಿರಬೇಕು’ ಎಂದು ಅವರು ಹೇಳಿದ್ದರು. ಈ ಹೇಳಿಕೆಯು ಕುಟುಂಬಗಳಲ್ಲಿನ ಮಾನವ ಸಂಬಂಧದ ಕುರಿತು ಸಂವೇದನೆರಹಿತ ಮತ್ತು ಅಹಂಕಾರದ ಅಭಿವ್ಯಕ್ತಿಯಾಗಿದೆ. ತಮಾಷೆ ಎಂದು ಪರಿಗಣಿಸಿದರೂ ಇದು ಕೆಟ್ಟದಾಗಿಯೇ ಕಾಣಿಸುತ್ತದೆ. ಜನಸಾಮಾನ್ಯರ ಕುರಿತು ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರ ಕೀಳು ಅಭಿಪ್ರಾಯ ಇದು ಎಂದು ಕೆಲವರು ಪರಿಗಣಿಸಬಹುದು.



ಬದುಕು ಮತ್ತು ಕೆಲಸದ ನಡುವೆ ಸಮತೋಲನ ಕಳೆದುಹೋದರೆ ಉದ್ಯೋಗಿಗೂ ನಷ್ಟ, ಕಂಪನಿಗೂ ನಷ್ಟ

ಸುಬ್ರಹ್ಮಣ್ಯನ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯವು ಕೆಲಸದ ಅವಧಿಗೆ ಸಂಬಂಧಿಸಿದ ಅಂಕಿಅಂಶ ಮತ್ತು ವಾಸ್ತವಕ್ಕೆ ವಿರುದ್ಧವಾಗಿದೆ. ಜಗತ್ತಿನ ಬೇರೆಡೆಗೆ ಹೋಲಿಸಿದರೆ ಭಾರತವೂ ಒಳಗೊಂಡಂತೆ ಏಷ್ಯಾದ ಉದ್ಯೋಗಿಗಳು ಹೆಚ್ಚು ಹೊತ್ತು ಕೆಲಸದ ಸ್ಥಳದಲ್ಲಿ ಇರುತ್ತಾರೆ ಎಂದು ಹಲವು ಸಮೀಕ್ಷೆಗಳು ಹೇಳಿವೆ. ಉದ್ಯೋಗಿಗಳು ನಿಗದಿಗಿಂತ ಹೆಚ್ಚು ಕೆಲಸ ಮಾಡುವ ದೇಶಗಳಲ್ಲಿ ಭಾರತವು 13ನೇ ಸ್ಥಾನದಲ್ಲಿದೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ವರದಿ ಹೇಳಿದೆ. ಕೆಲಸದ ಅವಧಿಯು ಸುದೀರ್ಘವಾಗಿರುವ ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ ಎರಡನೇ ಸ್ಥಾನವಿದೆ ಎಂದು ಈ ವರದಿ ಹೇಳಿದೆ. ಉದ್ಯೋಗಿಗಳಿಂದ ಇನ್ನೂ ಹೆಚ್ಚು ಹೊತ್ತು ಕೆಲಸ ಮಾಡಿಸಬೇಕು ಎಂದು ದೇಶದ ಉದ್ಯಮ ರಂಗದ ನಾಯಕರು ಭಾವಿಸಿದರೆ, ಕೆಲಸಗಾರರ ಕುರಿತು ಅವರು ಹೊಂದಿರುವ ಗಾಢ ನಿರ್ಲಕ್ಷ್ಯವನ್ನು ಮತ್ತು ಸಹಾನುಭೂತಿಯ ಕೊರತೆಯನ್ನು ಅದು ತೋರಿಸುತ್ತದೆ. ಉತ್ಪಾದಕತೆ ಎಂಬುದು ಎಷ್ಟು ಹೊತ್ತು ಕೆಲಸ ಮಾಡಿದ್ದಾರೆ ಎಂಬುದನ್ನು ಅವಲಂಬಿಸಿರಬೇಕಾಗಿಲ್ಲ. ಫಲಿತಾಂಶ ಏನು ಎಂಬುದೇ ಉತ್ಪಾದಕತೆಯನ್ನು ಅಳೆಯುವ ಮಾನದಂಡ. ಉದ್ಯೋಗಿಗಳು ವಿಶ್ರಾಂತಿ ಪಡೆಯುವ ಮತ್ತು ಮನೆಯಲ್ಲಿ ಇರುವ ಅವಧಿಯೂ ಉತ್ಪಾದಕತೆಗೆ ಮುಖ್ಯವಾಗುತ್ತದೆ. ಮನೆಯಲ್ಲಿನ ಮಕ್ಕಳ ಆರೈಕೆ, ಕೆಲಸದ ಸ್ಥಳದಿಂದ ಹೊರಗೆ ಅವರು ಕಳೆಯುವ ಸಮಯ ಎಲ್ಲವೂ ಇದರಲ್ಲಿ ಒಳಗೊಳ್ಳುತ್ತವೆ. ಬದುಕು ಮತ್ತು ಕೆಲಸದ ನಡುವೆ ಸಮತೋಲನ ಇರಬೇಕು. ಲಾರ್ಸನ್‌ನಿಂದ ಟೂಬ್ರೊವನ್ನು ಹೇಗೆ ಪ್ರತ್ಯೇಕಿಸುವುದು ಸಾಧ್ಯವಿಲ್ಲವೋ ಇವುಗಳನ್ನೂ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಈ ಸಮತೋಲನವು ಕಳೆದುಹೋದರೆ ಉದ್ಯೋಗಿಗೂ ಕಂಪನಿಗೂ ನಷ್ಟ ಉಂಟಾಗುತ್ತದೆ.

ಭಾರತದ ಉದ್ಯೋಗಿಗಳಿಗೆ ಅಗತ್ಯ ಇರುವ ಮತ್ತು ಅವರು ಅರ್ಹರೂ ಆಗಿರುವ ಸಾಮಾಜಿಕ ಸುರಕ್ಷೆ ಅಥವಾ ಕಲ್ಯಾಣ ಕಾರ್ಯಕ್ರಮಗಳ ಬೆಂಬಲ ಇಲ್ಲ. ಮಹಿಳಾ ಉದ್ಯೋಗಿಗಳ ಪರಿಸ್ಥಿತಿ ಇನ್ನೂ ಚಿಂತಾಜನಕ. ಶೋಷಣೆ ವ್ಯಾಪಕವಾಗಿದೆ; ಕೆಲಸದ ಪರಿಸ್ಥಿತಿಯು ಅನುಕೂಲಕರ ಅಥವಾ ಆರೋಗ್ಯಕರವಾಗಿ ಇಲ್ಲ. ಸುದೀರ್ಘ ಹೋರಾಟದ ಬಳಿಕವೇ ಕೆಲಸಕ್ಕೆ ಸಂಬಂಧಿಸಿದ ನಿಯಮಗಳು ರೂಪುಗೊಂಡವು. ಈ ನಿಯಮಗಳಿಗೆ ಕಾನೂನಿನ ಮಾನ್ಯತೆ ಇದೆ ಮತ್ತು ಅವುಗಳನ್ನು ಸಾಮಾನ್ಯ ಹಕ್ಕುಗಳು ಎಂದೇ ಪರಿಗಣಿಸಲಾಗುತ್ತಿದೆ. ಈ ನಿಯಮಗಳನ್ನು ಪ್ರಶ್ನಿಸುವುದು ಪ್ರತಿಗಾಮಿ ಮನಃಸ್ಥಿತಿ. ಸಾಮಾಜಿಕ ದಮನಕಾರಿ ನಿಲುವು ಎಂದೇ ಇದನ್ನು ಭಾವಿಸಬೇಕಾಗುತ್ತದೆ. ಜಗತ್ತಿನ ಅತ್ಯುತ್ತಮ ಉದ್ಯೋಗದಾತ ಸಂಸ್ಥೆಗಳಲ್ಲಿ ಲಾರ್ಸನ್ ಆ್ಯಂಡ್ ಟೂಬ್ರೊ ಕೂಡ ಒಂದು ಎಂದು ಪರಿಗಣಿಸಲಾಗುತ್ತಿದೆ. ಭಾರತದಲ್ಲಿಯೂ ಈವರೆಗೆ ಇಂತಹ ಭಾವನೆಯೇ ಇತ್ತು. ಆದರೆ, ಸಂಸ್ಥೆಯ ಅಧ್ಯಕ್ಷರು ಈಗ ಆಡಿರುವ ಮಾತು ಈ ಗೌರವಕ್ಕೆ ಹೊಂದುವಂತೆ ಇಲ್ಲ. ವಿರಾಮದ ಮಹತ್ವವನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ ಅವರು ಮುನ್ನಡೆಸುತ್ತಿರುವ ಕಂಪನಿಯು ಪ್ರತಿಪಾದಿಸಿಕೊಂಡು ಬಂದಿರುವ ಮೌಲ್ಯಗಳನ್ನೂ ಅರಿತುಕೊಳ್ಳಬೇಕು.

ದಿನದ ಟ್ವೀಟ್

ಅಪೂರ್ಣ ಕಟ್ಟಡ: ನಿಗಾ ಇರಲಿ



ಇಂಥ ಅಸಹ್ಯಕರ ಕೃತ್ಯಗಳು ಯಾವಾಗ ನಿಲ್ಲುತ್ತವೆಯೋ? ಮಕ್ಕಳು, ಮಹಿಳೆಯರ ಸುರಕ್ಷತೆಯು ವಿಶ್ವದಲ್ಲಿ ಕಳವಳದ ಸಂಗತಿಯಾಗಿಯೇ ಮುಂದುವರಿದಿದೆ. ಅಪೂರ್ಣ ಕಟ್ಟಡಗಳನ್ನು ವರ್ಷಗಟ್ಟಲೆ ಹಾಗೇ ಬಿಡಲಾಗಿರುತ್ತದೆ. ಕುಡಿದ ಅಥವಾ ಮಾದಕವಸ್ತು ಸೇವನೆಯ ಮತ್ತಿನಲ್ಲಿ ಇರುವವರು ಇಂತಹ ಕೃತ್ಯಗಳನ್ನು ಎಸಗಲು ಅವು ಅನುವು ಮಾಡಿಕೊಡುತ್ತಿವೆ. ಈ ಬಗ್ಗೆ ಬಿಬಿಎಂಪಿ ಆಯುಕ್ತರು ಗಮನಹರಿಸಬೇಕು.

(ಬೆಂಗಳೂರಿನ ಬಡಾವಣೆಯೊಂದರಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಯುವಕನೊಬ್ಬ ಆರು ವರ್ಷದ ಹೆಣ್ಣುಮಗುವಿನ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ವಿಕ್ರಮ್ ಮೈಲಾರ್ ವಿಜಯ್, ಬೆಂಗಳೂರು ನವನಿರ್ಮಾಣ ಪಕ್ಷದ ಮುಖಂಡ

ಕಿಡಿನುಡಿ



ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾದ ಬಳಿಕ ನಿರಂತರವಾಗಿ ಹೋರಾಟ ಮಾಡುತ್ತಿದ್ದೇನೆ. ಅಲ್ಲೊಬ್ಬರು, ಇಲ್ಲೊಬ್ಬರು ಮನಬಂದಂತೆ ಮಾತನಾಡಿದರೆ ಅದಕ್ಕೆ ಉತ್ತರ ನೀಡುವಷ್ಟು ಸಮಯವಿಲ್ಲ.

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಭಾನುವಾರ, 16-1-2000

• **ಗೃಹ ಅಭಿವೃದ್ಧಿ ನಿಗಮದ ಸ್ಥಾಪನೆ**

ಬೆಂಗಳೂರು, ಜ. 15– ಕಡಿಮೆ ಮತ್ತು ಮಧ್ಯಮ ಪ್ರಮಾಣದ ಆದಾಯದವರಿಗೆ ಮನೆಗಳನ್ನು ನಿರ್ಮಿಸಿಕೊಡಲು ಸಾಮಾಜಿಕ ಗೃಹ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಯೋಜಿಸಿದೆ ಎಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ತಿಳಿಸಿದರು.

ದೂರದರ್ಶನವು ಏರ್ಪಡಿಸಿದ್ದ ‘ಫೋನ್ ಇನ್’ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ಮನೆಯಿಲ್ಲದವರಿಗೆ ಮನೆ ನಿರ್ಮಿಸಿಕೊಡಲು ಸರ್ಕಾರ ಬದ್ಧವಾಗಿದೆ ಎಂದು ವಿವರಿಸಿದರು.

• **ಬೀದಿನಾಯಿ ಉಪಟಳ: ಕೊನೆ ಎಂದು?**

ಬೆಂಗಳೂರು, ಜ. 15– ಎಲ್ಲ ಪ್ರಯತ್ನಗಳ ಹೊರತಾಗಿಯೂ ಬೀದಿನಾಯಿಗಳ ಉಪಟಳ ಈಚೆಗೆ ಮತ್ತೆ ಮಿತಿಮೀರಿದ್ದು, ನಾಗರಿಕರ ನೆಮ್ಮದಿಗೆ ಸಂಚಕಾರ ತಂದಿದೆ. ರಾತ್ರಿಯಾಗುತ್ತಿದ್ದಂತೆ ಇವುಗಳ ಉತ್ಸಾಹ ಗರಿಗೆದರುತ್ತದೆ; ಜನರ ಎದೆ ನಡುಗುತ್ತದೆ.

ನಾಯಿಗಳ ಹಾವಳಿಯಿಂದ ಬೇಸತ್ತ ನಾಗರಿಕರು ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತವನ್ನು ದೂಷಿಸುತ್ತಿದ್ದರೆ, ಅಸಹಾಯಕರಾದ ಕೆಲವು ಪಾಲಿಕೆ ಸದಸ್ಯರು ಈ ಬಗ್ಗೆ ಈಚಿನ ಸಭೆಯಲ್ಲಿ ಆಡಳಿತವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಒಂದೆಡೆ, ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಮಹಾನಗರ ಪಾಲಿಕೆಯ ಸಹಕಾರದಿಂದ ರಾಜಧಾನಿಯನ್ನು ಸಿಂಗಪುರ ಮಾದರಿಯ ಅಂತರರಾಷ್ಟ್ರೀಯ ಗುಣಮಟ್ಟದ ನಗರವನ್ನಾಗಿ ಪರಿವರ್ತಿಸುವ ಮಾತನಾಡುತ್ತಿದ್ದರೆ, ಇನ್ನೊಂದೆಡೆ, ಬೀದಿನಾಯಿಗಳು ತಮ್ಮ ಸಂತಾನ ವೃದ್ಧಿಯಲ್ಲಿ ನಿರತವಾಗಿವೆ.

50 ವರ್ಷಗಳ ಹಿಂದೆ

ಗುರುವಾರ, 16-1-1975

• **ಹನಿಮಳೆ ಇಲ್ಲದಿದ್ದರೂ ಕೆರೆ ಒಡೆದು ಬೆಳೆಗೆ ಅಪಾರ ಹಾನಿ**

ಬೆಂಗಳೂರು, ಜ. 15– ಹನಿಮಳೆ ಇಲ್ಲ, ಆದರೂ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾದ ಬೆಳ್ಳಂದೂರು ಕೆರೆ ಕೋಡಿ ವಿಸ್ಮಯಕರವಾದ ರೀತಿಯಲ್ಲಿ ನಿನ್ನೆ ರಾತ್ರಿ ಒಡೆದು ಕೊಯ್ಲಿಗೆ ಬಂದಿದ್ದ ಭತ್ತ ಮತ್ತು ನಾಟಿಗೆ ಬೆಳೆಸಿದ್ದ ಪೈರನ್ನು ಜಲಸಮಾಧಿ ಮಾಡಿತು.

ಪ್ರಧಾನವಾಗಿ ಬೇಸಿಗೆ ಬೆಳೆಯ ಅಚ್ಚುಕಟ್ಟನ್ನು ಪಡೆದ ಅದು ಬರಿದಾದಂತೆ ಮುಂದಿನ ಬೆಳೆಯ ಭವಿಷ್ಯವನ್ನೂ ಅಂಧಕಾರದಲ್ಲಿ ಮುಳುಗಿಸಿತು.

ಕೆರೆಯ ನೀರನ್ನು ಅವಲಂಬಿಸಿರುವವರಲ್ಲಿ ರಕ್ಷಣಾ ಇಲಾಖೆಯ ವಿಮಾನ ಕಾರ್ಖಾನೆಯೂ ಸೇರಿದೆ.

ಇಲ್ಲಿಗೆ ಸುಮಾರು ಏಳು ಮೈಲಿ ದೂರದಲ್ಲಿ ತನ್ನ ಮೂಗಿನಡಿಯಲ್ಲಿಯೇ ಒಡೆದ ಈ ಕೆರೆಯ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಲು ಸರ್ಕಾರ ವಿಫಲವಾಯಿತು. ಬೆಳಿಗ್ಗೆಯೇ ಸಂಬಂಧಪಟ್ಟವರಿಗೆ ಸುದ್ದಿ ಮುಟ್ಟಿಸಿದರೂ ಸಂಜೆ 4 ಗಂಟೆಯವರೆಗೂ ಲೋಕೋಪಯೋಗಿ ಇಲಾಖೆಯವರು ಅಲ್ಲಿ ಕಾಣಲಿಲ್ಲ.

ಹರಿಯುತ್ತಿದ್ದ ಪ್ರವಾಹ ಕಂಡು ಆಡುತ್ತಿದ್ದ ಮಕ್ಕಳಿಗೆ ಆನಂದ. ನೀರನ್ನೇ ನಂಬಿದ್ದ ರೈತರಿಗೆ ದುಃಖ ಆಯಿತು. ಅನಿರೀಕ್ಷಿತ ಪ್ರವಾಹವನ್ನು ಕಾಣಲು ಸುತ್ತಮುತ್ತಲಿನ ಗ್ರಾಮಸ್ಥರು ಅಲ್ಲಿಗೆ ಧಾವಿಸಿದರು.

ಇಲಾಖೆಯ ಪ್ರತಿನಿಧಿಗಳು ತಕ್ಷಣ ಬರಲಿಲ್ಲ. ಆದರೆ, ಕ್ಷಣಕ್ಷಣಕ್ಕೂ ಪ್ರವಾಹದ ವೇಗ ಮತ್ತು ಗಾತ್ರ ಏರುತ್ತಲೇ ಹೋಯಿತು.

ಅಧಿಕಾರವನ್ನು ಒದ್ದು ಕಿತ್ತುಕೊಳ್ಳಬೇಕಾಗುತ್ತದೆ ಎನ್ನಲು ಇದೇನು ರಾಜಶಾಹಿಯೇ?

ಅಧಿಕಾರದ ವ್ಯಸನ: ಜನರೋದನ



ಗತಿಬಿಂಬ

ವೈ.ಗ. ಜಗದೀಶ್

ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಎರಡು ವರ್ಷ ತುಂಬುವ ಮೊದಲೇ ಅಧಿಕಾರಕ್ಕಾಗಿನ ತಿಕ್ಕಾಟ ತೀವ್ರಗೊಳ್ಳುತ್ತಿದೆ. ಮುಖ್ಯಮಂತ್ರಿ ಜತೆಗಿರುವ ಬಣ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಬಹಿರಂಗವಾಗಿಯೇ ಕತ್ತಿ ಮಸೆತ ಆರಂಭಿಸಿದೆ. ಸಮರ, ಸಮಾಧಾನದ ಇಬ್ಬಗೆ ನಡೆ ಅನುಸರಿಸುತ್ತಿರುವ ಶಿವಕುಮಾರ್, ಅನುಕೂಲಕರವಾದ ಕಾಲಕ್ಕೆ ಹೊಂಚು ಹಾಕಿ ಕುಳಿತವರಂತೆ ವರ್ತಿಸುತ್ತಿದ್ದಾರೆ. ಆಂತರಿಕವಾಗಿ ನಡೆಯಬೇಕಾದ ಚರ್ಚೆಯು ಹಾದಿಬದಿಯ ವಿಷಯವಾಗಿದೆ. ಪಕ್ಷದ ವರಿಷ್ಠರು ಹಲವು ಬಾರಿ ಎಚ್ಚರಿಕೆ ಕೊಟ್ಟರೂ ಯಾರೊಬ್ಬರೂ ಅದನ್ನು ಲೆಕ್ಕಿಸಿಲ್ಲ. ಎದುರಾಳಿಯನ್ನು ಬಗ್ಗಿಸಲು ಸಿದ್ದರಾಮಯ್ಯನವರ ಬಣ, ಇದನ್ನು ಬೀದಿಗೆ ತಂದು ನಿಲ್ಲಿಸಿದೆ ಎಂಬುದೇನೂ ರಹಸ್ಯವಲ್ಲ.

ಕರ್ನಾಟಕದಲ್ಲಿ ದೀರ್ಘಾವಧಿ ಮುಖ್ಯಮಂತ್ರಿಯಾಗಿದ್ದವರು ದೇವರಾಜ ಅರಸು. ಅವರ ದಾಖಲೆಯನ್ನು ಮುರಿದು ವಿರಮಿಸುವ ಇರಾದೆಯಲ್ಲಿದ್ದ ಸಿದ್ದರಾಮಯ್ಯ, ಸರಿಸುಮಾರು ಎರಡೂವರೆ ವರ್ಷದ ಬಳಿಕ ಅಧಿಕಾರ ಬಿಟ್ಟುಕೊಡುವ ಮನಸ್ಸಿನಲ್ಲಿ ಇದ್ದರು ಎಂಬ ಮಾತು ಕಾಂಗ್ರೆಸ್ ಪಡಸಾಲೆಯಲ್ಲಿ ಹರಿದಾಡಿತ್ತು. ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಯಾವಾಗ ಅನಿರೀಕ್ಷಿತವಾಗಿ ಗೆಲುವು ಸಿದ್ಧಿಸಿತೋ ಆಗ, ಸಿದ್ದರಾಮಯ್ಯನವರ ಲೆಕ್ಕಾಚಾರಗಳು ಬದಲಾದವು. ಹಿಂದುಳಿದವರು, ಪರಿಶಿಷ್ಟರು ಹಾಗೂ ಮುಸ್ಲಿಮರ ಮತ ಇಲ್ಲದೇ ಕಾಂಗ್ರೆಸ್‌ಗೆ ಗೆಲುವು ಅಸಾಧ್ಯ ಎಂಬ ತರ್ಕವನ್ನು ಚುನಾವಣೆ ಫಲಿತಾಂಶ ಹೇಳಿತು. ಇದು, ಕಾಂಗ್ರೆಸ್‌ನ ಒಳ ರಾಜಕೀಯವನ್ನೇ ಬದಲಿಸಿತು.

ಇದೇ ವಿಧಾನಸಭೆ ಅವಧಿಯಲ್ಲಿ ಮುಖ್ಯಮಂತ್ರಿಯಾಗುವ ಉಮೇದಿನಲ್ಲಿದ್ದ ಶಿವಕುಮಾರ್, ಈ ಬೆಳವಣಿಗೆಯಿಂದ ಸಹಜವಾಗಿಯೇ ಕಂಗೆಟ್ಟರು. ಮುಡಾ ನಿವೇಶನ ಹಂಚಿಕೆಯಲ್ಲಿ ಅಕ್ರಮವಾಗಿದೆ ಎಂದು ಬಿಜೆಪಿ ನಾಯಕರು ಪಾದಯಾತ್ರೆ ಹೊರಟಾಗ, ಶಿವಕುಮಾರ್ ಪ್ರತಿ ಅಭಿಯಾನ ಹಮ್ಮಿಕೊಂಡು ಸಿದ್ದರಾಮಯ್ಯ ಪರ ನಿಂತರು. ಉಪಚುನಾವಣೆ ಫಲಿತಾಂಶದ ಬಳಿಕ, ಸಿದ್ದರಾಮಯ್ಯ ಮೇಲುಗೈ ಸಾಧಿಸುತ್ತಿದ್ದಂತೆ ಶಿವಕುಮಾರ್ ವಿಚಲಿತರಾದರು. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ‘ನಾವಿಬ್ಬರೂ ಒಂದು ಸಹಮತಕ್ಕೆ ಬಂದಿದ್ದೇವೆ’ ಎಂಬ ಶಿವಕುಮಾರ್ ಹೇಳಿಕೆ, ಕಾಂಗ್ರೆಸ್ ನಡುಮನೆಯಲ್ಲಿ ಕಂಪನ ಸೃಷ್ಟಿಸಿತು. ಅದರ ಬೆನ್ನಲ್ಲೇ, ಹಾಸನದಲ್ಲಿ ನಡೆದ ಸಮಾವೇಶದಲ್ಲಿ ‘ಕೊನೆಯ ಉಸಿರು ಇರುವವರೆಗೂ ಸಿದ್ದರಾಮಯ್ಯ ಬೆನ್ನಿಗೆ ಬಂಡೆಯಂತೆ ನಿಲ್ಲುವೆ’ ಎಂದು ಉದ್ಗರಿಸಿದರು. ವಿಧಾನ ಮಂಡಲದ ಬೆಳಗಾವಿ ಅಧಿವೇಶನದಲ್ಲಿ ‘ಅಧಿಕಾರ ಸುಮ್ಮನೆ ಸಿಗುವುದಿಲ್ಲ, ಒದ್ದು ಕಿತ್ತುಕೊಳ್ಳಬೇಕು’ ಎಂದು ಹೇಳಿದ್ದು ಮತ್ತೆ ಸದ್ದು ಮಾಡಿತು. ಈ ಮಾತು ಸಿದ್ದರಾಮಯ್ಯ ಮತ್ತು ಅವರ ಜತೆಗಾರರಿಗೆ ವರವಾಯಿತು.

ಶಿವಕುಮಾರ್ ಅವರ ಆಕ್ರಮಣಕಾರಿ ನಡೆ ಗೊತ್ತಿದ್ದ ಕಾಂಗ್ರೆಸ್‌ನ ಇತರ ನಾಯಕರು ಆಗಾಗ್ಗೆ ಔತಣ ಕೂಟದ ನೆಪದಲ್ಲಿ ಒಂದೆಡೆ ಸೇರುತ್ತಾ, ತಮ್ಮದೇ ಆದ ರಾಜಕೀಯ ಹಾದಿಯನ್ನು ರೂಪಿಸಿಕೊಳ್ಳ ತೊಡಗಿದರು. ಸಚಿವರಾದ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಕೆ.ಎನ್. ರಾಜಣ್ಣ ಮುಂಚೂಣಿಯಲ್ಲಿ ನಿಂತು, ಪ್ರಬಲ ಜಾತಿಯ ರಾಜಕೀಯದ ವಿರುದ್ಧ ಹಿಂದುಳಿದ–ದಲಿತರ ಪರ್ಯಾಯವೊಂದನ್ನು ಹೆಣೆಯತೊಡಗಿದರು. ಒಬ್ಬರಿಗೆ ಒಂದೇ ಹುದ್ದೆ ಎಂಬ ಕಾಂಗ್ರೆಸ್‌ನ ‘ಉದಯಪುರ ನಿರ್ಣಯ’ವನ್ನು ಜಾರಿ ಮಾಡಬೇಕೆಂಬ ಹಕ್ಕೊತ್ತಾಯವನ್ನು ವರಿಷ್ಠರೆದುರು ಮಂಡಿಸಲು ತಯಾರಿ ನಡೆಸಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಸೇರಿದಂತೆ ಶಿವಕುಮಾರ್ ಹೊಂದಿರುವ ನಾಲ್ಕೈದು ಖಾತೆಗಳಲ್ಲಿ ಕೆಲವನ್ನು ಕಿತ್ತುಕೊಂಡು, ಒಂದೇ ಸ್ಥಾನಕ್ಕೆ ಸೀಮಿತಗೊಳಿಸುವುದು ಈ ಗುಂಪಿನ ಶತಪ್ರಯತ್ನದ ಗುರಿ. ತಮ್ಮ ವಿರುದ್ಧ ಹಿರಿಯ ಮುಖಂಡರೆಲ್ಲ ಒಗ್ಗಟ್ಟಾಗುತ್ತಿದ್ದಂತೆ, ಶಿವಕುಮಾರ್ ಜಂಘಾಬಲವೇ ಉಡುಗಿ ಹೋಯಿತು. ಇದನ್ನೆಲ್ಲ ಗಮನಿಸಿದ ಶಿವಕುಮಾರ್, ‘ನನಗೆ ಯಾವ ಶಾಸಕ, ಕಾರ್ಯಕರ್ತರ ಬೆಂಬಲವೂ ಬೇಡ’ ಎಂಬ ವಿಷಾದ ಯೋಗ ತಲುಪಿದಂತೆ ತೋರುತ್ತಿದ್ದಾರೆ.

ಇನ್ನು ಅಧಿಕಾರ ಹಂಚಿಕೆಯ ವಿಷಯಕ್ಕೆ ಬಂದರೆ, ‘ಆ ರೀತಿ ಏನೂ ಆಗಿಲ್ಲ’ ಎಂದು ಸಿದ್ದರಾಮಯ್ಯನವರೇ ಹೇಳಿದ್ದುಂಟು. ‘ಯಾವುದೇ ವಿಷಯದಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ; ಅದನ್ನು ನಾನು ಮತ್ತು ಶಿವಕುಮಾರ್ ಇಬ್ಬರೂ ಒಪ್ಪಬೇಕು’ ಎಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ಅವರೇ ಹೇಳಿದ್ದಾರೆ. ಇದರ ಬಗ್ಗೆ ಖಚಿತವಾಗಿ ಹೇಳಬಲ್ಲ ನಾಲ್ಕೈದು ವರಿಷ್ಠ ನಾಯಕರು ಮಗುಮ್ಮಾಗಿದ್ದಾರೆ. ‘ಸಿದ್ದರಾಮಯ್ಯನವರೇ ಮನಸ್ಸು ಮಾಡಿ ಸ್ಥಾನ ಬಿಡಬೇಕು. ಅವರನ್ನು ಒಲಿಸಿಕೊಂಡು ಸ್ಥಾನ ಪಡೆಯುವುದು ಬಿಟ್ಟು ಕಿತ್ತುಕೊಳ್ಳಲು ಹೋದರೆ ಅವರು ಸೆಟೆದು ಹಟಕ್ಕೆ ಬೀಳುತ್ತಾರೆ. ಆಗ, ಯಾರೊಬ್ಬರೂ ಕಿತ್ತು ಕೊಡಿಸಲು ಸಾಧ್ಯವಿಲ್ಲ. ಅಲ್ಲಿಯವರೆಗೆ ಕಾಯಿರಿ’ ಎಂದು ವರಿಷ್ಠರು ಶಿವಕುಮಾರ್ ಅವರಿಗೆ ಸೂಚಿಸಿದ್ದಾರೆ ಎಂಬ ಮಾತುಗಳೂ ದೆಹಲಿ ವಲಯದಲ್ಲಿವೆ.

ಈ ಎಲ್ಲದರ ಮಧ್ಯೆಯೇ, ಪರಿಶಿಷ್ಟ ಜಾತಿ ಮತ್ತು ಪಂಗಡದ ನಾಯಕರು ಒಟ್ಟಾಗಿದ್ದಾರೆ. ಹಿಂದುಳಿದವರಿಗೆ ಸಿಕ್ಕಿರುವ ಮುಖ್ಯಮಂತ್ರಿ ಹುದ್ದೆಯನ್ನು ಯಾವುದೇ ಕಾರಣಕ್ಕೂ ಮತ್ತೆ ಪ್ರಬಲ ಜಾತಿಗೆ ಬಿಟ್ಟುಕೊಡಬಾರದು. ಅದನ್ನು ತಾವೇ ಉಳಿಸಿಕೊಳ್ಳಬೇಕು; ಒಂದು ವೇಳೆ ವರ್ಗಾಯಿಸುವುದೇ ಆದರೆ ಈವರೆಗೂ ಆ ಹುದ್ದೆಯನ್ನೇ ಅಲಂಕರಿಸದ ದಲಿತರಿಗೆ ವರ್ಗಾಯಿಸಬೇಕು ಎಂಬ ಆಲೋಚನೆ ಈ ಗುಂಪಿನದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಇದು ಒಪ್ಪಿತ ನಿಲುವೂ ಹೌದು.



ಮುಖ್ಯಮಂತ್ರಿ ಸ್ಥಾನವನ್ನು ಹೆಚ್ಚು ಅವಧಿ ಅನುಭವಿಸಿದವರು ಲಿಂಗಾಯತರು, ಒಕ್ಕಲಿಗರು ಹಾಗೂ ಬ್ರಾಹ್ಮಣರು. ಹಿಂದುಳಿದವರ ಪೈಕಿ ಡಿ. ದೇವರಾಜ ಅರಸು, ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ, ಎನ್. ಧರ್ಮಸಿಂಗ್, ಸಿದ್ದರಾಮಯ್ಯ ಈ ಸ್ಥಾನಕ್ಕೇರಿದ್ದಾರೆ. ಅರಸು ಅವರು 7 ವರ್ಷ 7 ತಿಂಗಳು ಮುಖ್ಯಮಂತ್ರಿಯಾಗಿದ್ದರು. ಈ ಮೇ ಕಳೆದರೆ ಸಿದ್ದರಾಮಯ್ಯ ಏಳು ವರ್ಷ ಪೂರ್ಣ ಗೊಳಿಸಲಿದ್ದಾರೆ. ಉಳಿದ ಮೂವರು ಎರಡು ವರ್ಷದ ಆಸುಪಾಸು ಅಧಿಕಾರ ನಡೆಸಿದ್ದರು. 76 ವರ್ಷಗಳಲ್ಲಿ ಗರಿಷ್ಠ 16 ವರ್ಷಗಳಷ್ಟೇ ಹಿಂದುಳಿದವರು ಸರ್ಕಾರವನ್ನು ಮುನ್ನಡೆಸಿದ್ದಾರೆ. ದಲಿತ ಸಮುದಾಯಕ್ಕೆ ಅಧಿಕಾರ ಸಿಕ್ಕಿಯೇ ಇಲ್ಲ. ಈ ಲೆಕ್ಕಾಚಾರದಲ್ಲಿ, ಸಿದ್ದರಾಮಯ್ಯ ಮತ್ತವರ ಗುಂಪಿನ ನಡೆ ಸಮರ್ಥನೀಯ.

ಈ ಎಲ್ಲದರ ಮಧ್ಯೆಯೇ, ‘ಅಧಿಕಾರವನ್ನು ಒದ್ದು ಕಿತ್ತುಕೊಳ್ಳಬೇಕು’ ಎಂಬ ಶಿವಕುಮಾರ್ ಅವರ ಮಾತನ್ನು ಒಪ್ಪಲಾಗದು. ಅವರೇನೂ ಈ ಮಾತನ್ನು ಖಾಸಗಿಯಾಗಿ ಹೇಳಿದ್ದಲ್ಲ. ವಿಧಾನಸಭೆಯೊಳಗೆ ಏರಿದ ಧ್ವನಿಯಲ್ಲೇ ಅದನ್ನು ಪ್ರತಿಪಾದಿಸಿದ್ದಾರೆ. ಆದರೆ, ಇದೇನು ಅಳಿಯ ರಾಮರಾಯ, ಔರಂಗಜೇಬನ ಕಾಲವಲ್ಲ. ಇದು ಪ್ರಜಾಪ್ರಭುತ್ವ. ಎಷ್ಟು ಶಾಸಕರು ತಮ್ಮ ಬೆನ್ನಿಗಿದ್ದಾರೆ ಎಂಬ ಆಧಾರದ ಮೇಲೆ ನಾಯಕತ್ವ ನಿರ್ಧಾರವಾಗುತ್ತದೆ. ಹಾಗಾಗಿಯೇ, ಸಿದ್ದರಾಮಯ್ಯ ಅವರು ಶಾಸಕಾಂಗ ಪಕ್ಷದ ಸಭೆಯಲ್ಲೇ ನಾಯಕನ ಆಯ್ಕೆಯಾಗಲಿ ಎಂಬ ಅಸ್ತ್ರ ಹೂಡಿದ್ದಾರೆ. ಏಕೆಂದರೆ, ಕಾಂಗ್ರೆಸ್‌ನಲ್ಲಿ ಹಿಂದಿದ್ದ ಲಕೋಟೆ ಪದ್ಧತಿ ಈಗ ನಡೆಯುವುದಿಲ್ಲ ಎಂಬುದು ಸಿದ್ದರಾಮಯ್ಯ ಅವರಿಗೆ ಮಾತ್ರವಲ್ಲ ಆ ಪಕ್ಷದ ವರಿಷ್ಠರಿಗೂ ಗೊತ್ತಿದೆ.

ನಾಯಕರ ಮಧ್ಯದ ಬಡಿದಾಟ ಸರ್ಕಾರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಯಾವಾಗ ಅಸ್ಥಿರತೆಯ ಮಾತುಗಳು ಹೊರಬರುತ್ತವೋ ಆಗ ಅಧಿಕಾರಿಗಳು ನಿರ್ಲಕ್ಷ್ಯ ತಾಳುತ್ತಾರೆ. ಜನರ ಕೆಲಸಗಳು ಆಗುವುದಿಲ್ಲ. ಅಭಿವೃದ್ಧಿಯೂ ಹಳಿ ತಪ್ಪುತ್ತದೆ. ಈಗ ಆಗಿರುವುದೂ ಅದೇ. ಶೇಕಡ 40ರಷ್ಟು ಕಮಿಷನ್ ಸರ್ಕಾರ ಎಂದು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಆಂದೋಲನ ನಡೆಸಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಪರಿಸ್ಥಿತಿಯೇನೂ ಸುಧಾರಣೆಯಾಗಿಲ್ಲ. ಎಲ್ಲ ಹಂತಗಳಲ್ಲೂ ಭ್ರಷ್ಟಾಚಾರ ಮತ್ತಷ್ಟು ಹೆಚ್ಚಳವಾಗಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಸೇರಿದಂತೆ ಹಲವು ಹಗರಣಗಳು ಸರ್ಕಾರಕ್ಕೆ ಮೆತ್ತಿಕೊಂಡಿವೆ. ವೇದಿಕೆ ಮೇಲೆ ಜಿಲ್ಲಾಧಿಕಾರಿಗೆ ಏರು ಧ್ವನಿಯಿಂದ ಗದರಿದರೆ ಏನೂ ಪ್ರಯೋಜನವಿಲ್ಲ. ಆಡಳಿತದಲ್ಲಿ ಬಿಗಿ ಇದ್ದರೆ ಅಧಿಕಾರಿಗಳು ಮೈಮರೆಯದೇ ಕೆಲಸ ಮಾಡುತ್ತಾರೆ.

ಅಧಿಕಾರಾರೂಢರು ಜಗಳಕ್ಕೆ ಬಿದ್ದರೆ ಜನರ ರೋದನೆ ಕೇಳುವವರಾರು? ಶ್ರೀಸಾಮಾನ್ಯರ ಬವಣೆ ನೀಗಿಸಲು ಗ್ಯಾರಂಟಿ ಯೋಜನೆಗಳೇನೋ ನೆರವಾಗಿವೆ. ಬೆಲೆ ಏರಿಕೆಯ ತಾಪ ಜನರನ್ನು ಸುಡುತ್ತಿದೆ. ಬೊಕ್ಕಸ ಭರ್ತಿಗೆ ತೆರಿಗೆ ಏರಿಕೆಯೇ ದಾರಿಯಲ್ಲ. ಸೋರಿಕೆ ತಡೆಗಟ್ಟಿ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಅರ್ಹರಿಗೆ ಗ್ಯಾರಂಟಿಗಳ ಫಲ ತಲುಪಿಸಬೇಕು. ಜನಪರ ಆಡಳಿತವೆಂದರೆ, ದುರ್ಬಲರ ಹಿತ ಕಾಪಾಡುತ್ತಲೇ ಸಂಪನ್ಮೂಲ ಕ್ರೋಡೀಕರಣಕ್ಕೆ ಪರ್ಯಾಯ ದಾರಿ ಹುಡುಕುವುದು. ಇಲ್ಲದಿದ್ದರೆ, ‘ಉತ್ತಮ ಪ್ರಭುತ್ವ ಲೊಳಲೊಟ್ಟೆ’ ಎಂಬ ಪುರಂದರದಾಸರ ನುಡಿ ಸಿದ್ದರಾಮಯ್ಯನವರ ಕಾಲಕ್ಕೂ ಅನ್ವಯವಾಗುತ್ತದೆ.

ಚುರುಮುರಿ



ಅತಿಥಿ ತಿರಸ್ಕಾರ

• ಸಿ.ಎನ್.ರಾಜು

‘ಇನ್ಮೇಲೆ ನಾನು ಕಾಲೇಜಿಗೆ ಹೋಗೋದಿಲ್ಲ...’ ಬೇಸರದಿಂದ ಹೇಳಿದರು ಗಿರಿ.

‘ಹಾಗೆಲ್ಲಾ ಹಟ ಮಾಡಬೇಡಿ, ಕಾಲೇಜಿಗೆ ಹೋದ್ರೆ ಭವಿಷ್ಯ ಉಜ್ವಲವಾಗುತ್ತೆ, ಬದುಕು ಬಂಗಾರವಾಗುತ್ತೆ’ ಮನವೊಲಿಸುವ ಪ್ರಯತ್ನ ಮಾಡಿದರು ಅನು.

‘ನಾನು ಹಟ ಮಾಡ್ತಿಲ್ಲ, ನಮ್ಮನ್ನು ಕಾಲೇಜಿಗೆ ಸೇರಿಸುವುದಿಲ್ಲ ಅಂತ ಸರ್ಕಾರವೇ ಹಟ ಮಾಡ್ತಿದೆ. ನನ್ನಂತಹ ಐದು ಸಾವಿರ ಅತಿಥಿ ಉಪನ್ಯಾಸಕರನ್ನು ಮನೆಗೆ ಕಳಿಸಿದೆ. ನಾವು ಒಳ್ಳೆಯ ಲೆಕ್ಚರರ್‌ಗಳಲ್ಲವಂತೆ’.

‘ವಿದ್ಯಾರ್ಥಿಗಳಿಗೆ ನೀವು ಮೆಚ್ಚಿನ ಮೇಷ್ಟ್ರು ಆಗಿದ್ದೀರಿ. ನಿಮ್ಮ ಸಬ್ಜೆಕ್ಟ್‌ನಲ್ಲಿ ಈ ವರ್ಷ ಉತ್ತಮ ಫಲಿತಾಂಶ ಕೊಟ್ಟಿದ್ದೀರಿ, ಇಷ್ಟು ಸಾಲದಂತಾ?’

‘ವಿದ್ಯಾರ್ಥಿಗಳು ಮೆಚ್ಚಿದರೆ ಸಾಕಾಗುವುದಿಲ್ಲ, ಸರ್ಕಾರ ನಮ್ಮನ್ನು ಮೆಚ್ಚಬೇಕು’.

‘ಸರ್ಕಾರದ ಮುಂದೆಯೇ ಪಾಠ ಹೇಳಿ ನಿಮ್ಮ ಬೋಧನಾ ಸಾಮರ್ಥ್ಯ ತೋರಿಸಿ’.

‘ಕಾಲೇಜಿನಲ್ಲಿ ಪಾಠ ಹೇಳಲು ನಮ್ಮ ಕ್ವಾಲಿಫಿಕೇಷನ್ ಸಾಕಾಗುತ್ತಿಲ್ಲವಂತೆ. ಎಕ್ಸ್‌ಪೀರಿಯನ್ಸ್‌ಗಿಂತ ಸರ್ಟಿಫಿಕೇಟ್ ಕ್ವಾಲಿಫಿಕೇಷನ್ನೇ ಮುಖ್ಯವಂತೆ’.

‘ನಮಗೆ ಕಾಲೇಜಿಗೆ ಹೋಗುವ ಮಕ್ಕಳಿದ್ದಾರೆ, ಸಂಸಾರದ ಖರ್ಚುವೆಚ್ಚ ಹೆಚ್ಚಾಗಿದೆ. ಈ ಪರಿಸ್ಥಿತಿಯಲ್ಲಿ ನೀವು ಕಾಲೇಜು ಕೆಲ್ಸ ಕಳೆದುಕೊಂಡರೆ ಸಂಸಾರದ ನಿರ್ವಹಣೆ ಹೇಗ್ರೀ?’ ಅನು ಕಳವಳಗೊಂಡರು.

‘ಪರ್ಯಾಯ ಆದಾಯದ ಮಾರ್ಗ ನೋಡಿಕೊಳ್ಳಬೇಕು’.

‘ಪಾಠ ಹೇಳುವುದು ಬಿಟ್ಟರೆ ನಿಮಗೆ ಬೇರೆ ಕಸುಬು ಗೊತ್ತಿಲ್ಲವಲ್ರೀ’.

‘ಮುಂದೆ ಏನು ಮಾಡಬೇಕು ಎಂದು ಅತಿಥಿ ಉಪನ್ಯಾಸಕ ಗೆಳೆಯರು ಚರ್ಚೆ ಮಾಡ್ತೀವಿ’.

‘ಚರ್ಚಿಸಲು ಎಲ್ಲಿ ಸಭೆ ಸೇರ್ತೀರಿ?’

‘ಕೆಲಸ ಕಳೆದುಕೊಂಡ ಅತಿಥಿ ಉಪನ್ಯಾಸಕ ಗೆಳೆಯನೊಬ್ಬ ಫುಟ್‌ಪಾತ್‌ನಲ್ಲಿ ತರಕಾರಿ ಅಂಗಡಿ ಇಟ್ಟಿದ್ದಾನೆ. ಆ ಅಂಗಡಿಯಲ್ಲಿ ಕುಳಿತು ಚರ್ಚೆ ಮಾಡಿ, ಮುಂದೆ ನಾವು ಯಾವ ವ್ಯವಹಾರ, ವ್ಯಾಪಾರ ಆರಂಭಿಸಿ ಬದುಕು ಕಟ್ಟಿಕೊಳ್ಳಬೇಕು ಅಂತ ತೀರ್ಮಾನ ಮಾಡ್ತೀವಿ...’ ಎಂದು ಗಿರಿ ಹೊರಟರು.

ಸಂಗತ

‘ನಾನು’ ಎಂಬ ಮೋಹದ ಪಾಶ

ಮನುಷ್ಯತ್ವವನ್ನು ಗೌರವಿಸುವುದು ಮತ್ತು ಮನುಷ್ಯತ್ವದೊಂದಿಗೆ ಬದುಕುವುದು ಮುಖ್ಯ

• ಮಲ್ಲಿಕಾರ್ಜುನ ಹೆಗ್ಗಳಗಿ

ರನ್ನ ಮಹಾಕವಿಯು ‘ಗದಾಯುದ್ಧ’ ಕಾವ್ಯದಲ್ಲಿ, ಅಧಿಕಾರ ಕೇಂದ್ರದಲ್ಲಿ ಇರುವವರು ಜೀವಪರವಾಗಿ, ಸರಳವಾಗಿ ಇದ್ದು, ಅಹಂ ಕಳೆದುಕೊಂಡ ಮೇಲೆಯೇ ಮನುಷ್ಯರಾಗುವುದು ಎಂದು ಬದುಕಿನ ಗಮ್ಯವನ್ನು ಬಹಳ ಸೊಗಸಾಗಿ ಬಿಚ್ಚಿಡುತ್ತಾನೆ.

‘ನಾನು ಕೂಡ ಮನುಷ್ಯ. ನಾನೂ ತಪ್ಪುಗಳನ್ನು ಮಾಡಬಹುದು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜೆರೋಧಾ ಸಂಸ್ಥೆಯ ಸಹಸಂಸ್ಥಾಪಕ ನಿಖಿಲ್ ಕಾಮತ್ ಅವರು ನಡೆಸಿಕೊಡುವ ‘ಪೀಪಲ್ ಬೈ ಡಬ್ಲ್ಯುಟಿಎಫ್’ ಪಾಡ್‌ಕಾಸ್ಟ್ ಸರಣಿಯಲ್ಲಿ ಹೇಳಿದ ಮಾತನ್ನು ಓದಿದಾಗ (ಪ್ರ.ವಾ., ಜ. 11), ರನ್ನ ಕವಿಯು ಅಧಿಕಾರದ ಕೇಂದ್ರದಲ್ಲಿರುವವರಿಗೆ ಬದುಕಿನ ಪಾಠ ಹೇಳಿದ್ದು ನೆನಪಾಯಿತು.

ಮೋದಿಯವರು 2014ರಲ್ಲಿ ಮೊದಲ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಲೋಕಸಭೆಯ ಮೆಟ್ಟಿಲುಗಳಿಗೆ ಹಣೆ ಹಚ್ಚಿ ನಮಸ್ಕರಿಸಿ ‘ನಾನು ದೇಶದ ಪ್ರಧಾನ ಸೇವಕ’ ಎಂದಿದ್ದರು. ಹಿಂದಿನ ಲೋಕಸಭಾ ಚುನಾವಣಾ ಪ್ರಚಾರ ಭಾಷಣದಲ್ಲಿ ‘ನನ್ನನ್ನು ದೇವರೇ ಕಳಿಸಿದ್ದಾನೆ’ ಎಂದೂ ಹೇಳಿಕೊಂಡಿದ್ದರು. ಪ್ರಧಾನಿಯಾದ ಹೊಸದರಲ್ಲಿ ತುಸು ಭಾವುಕರಾಗಿ ತಾವು ಪ್ರಧಾನ ಸೇವಕ ಎಂದು ಅವರು ಹೇಳಿರಬಹುದು. ಚುನಾವಣಾ ಪ್ರಚಾರ ಸಂದರ್ಭದಲ್ಲಿ ತಮ್ಮನ್ನು ದೇವರು ಕಳಿಸಿದ್ದಾನೆ ಎಂದು ಹೇಳಿಕೊಂಡದ್ದು ಮತ ಸೆಳೆಯುವ ತಂತ್ರವಾಗಿರಬಹುದು. ಆದರೆ ಅವರು ಈಗ ‘ನಾನು ಕೂಡ ಮನುಷ್ಯ’ ಎಂದು ವಾಸ್ತವದ ನೆಲೆಯಲ್ಲಿ ನಮ್ರವಾಗಿ ಹೇಳಿದ್ದು ವಿಶೇಷ ಎನಿಸಿತು.

ಮನುಷ್ಯರಾಗುವುದಕ್ಕೆ ಆವರಣಗಳನ್ನು ಕಳಚಬೇಕು. ಸಾರ್ವಜನಿಕ ಬದುಕಿನಲ್ಲಿ ಹುದ್ದೆ, ಪ್ರಶಸ್ತಿ, ಬಿರುದು, ಬಹುಪರಾಕು ಬರುತ್ತವೆ. ಇವು ತಾನು ವಿಶೇಷ ವ್ಯಕ್ತಿ, ಉಳಿದವರಿಗಿಂತ ಮೇಲಿನವನು ಎಂಬ ಅಹಂ ಸೃಷ್ಟಿಸುವ ಅಪಾಯವಿರುತ್ತದೆ. ಆದರೆ ಮೂಲಭೂತವಾಗಿ ನಿಜವಾದ ಅರ್ಥದಲ್ಲಿ ನಾವೆಲ್ಲ ಸಾಮಾನ್ಯ ಮನುಷ್ಯರು. ಮನುಷ್ಯತ್ವದ ಹಿರಿಮೆ ಮತ್ತು ಮರ್ಯಾದೆ ಕ್ಷೀಣಿಸದಂತೆ ಮನುಷ್ಯತ್ವವನ್ನು ಗೌರವಿಸುವುದು ಮತ್ತು ಮನುಷ್ಯತ್ವದೊಂದಿಗೆ ಬದುಕುವುದು ಅವಶ್ಯ.

ಕುವೆಂಪು ಅವರ ‘ಸ್ವರ್ಗ ದ್ವಾರದಿ ಯಕ್ಷಪ್ರಶ್ನೆ’ ಎಂಬ ಕವಿತೆ ನಿಜದ ನೆಲೆಯನ್ನು ವಿವರಿಸುತ್ತದೆ: ಕುವೆಂಪು ಸ್ವರ್ಗದ ಬಾಗಿಲಲ್ಲಿ ಬಂದು ನಿಂತುಕೊಳ್ಳುತ್ತಾರೆ. ದ್ವಾರಪಾಲಕ ಒಳಗೆ ಬಿಡಲು ನಿರಾಕರಿಸುತ್ತಾನೆ. ಕುವೆಂಪು ತಮ್ಮ ಪದವಿ, ಪ್ರಶಸ್ತಿ, ಹುದ್ದೆ ಹೇಳುತ್ತಾರೆ. ದ್ವಾರಪಾಲಕ ಬಿಡುವುದಿಲ್ಲ. ತಾನು ರಾಷ್ಟ್ರಕವಿ ಎಂದೂ ಹೇಳಿಕೊಳ್ಳುತ್ತಾರೆ. ಇದಕ್ಕೂ ದ್ವಾರಪಾಲಕ ಒಪ್ಪುವುದಿಲ್ಲ. ‘ಲೋಕದ ಹುದ್ದೆಗಳು ಬೇಕಾಗಿಲ್ಲ. ನೀನು ನಿಜವಾಗಿ ಯಾರಾಗಿರುವಿ, ಏನಾಗಿರುವಿ ಹೇಳು. ನಿನ್ನ ಅಂತರಾತ್ಮದ ಹೆಸರು ಹೇಳು’ ಎಂದು ದ್ವಾರಪಾಲಕ ಜೋರು ಮಾಡುತ್ತಾನೆ. ಕೊನೆಗೆ ಕುವೆಂಪು ‘ನಾನು ಹೇಮಿಯ ಗಂಡ’ ಎಂದು ಹೇಳುತ್ತಾರೆ. ಒಳಗೆ ಪ್ರವೇಶಿಸಲು ಅವಕಾಶ ದೊರೆಯುತ್ತದೆ. ನಿದ್ರೆಯಲ್ಲಿ ಕನಸು ಕಾಣುತ್ತಿದ್ದ ಕವಿಗೆ ಎಚ್ಚರವಾಗುತ್ತದೆ.

ಕವಿ ದ.ರಾ.ಬೇಂದ್ರೆ ಅವರು ತಮ್ಮ ‘ನಾನು’ ಎಂಬ ಕವನದಲ್ಲಿ ‘ಅದು ಇದು ಏನೂ ಅಲ್ಲ, ನಾನೊಬ್ಬ ನರನು ಮಾತ್ರ’ ಎಂಬ ಅರ್ಥ ಬರುವ ರೀತಿಯಲ್ಲಿ ಬರೆದಿದ್ದಾರೆ.

ಈಗ ಬಿರುದು, ಪದವಿ ಹುಚ್ಚು ವಿಪರೀತ ಹೆಚ್ಚಾಗಿದೆ. ಹಣ ಕೊಟ್ಟು ನಕಲಿ ಗೌರವ ಡಾಕ್ಟರೇಟ್ ಪಡೆದುಕೊಳ್ಳುತ್ತಾರೆ. ತಾವು ಪ್ರಶಸ್ತಿ ಪಡೆದ ಬಗ್ಗೆ ಗಲ್ಲಿ ಗಲ್ಲಿಗಳಲ್ಲಿ ಬ್ಯಾನರ್ ಕಟ್ಟುತ್ತಾರೆ. ಹಣ ಕೊಟ್ಟು ಸನ್ಮಾನ, ಮೆರವಣಿಗೆ ಮಾಡಿಸಿಕೊಳ್ಳುತ್ತಾರೆ.

ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್, ನಾಡೋಜದಂತಹ ಪದವಿಗಳನ್ನು ತಮ್ಮ ಹೆಸರಿನೊಂದಿಗೆ ಬರೆದುಕೊಳ್ಳಬಾರದು ಎಂಬ ನೀತಿಸೂತ್ರ ಇದೆ. ನ್ಯಾಯಾಲಯದ ಆದೇಶವೂ ಇದೆ. ಡಾಕ್ಟರೇಟ್ ಗೌರವಕ್ಕೆ ಪಾತ್ರರಾದವರು ಇದನ್ನು ಉಲ್ಲಂಘಿಸಿ ನಡೆಯುವುದನ್ನು ನೋಡಿದಾಗ ಬೇಸರವಾಗುತ್ತದೆ.



ಮುಖ್ಯಮಂತ್ರಿ ಆಗಿದ್ದ ಎಸ್.ಬಂಗಾರಪ್ಪ ಅವರ ಎದುರು ಕಾರ್ಮಿಕ ನಾಯಕ ಕೆ.ಎಸ್.ಶರ್ಮಾ ಕಾರ್ಮಿಕರೊಂದಿಗೆ ಪ್ರತಿಭಟನೆ ನಡೆಸುತ್ತಿದ್ದರು. ಶರ್ಮಾ ಮುಖ್ಯಮಂತ್ರಿ ಬಳಿಗೆ ಮುನ್ನುಗ್ಗಲು ಪ್ರಯತ್ನಿಸುತ್ತಿದ್ದಾಗ ಅಧಿಕಾರಿಗಳು ತಡೆದು ನಿಲ್ಲಿಸಿದ್ದರು. ಇದನ್ನು ಗಮನಿಸಿದ ಬಂಗಾರಪ್ಪ, ಪ್ರತಿಭಟನಕಾರರ ಬಳಿಗೆ ಬಂದು, ಅಧಿಕಾರಿಗಳನ್ನು ಕರೆದು, ‘ಶರ್ಮಾ ಅವರು ನಾನು ಲಾ ಓದುತ್ತಿದ್ದಾಗ ಸಹಪಾಠಿಯಾಗಿದ್ದರು. ಓದಿನಲ್ಲಿ ನನಗಿಂತ ಮುಂದಿದ್ದರು. ನನಗೆ ಮಾರ್ಗದರ್ಶನ ಕೂಡ ಮಾಡಿದ್ದಾರೆ. ಬದುಕಿನ ಓಟದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದೇನೆ, ಅವರು ಕಾರ್ಮಿಕ ನಾಯಕರಾಗಿದ್ದಾರೆ. ಅವರನ್ನು ನನ್ನಷ್ಟೇ ಗೌರವದಿಂದ ಕಾಣಬೇಕು. ಅವರ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹರಿಸಿಕೊಡಿ’ ಎಂದು ಹೇಳಿದ್ದರು.

ಮನುಷ್ಯರು ಉಪಾಧಿಗಳನ್ನು ನಿರಾಕರಿಸಿ ಮುಕ್ತವಾದರೆ ಮಾತ್ರ ಸಮಾಧಾನದಿಂದ ಬದುಕಬಹುದು. ಇದು ಲೋಕದಲ್ಲಿ ಲೇಸೆನಿಸಿಕೊಂಡು ಬಾಳುವ ದಾರಿ ಎಂದು ಶರಣರು ಹೇಳಿದ್ದಾರೆ. ವೈವಿಧ್ಯದಿಂದ ಕೂಡಿದ ಈ ಬದುಕಿನಲ್ಲಿ ಭಿನ್ನ ಭಿನ್ನ ಅವಕಾಶಗಳು ನಮಗೆ ಒಲಿದುಬರುತ್ತವೆ. ಮೇಲು–ಕೀಳು ಎಂಬುದೆಲ್ಲ ನಾವೇ ಸೃಷ್ಟಿಸಿದ ಗೋಡೆಗಳು. ಈ ಎಚ್ಚರ ಸದಾ ನಮ್ಮಲ್ಲಿ ಇರಲಿ.

ವಾಚಕರ ವಾಣಿ

‘ವಚನ’ ವಿಶ್ವವಿದ್ಯಾಲಯಕ್ಕೆ ಬೇಡಿಕೆ ಅನಪೇಕ್ಷಣೀಯ

ರಾಜ್ಯ ಸರ್ಕಾರವು 12ನೇ ಶತಮಾನದ ಬಸವಣ್ಣ ಅವರನ್ನು ‘ಸಾಂಸ್ಕೃತಿಕ ನಾಯಕ’ ಎಂದು ಘೋಷಣೆ ಮಾಡಿರುವಂತೆ, ಅವರ ವಚನಗಳನ್ನು ಪ್ರಚುರಪಡಿಸಲು ‘ವಚನ’ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬೇಡಿಕೆ ಇರಿಸಿರುವ ಸುದ್ದಿಯನ್ನು (ಪ್ರ.ವಾ., ಜ. 15) ಓದಿದಾಗ, ಅದು ಒಳ್ಳೆಯದು ಎನಿಸಿದರೂ ಅಂತಹ ಕ್ರಮದಿಂದ ಆಗುವ ಆರ್ಥಿಕ ಹೊರೆಯ ಬಗ್ಗೆಯೂ ಯೋಚಿಸಬೇಕಾದ ಅಗತ್ಯವಿದೆ ಎನಿಸಿತು. ಈಗಾಗಲೇ ಜಾನಪದ ವಿಶ್ವವಿದ್ಯಾಲಯ ಹಾಗೂ ಕನ್ನಡದ ಹೆಸರಿನಲ್ಲಿ ಹಂಪಿ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿವೆ. ಆದರೆ ಸರ್ಕಾರ ಅಗತ್ಯ ಆರ್ಥಿಕ ನೆರವು ನೀಡದೆ ಅವು ಸೊರಗುತ್ತಿವೆ ಎನ್ನುವ ಆಕ್ಷೇಪ ಇದೆ. ಹಂಪಿ ಕನ್ನಡ ವಿಶ್ವವಿದ್ಯಾಲಯವಂತೂ ಸರ್ಕಾರದ ಆರ್ಥಿಕ ನೆರವು ಕಡಿಮೆಯಾಗಿ ಸಂಕಷ್ಟ ಎದುರಿಸುತ್ತಿದೆ. ಮೂಗಿಗಿಂತ ಮೂಗುತಿ ಭಾರ ಎಂಬಂತೆ, ಒಂದು ವಿಶ್ವವಿದ್ಯಾಲಯಕ್ಕೆ ಕುಲಪತಿ, ಆಡಳಿತ ವಿಭಾಗ, ಸಿಬ್ಬಂದಿ ಹೀಗೆ ಅವರ ವೇತನದ ಹೊರೆಯೇ ಹೆಚ್ಚಾಗಿ ನಿಜವಾದ ಕಾರ್ಯಕ್ಕೆ ಹಣ ಇಲ್ಲದಂತೆ ಆಗುತ್ತದೆ.

ಈಗ ವಚನ ವಿಶ್ವವಿದ್ಯಾಲಯಕ್ಕೆ ಬೇಡಿಕೆ ಬಂದಂತೆ ನಾಳೆ ತತ್ವಪದಗಳ ಪ್ರಚಾರಕ್ಕೆ ‘ತತ್ವಪದ’ ವಿಶ್ವವಿದ್ಯಾಲಯ, ಹಾಗೆಯೇ ಕನಕದಾಸ- ಪುರಂದರದಾಸರ ಕೀರ್ತನೆಗಳ ಪ್ರಚಾರಕ್ಕಾಗಿ ‘ಕೀರ್ತನೆ’ ವಿಶ್ವವಿದ್ಯಾಲಯ ಸ್ಥಾಪನೆಗೂ ಬೇಡಿಕೆ ಬರಬಹುದು. ಇರುವ ವಿಶ್ವವಿದ್ಯಾಲಯಗಳಲ್ಲೇ ವಚನ, ತತ್ವಪದ ಹಾಗೂ ಕೀರ್ತನೆಯಂತಹ ವಿಷಯಗಳ ಬಗ್ಗೆ ಅಧ್ಯಯನ, ಸಂಶೋಧನೆ ನಡೆಸಲು ಪ್ರತ್ಯೇಕ ವಿಭಾಗಗಳನ್ನು ತೆರೆದು, ಸಂಶೋಧನಾ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಬೇಕು. ಆಗ ಅವುಗಳ ಬೆಳವಣಿಗೆ ಸಾಧ್ಯವಾಗುತ್ತದೆ. ಜೊತೆಗೆ ಹೆಚ್ಚಿನ ಆರ್ಥಿಕ ಹೊರೆಯೂ ತಪ್ಪುತ್ತದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಸೋತಾಗ ಮಾತ್ರ ಶಿಸ್ತು ಸಂಹಿತೆಯೇ?

ಭಾರತ ಕ್ರಿಕೆಟ್ ತಂಡದಲ್ಲಿ ಶಿಸ್ತು ಸಂಹಿತೆಯನ್ನು ಬಿಗಿಗೊಳಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸಿದ್ಧತೆ ನಡೆಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 15). ತಂಡವು ಗೆದ್ದು ಬೀಗುತ್ತಿರುವಾಗ ಈ ಬಗ್ಗೆ ಚರ್ಚೆ ಆಗುವುದೇ ಇಲ್ಲ. ಈಗ ತಂಡವು ಸರಣಿ ಸೋಲು ಕಂಡಿದೆ. ಆದಕಾರಣ ಎಲ್ಲರೂ ಶಿಸ್ತು ಸಂಹಿತೆ ಬಗ್ಗೆ ಮತ್ತು ಅದನ್ನು ಇನ್ನಷ್ಟು ಬಿಗಿಗೊಳಿಸುವ ಬಗ್ಗೆ ಯೋಚಿಸುತ್ತಿದ್ದಾರೆ. ಅಂದರೆ ಈ ನೀತಿ– ನಿಯಮಗಳು ಸೋಲು ಹಾಗೂ ಗೆಲುವಿನ ಮೇಲೆ ಅವಲಂಬಿತವಾಗಿವೆಯೇ?

ಆನೆ ನಡೆದದ್ದೇ ದಾರಿ ಎಂಬಂತೆ ಮೊದಲಿನಿಂದಲೂ ಭಾರತದಲ್ಲಿ ಕ್ರಿಕೆಟ್‌ಗೆ ಹಾಗೂ ಕ್ರಿಕೆಟ್ ಆಟಗಾರರಿಗೆ ಅತಿಯಾದ ಪ್ರಾಮುಖ್ಯ ನೀಡಲಾಗುತ್ತಿದೆ. ಬೇರೆ ಕ್ರೀಡೆಗಳು ಅನುದಾನದ ಕೊರತೆ ಎದುರಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ಕ್ರಿಕೆಟ್ ಹಾಗೂ ಅದರ ಆಟಗಾರರಿಗೆ ಸೌಲಭ್ಯಗಳ ಜೊತೆಗೆ ವಿನಾಯಿತಿಗಳನ್ನೂ ಹೆಚ್ಚಿಗೆ ನೀಡುವುದು ಸರಿಯಲ್ಲ. ಕ್ರಿಕೆಟ್ ಪ್ರವಾಸದ ಸಮಯದಲ್ಲಿ ಆಟಗಾರರು ಕುಟುಂಬದ ಸದಸ್ಯರನ್ನು ತಮ್ಮೊಂದಿಗೆ ಕರೆದೊಯ್ಯುವುದಕ್ಕೆ ಸಂಬಂಧಿಸಿದ ನಿಯಮಗಳ ಸಾಧಕ–ಬಾಧಕ ಕುರಿತು ಕೂಲಂಕಷವಾಗಿ ಚರ್ಚೆ ಆಗಬೇಕು.

ಕಡೂರು ಫಣಿಶಂಕರ್, ಬೆಂಗಳೂರು

ಬಡಾವಣೆ ಅಭಿವೃದ್ಧಿಗೆ ಬೇಕು ನೂತನ ಯೋಜನೆ

ಬೆಂಗಳೂರಿನ ಎಷ್ಟೋ ಬಡಾವಣೆಗಳ ಅಭಿವೃದ್ಧಿಯೇ ಸಾಧ್ಯವಾಗದಿರುವಾಗ ಆರು ಹೊಸ ಬಡಾವಣೆಗಳನ್ನು ರೂಪಿಸಲು ಉದ್ದೇಶಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಚಟುವಟಿಕೆಯನ್ನು (ಬಿಡಿಎ) ಕೆಲ ಕಾಲ ಸ್ಥಗಿತಗೊಳಿಸುವುದು ಒಳ್ಳೆಯದು ಎಂದು ಟಿ.ವಿ.ಬಿ.ರಾಜನ್ ಅಭಿಪ್ರಾಯಪಟ್ಟಿರುವುದು (ವಾ.ವಾ., ಜ. 15) ಸರಿಯಾಗಿದೆ. ಹೊಸ ಬಡಾವಣೆ ರೂಪಿಸುವಂತಹ ಕೆಲಸವನ್ನು 15–20 ವರ್ಷ ಬದಿಗೆ ಸರಿಸಬೇಕು. ಅದರ ಬದಲು ತುರ್ತಾಗಿ ಆಗಬೇಕಿರುವ ಕೆಲಸಗಳತ್ತ ಗಮನಹರಿಸಬೇಕು.

ಬೆಂಗಳೂರಿಗೆ ಹೊಸದಾಗಿ ಸೇರಿಕೊಂಡಿರುವ ಪ್ರದೇಶಗಳಿಗೆ ಮೂಲ ಸೌಕರ್ಯ ಕಲ್ಪಿಸುವ ಕೆಲಸ ಆದ್ಯತೆಯ ಮೇರೆಗೆ ಆಗಬೇಕು. ನಗರದಲ್ಲಿ ಸಂಗ್ರಹವಾಗುವ ಕಸದ ವೈಜ್ಞಾನಿಕ ವಿಲೇವಾರಿಗೆ ಹೆಚ್ಚಿನ ಗಮನ ಕೊಡುವುದು ಅಗತ್ಯ. ಮಳೆನೀರು ಸಂಗ್ರಹದಂತಹ ಕೆಲಸಗಳಿಗೆ ಒತ್ತು ಸಿಗಬೇಕು. ಸಂಚಾರ ದಟ್ಟಣೆಯ ಸಮಸ್ಯೆ ನಿವಾರಣೆ ಆಗದಿದ್ದರೆ ನಗರದ ವರ್ಚಸ್ಸಿಗೆ ಜಾಗತಿಕ ಮಟ್ಟದಲ್ಲಿ ಕುಂದು ಉಂಟಾಗುವುದು ಶತಃಸಿದ್ಧ. ನಿವಾರಣೆ ಸಲುವಾಗಿ ಕ್ರಿಯಾಯೋಜನೆ ರೂಪಿಸಿ, ಅದನ್ನು ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ತರಬೇಕು.

ಎನ್.ವಿ.ಸೂರ್ಯಪ್ರಕಾಶ, ಬೆಂಗಳೂರು

ಸಾಹಿತ್ಯ ಸಮ್ಮೇಳನದಲ್ಲಿ ರಾಜಕಾರಣಿಗಳ ಪಾರುಪತ್ಯ

ಜಗಳೂರಿನಲ್ಲಿ ಇತ್ತೀಚೆಗೆ ನಡೆದ ದಾವಣಗೆರೆ ಜಿಲ್ಲಾ ಸಾಹಿತ್ಯ ಸಮ್ಮೇಳನದ ಮೆರವಣಿಗೆ ಅದ್ದೂರಿಯಾಗಿತ್ತು. ವಿಚಾರಗೋಷ್ಠಿಗಳಿಗೆ ಯಥಾಪ್ರಕಾರ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಆದರೆ ಈ ಬಾರಿಯ ಸಮ್ಮೇಳನದ ಅಷ್ಟೂ ಜವಾಬ್ದಾರಿಯನ್ನು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷರ ಬದಲಿಗೆ ಸ್ಥಳೀಯ ಶಾಸಕರು ವಹಿಸಿಕೊಂಡಿದ್ದುದು ಎದ್ದು ಕಾಣುತ್ತಿತ್ತು. ಊರಿನ ತುಂಬಾ ಅವರ ಹಾಗೂ ಅವರ ಅನುಯಾಯಿಗಳ ಕಟೌಟ್‌ಗಳು ರಾರಾಜಿಸುತ್ತಿದ್ದವು. ಆಡಳಿತದ ವೈಫಲ್ಯಗಳನ್ನು ಪ್ರಶ್ನಿಸಬೇಕಾದ ಇಂಥ ಸಮ್ಮೇಳನಗಳಲ್ಲಿ ರಾಜಕೀಯ ನಾಯಕರ ಪ್ರವೇಶ ಕಳವಳಕಾರಿ ಸಂಗತಿಯಾಗಿ ಕಂಡುಬಂತು.

ಗುರು ಜಗಳೂರು, ಹರಿಹರ

‘ಜನದ್ರೋಹಿ’ಗಳು ಪಕ್ಷಾತೀತರು

‘ಜನಪ್ರತಿನಿಧಿಗಳು ಜನದ್ರೋಹಿಗಳಾದಾಗ ಅವರನ್ನು ಜನರೇ ವಿಚಾರಿಸಿಕೊಳ್ಳಬೇಕಾಗುತ್ತದೆ’ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾತು (ಕಿಡಿನುಡಿ, ಜ. 14) ಅಕ್ಷರಶಃ ಸತ್ಯ. ಆದರೆ, ಈ ಮಾತನ್ನು ವಿರೋಧ ಪಕ್ಷಗಳ ನಾಯಕರಿಗೆ ಮಾತ್ರ ಸೀಮಿತ ಮಾಡುವುದು ಒಪ್ಪುವಂಥದ್ದಲ್ಲ. ಎಲ್ಲ ಪಕ್ಷಗಳಲ್ಲಿಯೂ ಜನದ್ರೋಹದ ನಡೆ ಇರುವ ಜನಪ್ರತಿನಿಧಿಗಳು ಇರುವ ಸಂಭವ ಇದ್ದೇ ಇರುತ್ತದೆ. ಜನಪ್ರತಿನಿಧಿಗಳು ಅಧಿಕಾರ ಇರುವಾಗ ಒಂದು ರೀತಿಯ ನಡೆ, ಅಧಿಕಾರದಲ್ಲಿ ಇಲ್ಲದಿದ್ದಾಗ ಮತ್ತೊಂದು ರೀತಿಯ ನಡೆ ಪ್ರದರ್ಶಿಸುವ ನಿದರ್ಶನಗಳು ಜನರ ಕಣ್ಣಮುಂದೆ ಇವೆ.


ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಬೆಂಗಳೂರು ಸ್ಥಿತಿ ಭಾರಿ ಅಪಾಯಕಾರಿ

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಅಂತರ್ಜಲದ ಪ್ರಮಾಣವು ಭಾರಿ ಅಪಾಯಕಾರಿ ಸ್ಥಿತಿಯಲ್ಲಿದೆ. ಕೇಂದ್ರ ಅಂತರ್ಜಲ ಮಂಡಳಿಯ ವರದಿಯ ಪ್ರಕಾರ, ಬೆಂಗಳೂರು ನಗರ ಸೇರಿದಂತೆ ರಾಜ್ಯದ ಐದು ಜಿಲ್ಲೆಗಳಲ್ಲಿ ಅಂತರ್ಜಲದ ಬಳಕೆ ಪ್ರಮಾಣವು ಶೇ 100ಕ್ಕಿಂತಲೂ ಹೆಚ್ಚಾಗಿದೆ. ಈ ಜಿಲ್ಲೆಗಳಲ್ಲಿ ಭವಿಷ್ಯದ ಬಳಕೆಗೆ ಅಂತರ್ಜಲವೇ ಸಿಗುವುದಿಲ್ಲ. ಇವುಗಳ ಜತೆಗೆ, ರಾಜ್ಯದ 45 ತಾಲ್ಲೂಕುಗಳು ಅಂತರ್ಜಲವನ್ನು ಮಿತಿಮೀರಿ ಬಳಸುತ್ತಿವೆ...



ಪ್ರಜಾವಾಣಿ ವಾರ್ತೆ

ಕೇಂದ್ರ ಅಂತರ್ಜಲ ಮಂಡಳಿಯು ದೇಶದ ಅಂತರ್ಜಲ ಸಂಪನ್ಮೂಲದ ಸ್ಥಿತಿಗತಿ ಬಗ್ಗೆ ವರದಿ ಬಿಡುಗಡೆ ಮಾಡಿದೆ. ವಿವಿಧ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳನ್ನು ಘಟಕಗಳನ್ನಾಗಿ (ಬ್ಲಾಕ್, ಮಂಡಲ ಅಥವಾ ತಾಲ್ಲೂಕು) ವಿಂಗಡಿಸಿ, ಅಂತರ್ಜಲದ ಲಭ್ಯತೆ, ಬಳಕೆ ಮತ್ತು ಭವಿಷ್ಯದ ಬಳಕೆಗೆ ಲಭ್ಯವಿರುವ ನೀರಿನ ಪ್ರಮಾಣದ ದತ್ತಾಂಶವನ್ನು ಪ್ರಕಟಿಸಿದೆ.


ಕರ್ನಾಟಕದಲ್ಲಿ ತಾಲ್ಲೂಕುವಾರು ಅಂತರ್ಜಲ ಪ್ರಮಾಣದ ಮೌಲ್ಯಮಾಪನ ಮಾಡಲಾಗಿದೆ. ರಾಜ್ಯದಲ್ಲಿ ವಾರ್ಷಿಕವಾಗಿ 1,874 ಕೋಟಿ ಘನ ಮೀಟರ್ ಅಂತರ್ಜಲ ಮರುಪೂರಣವಾಗಿದ್ದರೆ, ವಾರ್ಷಿಕವಾಗಿ 1,688 ಕೋಟಿ ಘನ ಮೀಟರ್‌ನಷ್ಟು ಅಂತರ್ಜಲ ಬಳಸಬಹುದು ಎಂದು ವರದಿ ಹೇಳಿದೆ. 2024ರಲ್ಲಿ 1,155 ಕೋಟಿ ಘನ ಮೀಟರ್ ಅಂತರ್ಜಲವನ್ನು (ಶೇ 68.44) ಬಳಕೆ ಮಾಡಲಾಗಿದೆ. 2023ಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಅಂತರ್ಜಲ ಬಳಕೆಯ ಪ್ರಮಾಣವು ಶೇ 2.22ರಷ್ಟು ಹೆಚ್ಚಳವಾಗಿದೆ.

ಮೌಲ್ಯಮಾಪನ ಮಾಡಲಾದ 237 ಘಟಕಗಳ (ತಾಲ್ಲೂಕುಗಳ) ಪೈಕಿ, 45 ಘಟಕಗಳು (ಶೇ 18.99) ಭಾರಿ ಅಪಾಯಕಾರಿ ಘಟಕಗಳೆಂದು ಗುರುತಿಸಲಾಗಿದೆ. ಇಲ್ಲಿ ಅಂತರ್ಜಲವನ್ನು ಮಿತಿಮೀರಿ ಬಳಸಲಾಗಿದೆ. 15 ಘಟಕಗಳನ್ನು (ಶೇ 6.33) ಅಪಾಯಕಾರಿ ಎಂದು, 33 ಘಟಕಗಳನ್ನು ಶೇ (13.92) ಮಧ್ಯಮ ಅಪಾಯಕಾರಿ ಎಂದು ಗುರುತಿಸಲಾಗಿದೆ. 144 ಘಟಕಗಳನ್ನು (ಶೇ 60.76) ಸುರಕ್ಷಿತ ಎಂದು ಪಟ್ಟಿ ಮಾಡಲಾಗಿದೆ. ಅಂದರೆ, ಈ 144 ತಾಲ್ಲೂಕುಗಳಲ್ಲಿ ಮಾತ್ರವೇ ಅಂತರ್ಜಲವು ಸುರಕ್ಷಿತ ಪ್ರಮಾಣದಲ್ಲಿದೆ. ಕ್ಷಾರಯುಕ್ತ ಅಂತರ್ಜಲ ಇರುವ ಘಟಕಗಳು ರಾಜ್ಯದಲ್ಲಿ ಇಲ್ಲ ಎಂದು ವರದಿ ಹೇಳಿದೆ.

ಅತ್ಯಂತ ಆತಂಕದ ವಿಚಾರವೆಂದರೆ, ಅಂತರ್ಜಲದ ಬಳಕೆಯ ಪ್ರಮಾಣವು ಶೇ 100ಕ್ಕಿಂತ ಹೆಚ್ಚಿರುವ ಜಿಲ್ಲೆಗಳಲ್ಲಿ ರಾಜಧಾನಿ ಬೆಂಗಳೂರು ಕೂಡ ಸೇರಿದೆ. ಬೆಂಗಳೂರಿನಲ್ಲಿ ಶೇ 186.70ರಷ್ಟು ಅಂತರ್ಜಲವನ್ನು ಕಳೆದ ವರ್ಷ ಬಳಕೆ ಮಾಡಲಾಗಿದೆ. ರಾಜಧಾನಿ ಮಾತ್ರವಲ್ಲದೆ, ಅದಕ್ಕೆ ಹೊಂದಿಕೊಂಡಿರುವ ಬೆಂಗಳೂರು ಗ್ರಾಮಾಂತರ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಜತೆಗೆ ಚಿತ್ರದುರ್ಗ ಜಿಲ್ಲೆಗಳಲ್ಲಿ ಅಂತರ್ಜಲದ ಬಳಕೆಯ ಪ್ರಮಾಣವು ಭಾರಿ ಅಪಾಯಕಾರಿ ಸ್ಥಿತಿಯಲ್ಲಿದೆ.

ದೇಶದಲ್ಲಿ ಮಳೆಯೇ ಅಂತರ್ಜಲ ಮರುಪೂರಣದ ಪ್ರಮುಖ ಮೂಲವಾಗಿದ್ದು, ಕೃಷಿ ಮತ್ತು ಕುಡಿಯುವ ನೀರಿನ ಬಳಕೆಗೆ ದೇಶದಲ್ಲಿ ಅಂತರ್ಜಲವೇ ಮೂಲಾಧಾರವಾಗಿದೆ. ಕರ್ನಾಟಕದಲ್ಲಿ ವಾಡಿಕೆಯಲ್ಲಿ ಬೀಳುವ ಮಳೆಯ ಸರಾಸರಿ ಪ್ರಮಾಣ 113.16 ಮಿ.ಮೀ. 2023ರಲ್ಲಿ 91.42 ಸೆಂ.ಮೀ ಮಳೆ ಬಿದ್ದಿದ್ದರೆ, 2024ರಲ್ಲಿ (ಅಂತರ್ಜಲ ಪರೀಕ್ಷೆ ಮಾಡುವ ವೇಳೆ) 93.62 ಸೆಂ. ಮೀ.ನಷ್ಟು ಮಳೆಯಾಗಿತ್ತು.

ಅಂತರ್ಜಲ ಬಳಕೆಯ ಪ್ರಮಾಣ (%ಗಳಲ್ಲಿ)




ಆಧಾರ: ಭಾರತದ ರಾಷ್ಟ್ರೀಯ ಅಂತರ್ಜಲ ಸಂಪನ್ಮೂಲ ವರದಿ–2024



61% ದೇಶದಲ್ಲಿ ವಾರ್ಷಿಕವಾಗಿ ನಡೆಯುವ ಅಂತರ್ಜಲ ಮರುಪೂರಣದಲ್ಲಿ ಮಳೆ ನೀರಿನ ಕೊಡುಗೆ



62% ಕೃಷಿ/ನೀರಾವರಿ ಉದ್ದೇಶಕ್ಕೆ ಬಳಸಲಾಗುತ್ತಿರುವ ಅಂತರ್ಜಲದ ಪ್ರಮಾಣ




85% ಗ್ರಾಮೀಣ ಭಾಗದಲ್ಲಿ ಕುಡಿಯುವ ಉದ್ದೇಶಕ್ಕೆ ಬಳಸಲಾಗುತ್ತಿರುವ ನೀರಿನಲ್ಲಿ ಅಂತರ್ಜಲದ ಪ್ರಮಾಣ



50% ನಗರ ಪ್ರದೇಶಗಳಲ್ಲಿ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತಿರುವ ನೀರಿನಲ್ಲಿ ಅಂತರ್ಜಲದ ಪಾಲು

ದೇಶದಲ್ಲೂ ಹೆಚ್ಚಿದ ಅಂತರ್ಜಲ ಬಳಕೆ




751 ಘಟಕಗಳಲ್ಲಿ ಭಾರಿ ಅಪಾಯಕಾರಿ ಸ್ಥಿತಿ

ದೇಶದಾದ್ಯಂತ 6,746 ಘಟಕಗಳಲ್ಲಿ ಅಂತರ್ಜಲದ ಸ್ಥಿತಿಗತಿಯನ್ನು ಮೌಲ್ಯಮಾಪನ ಮಾಡಲಾಗಿದ್ದು, ಈ ಪೈಕಿ, 751 ಘಟಕಗಳಲ್ಲಿ ಕಳೆದ ವರ್ಷ ಮಿತಿ ಮೀರಿ ಅಂತರ್ಜಲವನ್ನು ಬಳಕೆ ಮಾಡಲಾಗಿದೆ. ಇಲ್ಲಿನ ಸ್ಥಿತಿ ಭಾರಿ ಅಪಾಯಕಾರಿಯಾಗಿದೆ ಎಂದು ವರದಿ ಹೇಳಿದೆ. 206 ಘಟಕಗಳಲ್ಲಿಅಂತರ್ಜಲ ಮಟ್ಟ ಅಪಾಯಕಾರಿ ಸ್ಥಿತಿಯಲ್ಲಿದ್ದರೆ, 711 ಘಟಕಗಳಲ್ಲಿ ಮಧ್ಯಮ ಅಪಾಯಕಾರಿ ಸ್ಥಿತಿ ಇದೆ. 4,951 ಘಟಕಗಳಲ್ಲಿ ಅಂತರ್ಜಲದ ಸ್ಥಿತಿ ಸುರಕ್ಷಿತವಾಗಿದೆ. 127 ಘಟಕಗಳು ಲವಣಯುಕ್ತ ನೀರನ್ನು (ಕ್ಷಾರ) ಹೊಂದಿವೆ ಎಂದು ವರದಿ ವಿವರಿಸಿದೆ.

ಎಲ್ಲೆಲ್ಲಿ ಅಪಾಯಕಾರಿ ಸ್ಥಿತಿ?

- **ಮಧ್ಯಮ ಅಪಾಯಕಾರಿ (33 ತಾಲ್ಲೂಕುಗಳು):** ರಬಕವಿ-ಬನಹಟ್ಟಿ, ಹುನಗುಂದ, ಇಳಕಲ್, ಮುಧೋಳ (ಬಾಗಲಕೋಟೆ ಜಿಲ್ಲೆ); ಚಿಕ್ಕೋಡಿ, ಹುಕ್ಕೇರಿ, ಗೋಕಾಕ, ಯರಗಟ್ಟಿ, ಅಥಣಿ (ಬೆಳಗಾವಿ ಜಿಲ್ಲೆ); ಭಾಲ್ಕಿ, ಹುಲಸೂರು (ಬೀದರ್ ಜಿಲ್ಲೆ); ಯಳಂದೂರು, ಕೊಳ್ಳೇಗಾಲ, ಹನೂರು (ಚಾಮರಾಜನಗರ ಜಿಲ್ಲೆ); ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ); ಹೊನ್ನಾಳಿ (ದಾವಣಗೆರೆ ಜಿಲ್ಲೆ); ಶಿರಹಟ್ಟಿ, ಮುಂಡರಗಿ, ಗದಗ (ಗದಗ ಜಿಲ್ಲೆ); ಸವಣೂರು, ಶಿಗ್ಗಾವಿ, ರಟ್ಟೀಹಳ್ಳಿ, ರಾಣೆಬೆನ್ನೂರು (ಹಾವೇರಿ ಜಿಲ್ಲೆ); ಕನಕಗಿರಿ, ಕುಷ್ಟಗಿ (ಕೊಪ್ಪಳ ಜಿಲ್ಲೆ); ಮಳವಳ್ಳಿ (ಮಂಡ್ಯ ಜಿಲ್ಲೆ); ಸಿರವಾರ (ರಾಯಚೂರು ಜಿಲ್ಲೆ); ಕನಕಪುರ, ಚನ್ನಪಟ್ಟಣ (ರಾಮನಗರ ಜಿಲ್ಲೆ); ಪಾವಗಡ (ತುಮಕೂರು ಜಿಲ್ಲೆ); ನಿಡಗುಂದಿ (ವಿಜಯಪುರ); ಯಾದಗಿರಿ, ಗುರುಮಠಕಲ್ (ಯಾದಗಿರಿ ಜಿಲ್ಲೆ).
- **ಅಪಾಯಕಾರಿ (15 ತಾಲ್ಲೂಕುಗಳು):** ಗುಳೇದಗುಡ್ಡ, ಬಾದಾಮಿ (ಬಾಗಲಕೋಟೆ ಜಿಲ್ಲೆ); ಕಾಗವಾಡ (ಬೆಳಗಾವಿ ಜಿಲ್ಲೆ); ಕಡೂರು (ಚಿಕ್ಕಮಗಳೂರು ಜಿಲ್ಲೆ); ದಾವಣಗೆರೆ (ದಾವಣಗೆರೆ ಜಿಲ್ಲೆ); ರೋಣ (ಗದಗ ಜಿಲ್ಲೆ); ಚನ್ನರಾಯಪಟ್ಟಣ (ಹಾಸನ ಜಿಲ್ಲೆ); ಬ್ಯಾಡಗಿ (ಹಾವೇರಿ ಜಿಲ್ಲೆ); ಅಫಜಲಪುರ (ಕಲಬುರಗಿ ಜಿಲ್ಲೆ); ಯಲಬುರ್ಗಾ, ಕೂಕನೂರು (ಕೊಪ್ಪಳ ಜಿಲ್ಲೆ); ರಾಮನಗರ, ಮಾಗಡಿ (ರಾಮನಗರ ಜಿಲ್ಲೆ); ಕೊರಟಗೆರೆ (ತುಮಕೂರು ಜಿಲ್ಲೆ); ಹರಪನಹಳ್ಳಿ (ವಿಜಯನಗರ ಜಿಲ್ಲೆ).
- **ಭಾರಿ ಅಪಾಯಕಾರಿ (45 ತಾಲ್ಲೂಕುಗಳು):** ಬಾಗಲಕೋಟೆ (ಬಾಗಲಕೋಟೆ ಜಿಲ್ಲೆ); ಬೈಲಹೊಂಗಲ, ಸವದತ್ತಿ (ಬೆಳಗಾವಿ ಜಿಲ್ಲೆ); ನೆಲಮಂಗಲ, ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ); ಬೆಂಗಳೂರು ಪೂರ್ವ, ಬೆಂಗಳೂರು ದಕ್ಷಿಣ, ಯಲಹಂಕ, ಬೆಂಗಳೂರು ನಗರ, ಆನೇಕಲ್, ಬೆಂಗಳೂರು ಉತ್ತರ (ಬೆಂಗಳೂರು ನಗರ ಜಿಲ್ಲೆ); ಗುಂಡ್ಲುಪೇಟೆ, ಚಾಮರಾಜನಗರ (ಚಾಮರಾಜನಗರ ಜಿಲ್ಲೆ); ಚಿಂತಾಮಣಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು (ಚಿಕ್ಕಬಳ್ಳಾಪುರ ಜಿಲ್ಲೆ); ಅಜ್ಜಂಪುರ (ಚಿಕ್ಕಮಗಳೂರು ಜಿಲ್ಲೆ); ಹೊಳಲ್ಕೆರೆ, ಹೊಸದುರ್ಗ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು (ಚಿತ್ರದುರ್ಗ ಜಿಲ್ಲೆ); ಚನ್ನಗಿರಿ, ಜಗಳೂರು (ದಾವಣಗೆರೆ); ಗಜೇಂದ್ರಗಡ (ಗದಗ ಜಿಲ್ಲೆ); ಅರಸೀಕೆರೆ (ಹಾಸನ ಜಿಲ್ಲೆ); ಮುಳಬಾಗಿಲು, ಕೆಜಿಎಫ್, ಕೋಲಾರ, ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ (ಕೋಲಾರ ಜಿಲ್ಲೆ); ಹಾರೋಹಳ್ಳಿ (ರಾಮನಗರ ಜಿಲ್ಲೆ); ತುಮಕೂರು, ತಿಪಟೂರು, ಶಿರಾ, ಮಧುಗಿರಿ, ಚಿಕ್ಕನಾಯಕನಹಳ್ಳಿ (ತುಮಕೂರು ಜಿಲ್ಲೆ); ಹಗರಿಬೊಮ್ಮನಹಳ್ಳಿ, ಕೊಟ್ಟೂರು (ವಿಜಯನಗರ ಜಿಲ್ಲೆ).





ಅಂತರ್ಜಲ ಅತಿ ಬಳಕೆ ಎಂದರೆ...

ನಿಗದಿತ ಮಿತಿಗಿಂತಲೂ ಹೆಚ್ಚು ಅಂತರ್ಜಲವನ್ನು ಬಳಕೆ ಮಾಡಿದರೆ ಅದನ್ನು ಅತಿ ಬಳಕೆ (exploitation) ಎಂದು ಕರೆಯಲಾಗುತ್ತದೆ. ಅದನ್ನು ಭಾರಿ ಅಪಾಯಕಾರಿ ಸ್ಥಿತಿ ಎಂದು ಗುರುತಿಸಲಾಗಿದೆ.

ಉದಾಹರಣೆಗೆ; ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ ವರ್ಷ 31,739.53 ಹೆಕ್ಟೇರ್ ಮೀಟರ್‌ಗಳಷ್ಟು (ಎಚ್‌ಎಂ) ಅಂತರ್ಜಲ ಮರುಪೂರಣವಾಗಿತ್ತು. ಕೇಂದ್ರ ಅಂತರ್ಜಲ ಮಂಡಳಿಯ ಲೆಕ್ಕಾಚಾರದ ಪ್ರಕಾರ, ಒಂದು ವರ್ಷದಲ್ಲಿ 28,565.58 ಹೆಕ್ಟೇರ್ ಮೀಟರ್‌ಗಳಷ್ಟು ಅಂತರ್ಜಲವನ್ನು ಬಳಸುವುದಕ್ಕೆ ಅವಕಾಶ ಇತ್ತು. ಆದರೆ, 53,332.51 ಹೆಕ್ಟೇರ್ ಮೀಟರ್‌ಗಳಷ್ಟು ಅಂತರ್ಜಲವನ್ನು ಬಳಸಲಾಗಿದೆ. ಶೇಕಡವಾರು ಲೆಕ್ಕ ಹಾಕಿದರೆ ಶೇ 186.70ರಷ್ಟು ಅಂತರ್ಜಲವನ್ನು ಭೂಮಿಯಿಂದ ಮೇಲಕ್ಕೆತ್ತಲಾಗಿದೆ.

ಸಿನಿ ಬಿಟ್ಸ್

ಸಿನಿಮಾವಾಗುತ್ತಿದೆ ದೊಡ್ಮನೆ ಸೊಸೆ

ಸ್ಯಾಂಡಲ್‌ವುಡ್‌ನಲ್ಲಿ 'ದೊಡ್ಮನೆ' ಪದ ಬಹಳ ಕಾಲದಿಂದ ಚಾಲ್ತಿಯಲ್ಲಿದೆ. ಇದೀಗ ಅದನ್ನೇ ಶೀರ್ಷಿಕೆಯಾಗಿಸಿಕೊಂಡಿರುವ 'ದೊಡ್ಮನೆ ಸೊಸೆ' ಚಿತ್ರ ಸೆಟ್ಟೇರಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಮತ್ತು ಸಾ.ರಾ.ಗೋವಿಂದು ಚಿತ್ರದ ಶೀರ್ಷಿಕೆ ಅನಾವರಣಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.



ಚಿತ್ರದ ಪೋಸ್ಟರ್

ಆಸ್ಕರ್ ಕೃಷ್ಣ ಕಥೆ ಬರೆದು, ನಿರ್ದೇಶನ ಮಾಡುತ್ತಿದ್ದಾರೆ. ತೇಜ್‌ವಿನಯ್. ಎಸ್ ಮಾನ್ಯ ಸಿನಿ ಕ್ರಿಯೇಶನ್ಸ್ ಲಾಂಛನದಡಿಯಲ್ಲಿ ಬಂಡವಾಳ ಹೂಡಿದ್ದಾರೆ.

'ಪ್ರತಿ ಹೆಣ್ಣು ಒಂದು ಮನೆಗೆ ಸೊಸೆಯಾಗಿ ಪ್ರವೇಶ ಮಾಡುತ್ತಾಳೆ. ಆ ಮನೆಗೆ ಬರುವ ಸೊಸೆಯ ಅನುದಿನದ ವ್ಯಕ್ತಿತ್ವ ಮತ್ತು ನಡತೆಯು ಇಡೀ ಕುಟುಂಬದ ಗೌರವ ಹಾಗೂ ಘನತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆಕೆ ಕುಟುಂಬವನ್ನು ಕಟ್ಟಬಲ್ಲಳು, ಬೇಕೆಂದರೆ ಒಡೆಯಬಲ್ಲಳು ಎಂಬ ವಿಷಯಗಳ ಸುತ್ತ ಕಥೆ ಸಾಗುತ್ತದೆ. ಯಾವುದೇ ವ್ಯಕ್ತಿಗೆ, ಕುಟುಂಬಕ್ಕೆ ಸಂಬಂಧಿಸಿದ ಕಥೆಯಲ್ಲ' ಎನ್ನುತ್ತಾರೆ ನಿರ್ದೇಶಕರು. ನಿತೀಶ್.ವಿ ಸಂಗೀತ, ಮೈಸೂರು ಸೋಮು ಛಾಯಾಚಿತ್ರಗ್ರಹಣ, ಕೌಶಿಕ್ ಕಿರಣ್ ಸಂಕಲನವಿದೆ.

ಏ.10ಕ್ಕೆ ಬರ್ತಾನೆ ವಿದ್ಯಾಪತಿ

'ಟಗರು ಪಲ್ಯ' ಬೆನ್ನಲ್ಲೇ ನಟ ನಾಗಭೂಷಣ್ 'ವಿದ್ಯಾಪತಿ'ಯಾಗಿ ತೆರೆಗೆ ಬರಲಿದ್ದಾರೆ. 'ಇಕ್ಕಟ್' ಸಿನಿಮಾ ನಿರ್ದೇಶಿಸಿದ್ದ ಇಶಾಂ ಖಾನ್ ಹಾಗೂ ಹಸೀಂ ಖಾನ್ ನಿರ್ದೇಶನದ ಈ ಸಿನಿಮಾ ಏ.10ರಂದು ತೆರೆಗೆ ಬರಲಿದೆ.

ಸಂಕ್ರಾಂತಿಯಂದು ಚಿತ್ರದ ನಿರ್ಮಾಪಕ ನಟ 'ಡಾಲಿ' ಧನಂಜಯ ಬಿಡುಗಡೆ ದಿನಾಂಕ ಘೋಷಿಸಿದ್ದಾರೆ. ಧನಂಜಯ ಅವರ ಡಾಲಿ ಪಿಕ್ಚರ್ಸ್‌ನ ನಾಲ್ಕನೇ ಚಿತ್ರ ಇದಾಗಿದ್ದು, ನಾಗಭೂಷಣ್ ಕರಾಟೆ ಕಿಂಗ್ ಅವತಾರದಲ್ಲಿ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಕರಾಟೆ ಮಾಸ್ಟರ್ ಆಗಿ ರಂಗಾಯಣ ರಘು ಅಭಿನಯಿಸಿದ್ದಾರೆ. ನಾಯಕಿಯಾಗಿ 'ಉಪಾಧ್ಯಕ್ಷ' ಸಿನಿಮಾ ಖ್ಯಾತಿಯ ಮಲೈಕಾ ಟಿ. ವಸುಪಾಲ್ ಬಣ್ಣಹಚ್ಚಿದ್ದಾರೆ. ಬಹುದೊಡ್ಡ ತಾರಾಗಣವೇ ಚಿತ್ರದಲ್ಲಿದ್ದು, ವಿವರಗಳನ್ನು ಮುಂದಿನ ದಿನಗಳಲ್ಲಿ ಹಂಚಿಕೊಳ್ಳುವುದಾಗಿ ಚಿತ್ರತಂಡ ತಿಳಿಸಿದೆ.

ನಿರ್ದೇಶನದ ಜೊತೆಗೆ ಸಿನಿಮಾದ ಕಥೆ ಬರೆದು, ಸಂಕಲನದ ಜವಾಬ್ದಾರಿಯನ್ನು ತಾವೇ ನಿಭಾಯಿಸಿದ್ದಾರೆ ಇಶಾಂ ಖಾನ್ ಹಾಗೂ ಹಸೀಂ ಖಾನ್. ಲವಿತ್ ಛಾಯಾಚಿತ್ರಗ್ರಹಣ, ಡಾಸ್ಮೋಡ್ ಸಂಗೀತ ನಿರ್ದೇಶನ, ಮುರುಳಿ ನೃತ್ಯ ನಿರ್ದೇಶನ ಚಿತ್ರಕ್ಕಿದೆ.



ನಾಗಭೂಷಣ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ತಾಯಂದಿರೆಲ್ಲ ಭಾರತ ರತ್ನಗಳು!



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

111

ನಮ್ಮ ತಾಯಂದಿರು ನಿರಂತರ ಕೆಲಸ ಮಾಡ್ತಾರ. ಇವತ್ತು ಭಾನುವಾರ ರಜಾ, ಇವತ್ತು ಶನಿವಾರ ಅರ್ಧದಿನ ರಜಾ ಎಂದು ಅವರು ಕೆಲಸ ಮಾಡೋದನ್ನು ನಿಲ್ಲಿಸಿದ್ದಾರೇನು? ನಿಜವಾಗಿ ಮನೆಯಲ್ಲಿ ಎಲ್ಲರಿಗೂ ರಜೆ ಇದ್ದರೆ ಅವರಿಗೆ ಹೆಚ್ಚಿನ ಕೆಲಸ. ಭಿನ್ನ ಭಿನ್ನ ಅಡುಗೆ ಮಾಡಬೇಕು. ರಾಷ್ಟ್ರಪತಿ ಮುಂದೆ ಪ್ರಶಸ್ತಿ ತೆಗೆದುಕೊಳ್ಳುತ್ತಾರಲ್ಲ ಅವರು ಮಾತ್ರ ಭಾರತ ರತ್ನ ಅಲ್ಲ. ನನ್ನ ಸಂಸಾರ ಚೆಂದ ನಡೀಬೇಕು ಎಂದು ತಿಳಕೊಂಡು, ನನ್ನ ಮಕ್ಕಳು ಓದಬೇಕು, ನಮ್ಮ ಮನೆಯವರು ಊರಾಗೆ ಒಂದು ಹೆಸರು ಮಾಡಬೇಕು, ನಾವು ಇನ್ನೊಬ್ಬರ ಮುಂದೆ ಕೈಯೊಡ್ಡಬಾರದು, ಸುಂದರ ಬದುಕು ಕಟ್ಟಬೇಕು ಅಂತ ನೂರಾರು ಕಷ್ಟಗಳ ನಡುವೆ ಯಾವುದನ್ನೂ ಇನ್ನೊಬ್ಬರಿಗೆ ಹೇಳದೆ ಸದಾ ದುಡಿಯುವ ಈ ದೇಶದ ತಾಯಂದಿರೂ ಭಾರತ ರತ್ನಗಳೆ.

ಯಾರು ಈ ಭಾರತಕ್ಕೆ ಭಾರಾಗಿಲ್ಲ ಅವರೇ ಭಾರತೀಯರು. ಸಾಮಾನ್ಯವಾಗಿ ಪುರುಷರು 'ನಾನು ಹಗಲೂ ರಾತ್ರಿ ದುಡೀತೀನಿ. ಒಂದು ದಿನ ಆಕೆ ಮಧ್ಯಾಹ್ನಕ್ಕೆ ಊಟಕ್ಕೆ ಬರ್ತೀರಾ, ಇಲ್ಲ ಎಂದು ಕೇಳಿಲ್ಲ' ಅಂತಾರೆ. ನೀವು ಎಂದಾದರೂ ನಿಮ್ಮ ಪತ್ನಿಗೆ ಆಕೆಯ ಕಷ್ಟಗಳನ್ನು ಕೇಳಿದ್ದೀರೇನು? ಆಲೋಚನೆ ಮಾಡಬೇಕು. ಮಾವ ಒಂದು ಉಂಗುರ ಕೊಟ್ಟರೆ ಎಲ್ಲರಿಗೂ ತೋರಿಸ್ತೀರಿ. ದಿನಾಲೂ ನೆನಪಿಸ್ತೀರಿ. ಮಹದೇವ ಈ ಬದುಕೇ ಕೊಟ್ಟಾನ ಅವನನ್ನು ನೆನಪಿಸಿಕೊಳ್ಳದೇ ಇರೋದು ಸರಿಯೇನು? ಮೋಕ್ಷ ಅಂದರೆ ಎಲ್ಲೋ ಐತಿ ಅಂದುಕೊಂಡೇವಿ. ಅದು ತಪ್ಪು. ಮೋಕ್ಷ ಅಂದರ ದುಃಖವಿಲ್ಲದಂತೆ ಇರುವುದು. ಆನಂದವೇ ಮೋಕ್ಷ. ಹಾಗಾದರೆ ದುಃಖ ಯಾಕಾತು? ಬಯಕೆಗಳೇ ದುಃಖಕ್ಕೆ ಮೂಲ. ಹಾಗಾದರೆ ಬಯಸದೇ ಇದ್ದರೆ ಬದುಕು ನಡೀತೈತೇನು ಅಂತ ನೀವು ಕೇಳ್ತೀರಿ.

ಒಬ್ಬ ವಿದ್ಯಾರ್ಥಿ ಇದಾನೆ, ಕಷ್ಟಪಟ್ಟು ಓದ್ತಾನೆ. ಮೊದಲ ದರ್ಜೆ ಬರಬೇಕು ಅಂತ ಬಯಸಬಾರದೇನು? ಒಬ್ಬ ಯುವಕ ವ್ಯಾಪಾರ ಮಾಡ್ತಾನೆ. ಅವನು ತನಗೆ ಲಾಭ ಬರಬೇಕು ಎಂದು ಬಯಸೋದು ತಪ್ಪೇನು? ಒಬ್ಬ ತಾನು ಐಎಎಸ್ ಮಾಡಬೇಕು ಎಂದು ಬಯಸುತ್ತಾನೆ. ಅದು ತಪ್ಪೇನು? ಬಯಸೋದು ತಪ್ಪಲ್ಲ. ಆದರೆ ಬಯಸಿದ್ದೆಲ್ಲ ಈಡೇರತೈತಿ ಅನಕೋಬೇಡ. ಹಾಗೆ ಅನಕೊಂಡರೆ ದುಃಖ ಆಗತೈತಿ. ಈ ಜಗತ್ತಿನಲ್ಲಿ ನಾವು ಬಯಸಿದ್ದೆಲ್ಲಾ ಸಿಕ್ಕಿಲ್ಲ. ನಾನು ಬಯಸಿದೋರು ಸಿಕ್ಕಿಲ್ಲ. ಸಿಕ್ಕವರು ನಾವು ಬಯಸಿದಂಗೆ ಇಲ್ಲ. ಇದು ಜಗತ್ತಿನ ವಿಪರ್ಯಾಸ. ಈ ಜಗತ್ತಿನಲ್ಲಿ ನಾವು ಬಯಸಿದ್ದೆಲ್ಲಾ ಸಿಗೋದಿಲ್ಲ ಎನ್ನುವುದನ್ನು ತಿಳಿದುಕೊಂಡು ಬದುಕಬೇಕು ಮತ್ತು ಜಗತ್ತಿನ ರೀತಿಗೆ ಹೊಂದಿಕೊಂಡು ಬದುಕಬೇಕು. ಈ ಜಗತ್ತಿನಲ್ಲಿ ಎಷ್ಟೊಂದು ಕೋಟ್ಯಂತರ ಜನರಿದ್ದಾರೆ. ಎಲ್ಲರೂ ತಾವು ಅಂದುಕೊಂಡಂತೆಯೇ ಜಗತ್ತು ನಡೆಯಬೇಕು ಅಂದರ ಆಗತೈತೇನು. ನನ್ನ ಹೊಲದಲ್ಲಿ ಮಾತ್ರ, ನಮ್ಮ ಜಾತಿಯವರ ಹೊಲದಲ್ಲಿ ಮಾತ್ರ ಮಳೆ ಬರಬೇಕು ಅಂತ ಹೇಳಿದರೆ ಮೋಡ, 'ನಿಮಗೆ ತಲೆ ಕೆಟ್ಟೈತಿ ಅಂತ ನನಗೂ ಕೆಟ್ಟೈತಿ ಅಂತ ಅನಕೊಂಡೀರೇನು' ಎಂದು ಕೇಳುತೈತಿ. ನಾವು ಅನಕೊಂಡಂಗೆ ಗಾಳಿ ಬೀಸಬೇಕು, ನಾವು ಅನಕೊಂಡಂಗೆ ಹೊಳಿ ಹರೀಬೇಕು ಅಂದರ ಯಾವುದೂ ಇಲ್ಲಿ ನಡೆಯೋದಿಲ್ಲ ಅನ್ನೋದನ್ನು ತಿಳಕೋಬೇಕು. ಈ ಅನಂತ ವೃಕ್ಷದ ಒಂದು ಸಣ್ಣ ಎಲೆ ನಾನು. ವೃಕ್ಷ ಅಲುಗಾಡಿದಾಗ ಎಲೆ ಅಲುಗಾಡತೈತೇ ವಿನಾ ಎಲೆ ಬಯಸಿದಾಗ ವೃಕ್ಷ ಅಲುಗಾಡುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 16, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣತೃತೀಯ ಗಂ. 28-07 ನಕ್ಷತ್ರ: ಆಶ್ಲೇಷ ಗಂ. 11-17 ಯೋಗ: ಆಯುಷ್ಮಾನ್ ಗಂ. 25-06 ಕರಣ: ವಣಿಜ ಗಂ. 15-40, ಮಕರ ಮಾಸದ 02 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 2.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 07-01 ಸೂರ್ಯಾಸ್ತ: 06-20
ಮುಸ್ಲಿಂ ದಿನಾಂಕ: 15 ರಜಬ್
ಅದೃಷ್ಟ ಸಂಖ್ಯೆ: 4, 6

ಮೇಷ: ಸಹಾಯಕ ದರ್ಜೆಯವರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮ. ಸಾಲ ಮಾಡುವ ಪರಿಸ್ಥಿತಿಯನ್ನು ತಂದುಕೊಳ್ಳಬೇಡಿ. ಸಗಟು ವ್ಯಾಪಾರಿಗಳಿಗೆ ಶುಭ ದಿನ.

ವೃಷಭ: ಕುಟುಂಬದ ಅಭಿವೃದ್ಧಿಗೋಸ್ಕರ ತೆಗೆದುಕೊಂಡಿರುವ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ವೃತ್ತಿರಂಗದಲ್ಲಿ ಅದೃಷ್ಟದ ಬಾಗಿಲು ತೆರೆಯುವುದು.

ಮಿಥುನ: ಕಾಲುನೋವು, ಬೆನ್ನುನೋವು ಕಾಣಿಸಿಕೊಳ್ಳಬಹುದು. ಯೋಗದ ಅಭ್ಯಾಸದಿಂದ ಸರಿಪಡಿಸಿಕೊಳ್ಳಿರಿ. ಲೆಕ್ಕ ಪತ್ರಗಳ ವ್ಯವಹಾರ ನೋಡುವವರಿಗೆ ಸಂದಿಗ್ಧ ಪರಿಸ್ಥಿತಿಗಳು ಎದುರಾಗಬಹುದು. ಸ್ಪರ್ಧೆಗಳಲ್ಲಿ ಜಯವಾಗುವುದು.

ಕರ್ಕಾಟಕ: ಹೊಸದಾಗಿ ಕೈಗೊಂಡ ಕೆಲಸವೊಂದು ಸುಗಮವಾಗಿ ಸಾಗಲೆಂದು ದೇವತಾ ಕಾರ್ಯ ಕೈಗೊಳ್ಳಿ. ಹಿಂದಿನ ಕಹಿ ಘಟನೆಗಳು ಪುನಃ ಮರುಕಳಿಸದಂತೆ ಎಚ್ಚರ ವಹಿಸಿ. ಮೇಧಾವಿಗಳ ಮೂಲಕ ಧನ ಸಂಪಾದನೆ ಹೊಂದುವಿರಿ.

ಸಿಂಹ: ಕುಟುಂಬದ ಗೊಂದಲವನ್ನು ಪರಿಹರಿಸುವ ಹೊಣೆಗಾರಿಕೆಯನ್ನು ಸ್ವಪ್ರೇರಣೆಯಿಂದ ತೆಗೆದುಕೊಳ್ಳುವುದು ಸರಿಯಲ್ಲ. ಪತ್ನಿ ವರ್ಗದಿಂದ ಕಾರ್ಯಗಳಿಗೆ ಸಹಾಯ ದೊರೆಯಲಿದೆ.

ಕನ್ಯಾ: ಕಟ್ಟಡ ಕಾರ್ಮಿಕರಿಗೆ, ದಿನಗೂಲಿ ನೌಕರರಿಗೆ ಅವಕಾಶಗಳು ಸಿಗಲಿವೆ. ಧಾರ್ಮಿಕ ವೃತ್ತಿ ನಡೆಸುವ ವ್ಯಕ್ತಿಗಳಿಗೆ ಸಾಧಿಸಿದ ಖುಷಿ ಸಿಗಲಿದೆ. ತಂದೆ ಮಕ್ಕಳಲ್ಲಿ ಅನ್ಯೋನ್ಯತೆ ಕಡಿಮೆಯಾಗದಂತೆ ಜಾಗ್ರತೆ ವಹಿಸಿ.

ತುಲಾ: ಸಂಬಂಧ ಮತ್ತು ಒಪ್ಪಂದಗಳತ್ತ ನಿಶ್ಚಿತವಾಗಿ ಗಮನ ಹರಿಸಿ. ಈಶ್ವರನ ಸೇವೆ ಮಾಡುವುದರಿಂದ ಸಾಧನೆಗೆ ಸಹಾಯವಾಗುವುದು. ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿ.

ವೃಶ್ಚಿಕ: ಸಂಸ್ಥೆಯ ಮೇಲ್ವಿಚಾರಣೆಯ ಜವಾಬ್ದಾರಿ ಹೊತ್ತ ಸಿಬ್ಬಂದಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗುವುದು. ಅಧಿಕಾರಕ್ಕಾಗಿ ಯಾವುದೇ ಅಡ್ಡದಾರಿ ಅನುಸರಿಸಬೇಡಿ. ಹಣಕಾಸಿನ ವ್ಯವಹಾರಗಳಲ್ಲಿ ಜಾಗರೂಕರಾಗಿರಿ.

ಧನು: ದಾಖಲೆಗಳು ಕಳೆದುಹೋಗಬಹುದು. ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ. ನಿರ್ಧಾರವನ್ನು ಎಲ್ಲರ ಮನಮುಟ್ಟುವಂತೆ ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿ.

ಮಕರ: ಹಣಕಾಸು ಪರಿಸ್ಥಿತಿ ಉತ್ತಮವಿರುವುದರಿಂದ ಆಸ್ತಿ ಕೊಳ್ಳುವ ಬಗ್ಗೆ ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ. ಸಂಭ್ರಮದ ಜೀವನ ಶೈಲಿಯಿಂದ ಖರ್ಚುಗಳು ಸಂಭವಿಸುವುದು. ದುಂದುವೆಚ್ಚ ಸಲ್ಲ.

ಕುಂಭ: ಎತ್ತರದ ಸ್ಥಾನ ತಲುಪಬೇಕೆಂಬ ಮಹತ್ವಾಕಾಂಕ್ಷೆ ಸಾಕಾರವಾಗುವ ಪ್ರಸಂಗ ನಡೆಯಲಿದೆ. ಸಂಬಂಧಿಕರೊಂದಿಗಿದ್ದ ವ್ಯವಹಾರಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಸಂಗಾತಿಯೊಂದಿಗೆ ಬಾಂಧವ್ಯ ವೃದ್ಧಿ.

ಮೀನ: ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ನಿಭಾಯಿಸಿ. ನಿರಪರಾಧಿಯಾದರೂ ಶಿಕ್ಷೆಗೆ ಒಳಗಾಗುವ ಲಕ್ಷಣಗಳಿರುವುದರಿಂದ ಜಾಗ್ರತರಾಗಿರಿ. ವಿಶ್ವಾಸದಲ್ಲಿ ಹಣವನ್ನು ನೀಡಬೇಡಿ.

ಪದಬಂಧ 5924


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಅಮೋನಿಯಾ ಮತ್ತು ಕ್ಲೋರಿನ್ ಸಂಯೋಗದಿಂದಾದ ಕ್ಷಾರ (5)
5.ಸಮುದ್ರದಲ್ಲಿ ಸಿಗುವ ಒಂದು ಬಗೆಯ ಚಿಪ್ಪು (3)
7.ಕಮಲದ ಹತ್ತಿರವಿರುವ ನೆಲ್ಲಿಕಾಯಿ (4)
9.ಖಾಲಿಯಾದ ಕೈ (4)
10.ಅಸುರ ಇಲ್ಲಿ ಬಂದಿದ್ದಾನಲ್ಲಾ! (3)
11.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
13.ಯುದ್ಧ ಭೂಮಿಯಿದು (4)
15.ಪದಾರ್ಥಗಳನ್ನು ಮಾರುವ ಸ್ಥಳ (3)
16.ಕೊಲೆಯನ್ನು ಮಾಡುವವನು (5)

ಮೇಲಿಂದ ಕೆಳಕ್ಕೆ

1.ಅದೇ ತಾನೆ ಬಿರಿದ ಹೂವು (4)
2.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)
3.ಮುಳುಗಿ ಸ್ನಾನ ಮಾಡುವುದು (4)
6.ನಮ್ಮ ಸುತ್ತಮುತ್ತಲಿನ ಪ್ರದೇಶ (4)
8.ಕಡಲ ದಂಡೆಯಿದು (4)
12.ನುಡಿದಿದ್ದು ವಿಶೇಷಾರ್ಥವುಳ್ಳ ಪದಪುಂಜ (4)
14.ಒಳಮನಸ್ಸು ಉಲ್ಟಾ ಪಲ್ಟಾ ಆಗಿಬಿಟ್ಟಿದೆ (4)
17.ತಲೆಯತ್ತದೆ ನೋಡಿದಾಗ ಪಗಡೆಯ ದಾಳ ಕಾಣಿಸಿತಲ್ಲ (2)



5923ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಗಮ 3.ಆಯಾಸ 6.ಹಾವಸೆ 7.ರಮಣಿ 8.ನಗರ 9.ಮದ್ದು 10.ಕನ್ನಡಿ 12.ಬಾಣ 13.ಪಾಚಕ 15.ಕಂದರ 16.ದಾತಾರ 17.ವಿವಾಹ 18.ಸಲುಗೆ

ಮೇಲಿಂದ ಕೆಳಕ್ಕೆ: 1.ಉಲ್ಲಂಘನ 2.ಮಹಾದ್ವಾರ 3.ಆಸೆ 4.ಸರಹದ್ದು 5.ರಾಣೀವಾಸ 9.ಮಡಿ 10.ಕಣ 11.ಅನುಕಂಪ 12.ಬಾಲರವಿ 13.ಪಾದರಸ 14.ಕರಡಿಗೆ 16.ದಾಹ

ಸುಡೊಕು 6309

		3	1			4		
6				5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6308 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಎರಡು ತಿಂಗಳಿಂದಲೂ ಕಬ್ಬು ಅರೆಯುವಿಕೆ • ಬಿಲ್‌ಗಾಗಿ ಕಾರ್ಖಾನೆಗಳಿಗೆ ರೈತರ ಅಲೆದಾಟ

₹4,482 ಕೋಟಿ ಕಬ್ಬು ಬಿಲ್ ಬಾಕಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದಲ್ಲಿ ಕಬ್ಬು ನುರಿಸುವ ಹಂಗಾಮು ಆರಂಭವಾಗಿ ಎರಡು ತಿಂಗಳು ಕಳೆದಿದೆ. ರಾಜ್ಯದಲ್ಲಿ 77 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುತ್ತಿವೆ. ಕಬ್ಬು ಪೂರೈಸಿದ ರೈತರಿಗೆ ₹4,482 ಕೋಟಿ ಬಿಲ್ ಬಾಕಿ ಉಳಿದಿದ್ದು, ಬಿಲ್‌ಗಾಗಿ ಅಲೆದಾಡಬೇಕಿದೆ.

ಇದುವರೆಗೂ ಕಾರ್ಖಾನೆಗಳು 2.86 ಕೋಟಿ ಮೆಟ್ರಿಕ್ ಟನ್ ಕಬ್ಬು ನುರಿಸಿದ್ದು, 22.23 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಿವೆ. ಕೆಲ ಕಾರ್ಖಾನೆಗಳು ಎಥೆನಾಲ್ ಉತ್ಪಾದಿಸುತ್ತಿವೆ.

ಈಗ ನುರಿಸಲಾಗಿರುವ ಕಬ್ಬಿಗೆ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) ಪ್ರಕಾರ ಕಾರ್ಖಾನೆಗಳು ₹9,983 ಕೋಟಿ ಪಾವತಿಸಬೇಕಿತ್ತು. ಈವರೆಗೆ ₹5,502 ಕೋಟಿ ಪಾವತಿಸಿವೆ.

ಮುಖ್ಯಾಂಶಗಳು

- ನವೆಂಬರ್‌ನಿಂದ ಕಾರ್ಖಾನೆಗಳು ಕಾರ್ಯಾರಂಭ
- ಮಾರ್ಚ್ 15ರವರೆಗೆ ಕಬ್ಬು ನುರಿಸುವ ಸಾಧ್ಯತೆ

ಹಲವು ಕಾರ್ಖಾನೆಗಳು ಶೇ11ರಷ್ಟು ಮಾತ್ರ ಬಿಲ್ ಪಾವತಿಸಿದ್ದರೆ, ಕೆಲವು ಶೇ 74ರವರೆಗೆ ಪಾವತಿಸಿದ್ದು, ಸರಾಸರಿ ಶೇ 55ರಷ್ಟು ಬಿಲ್ ಪಾವತಿಯಾಗಿದೆ. ಬೀದರ್ ಜಿಲ್ಲೆಯ ಮಹಾತ್ಮಗಾಂಧಿ ಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ಸಂಪೂರ್ಣ ಬಿಲ್ ಪಾವತಿಸಿದೆ.

‘ಕಬ್ಬು ಪೂರೈಸಿದ 14 ದಿನಗಳಲ್ಲಿ ಬಿಲ್ ಮೊತ್ತ ಪಾವತಿಸಬೇಕು ಎಂದು ಕಾಯ್ದೆ ಹೇಳುತ್ತದೆ. ಕೆಲ ಕಾರ್ಖಾನೆಗಳು ನವೆಂಬರ್ 15ರವರೆಗೆ ಬಿಲ್ ಪಾವತಿಸಿದ್ದರೆ, ಬಹಳಷ್ಟು ಕಾರ್ಖಾನೆಗಳು ಡಿಸೆಂಬರ್ ತಿಂಗಳ ಬಿಲ್ ಇನ್ನೂ ಪಾವತಿಸಿಲ್ಲ’ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ಜಿಲ್ಲಾ ಅಧ್ಯಕ್ಷ ಬಸವಂತ ಕಾಂಬಳೆ ‘ಪ್ರಜಾವಾಣಿ’ಗೆ ತಿಳಿಸಿದರು.

> ರೈತರು ಆರ್ಥಿಕ ಸಂಕಷ್ಟದಲ್ಲಿದ್ದು, ಬಾಕಿ ಬಿಲ್ ಬೇಗನೆ ಪಾವತಿಸಬೇಕು. ಸರ್ಕಾರ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು
> **ಬಸವಂತ ಕಾಂಬಳೆ**
> ಜಿಲ್ಲಾ ಅಧ್ಯಕ್ಷ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ

‘ಕಬ್ಬು ಕಟಾವು, ಸಾಗಣೆ ಬಿಲ್ ಹೆಚ್ಚಿರುವುದು ರೈತರಿಗೆ ಹೊರೆ ಆಗುತ್ತಿದೆ. ಕೆಲ ಕಾರ್ಖಾನೆಗಳು 100 ಕಿ.ಮೀ. ದೂರದಿಂದ ಕಬ್ಬು ತರುತ್ತಿವೆ. ಇದರಿಂದ ಸಾಗಣೆ ವೆಚ್ಚ ಹೆಚ್ಚಾಗುತ್ತಿದೆ. ಪ್ರತಿ ಟನ್ ಕಬ್ಬಿಗೆ ₹850ರವರೆಗೆ ವಿಧಿಸುತ್ತಿರುವುದರಿಂದ ಲಾಭ ಸಿಗುತ್ತಿಲ್ಲ’ ಎಂದರು.

‘ಜಿಲ್ಲೆಯ 14 ಸಕ್ಕರೆ ಕಾರ್ಖಾನೆಗಳಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ಕಾರ್ಯಾರಂಭ ಮಾಡಿಲ್ಲ. ಉಳಿದ ಕಾರ್ಖಾನೆಗಳು ಕಬ್ಬು ನುರಿಸುತ್ತಿವೆ. ಶೀಘ್ರ ಬಿಲ್ ಪಾವತಿಸಲು ತಿಳಿಸಲಾಗಿದೆ’ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ತಿಳಿಸಿದರು.

ಕಬ್ಬು ನುರಿಸುವಿಕೆ, ಬಾಕಿ ವಿವರ

ಜಿಲ್ಲೆ	ನುರಿಸಲಾದ ಕಬ್ಬು (ಮೆ.ಟನ್)	ಪಾವತಿಸಿದ ಮೊತ್ತ (ಕೋಟಿ ₹ಗಳಲ್ಲಿ)	ಬಾಕಿ (ಕೋಟಿ ₹ಗಳಲ್ಲಿ)
ಬೆಳಗಾವಿ	1.07 ಕೋಟಿ	1,936	2,047
ಬಾಗಲಕೋಟೆ	73 ಲಕ್ಷ	1,071	1,525
ಬೀದರ್	7.38 ಲಕ್ಷ	117	118
ಹಾವೇರಿ	5.70 ಲಕ್ಷ	158	55
ಕಲಬುರಗಿ	11.49 ಲಕ್ಷ	244	133
ಮಂಡ್ಯ	24.45 ಲಕ್ಷ	692	77
ವಿಜಯಪುರ	20.84 ಲಕ್ಷ	345	345
ವಿಜಯನಗರ	5.27 ಲಕ್ಷ	138	27

ಇನ್ಫೊಸಿಸ್: ಚಿರತೆ ಸೆರೆ ಕಾರ್ಯಾಚರಣೆ ಸ್ಥಗಿತ

ಮೈಸೂರು: ಇಲ್ಲಿನ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಸತತ 15 ದಿನದ ಕಾರ್ಯಾಚರಣೆ ಬಳಿಕವೂ ಚಿರತೆ ಪತ್ತೆಯಾಗಿಲ್ಲ. ಹೀಗಾಗಿ ಕಾರ್ಯಾಚರಣೆಯನ್ನು ಅರಣ್ಯ ಇಲಾಖೆಯು ಸ್ಥಗಿತಗೊಳಿಸಿದೆ.

ಡಿ.31ರಂದು ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಚಿರತೆ ಕಾಣಿಸಿತ್ತು. ಈ ಕಾರಣದಿಂದ ಕಂಪನಿ ತನ್ನ ಬಹುತೇಕ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಸೂಚಿಸಿತ್ತು. ಅರಣ್ಯ ಇಲಾಖೆ ತಂಡಗಳನ್ನು ರಚಿಸಿ ಚಿರತೆ ಸೆರೆಗೆ ಕಾರ್ಯಾಚರಣೆ ಆರಂಭಿಸಿತ್ತು. ಚಿರತೆಯ ಚಲನವಲನ ಗುರುತಿಸಲು ಕ್ಯಾಮೆರಾ ಟ್ರ್ಯಾಪ್‌ಗಳನ್ನು ಅಳವಡಿಸಲಾಗಿತ್ತು. ಇಲಾಖೆಯ 80ಕ್ಕೂ ಹೆಚ್ಚು ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

‘10 ದಿನಗಳಿಂದ ಕ್ಯಾಂಪಸ್‌ನಲ್ಲಿ ಎಲ್ಲಿಯೂ ಚಿರತೆಯ ಹೆಜ್ಜೆ ಗುರುತು ಕಾಣಿಸಿಲ್ಲ. ಹೀಗಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ’ ಎಂದು ಪ್ರಾದೇಶಿಕ ಅರಣ್ಯ ವಿಭಾಗದ ಎಸಿಎಫ್ ಬಸವರಾಜು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಚೇತರಿಕೆ

ಬೆಳಗಾವಿ: ಅಪಘಾತದಲ್ಲಿ ಗಾಯಗೊಂಡಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು 24 ಗಂಟೆಯೊಳಗೆ ಚೇತರಿಸಿಕೊಂಡಿದ್ದಾರೆ.

‘ಬೆನ್ನುಹುರಿಗೆ ಪೆಟ್ಟಾಗಿದ್ದರಿಂದ ಇನ್ನೂ ಮೂರು ದಿನ ಆಸ್ಪತ್ರೆಯಲ್ಲೇ ಇರುವರು. ನಂತರ 10 ದಿನ ವಿಶ್ರಾಂತಿ ಅಗತ್ಯವಿದೆ’ ಎಂದು ವಿಜಯಾ ಆಸ್ಪತ್ರೆ ವೈದ್ಯ ಡಾ.ರವಿ ಪಾಟೀಲ ತಿಳಿಸಿದರು.

‘ಲಕ್ಷ್ಮೀ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕಳುಹಿಸುವ ಅಗತ್ಯವಿಲ್ಲ. ಅವರು ಬೇಗ ಚೇತರಿಸಿಕೊಳ್ಳಲಿದ್ದಾರೆ’ ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಎರಡನೇ ದಿನ ರಕ್ತದ ಮಾದರಿ ತಪಾಸಣೆ ನಡೆಸಲಾಗಿದೆ. ಹೆಚ್ಚು ಪೌಷ್ಟಿಕಾಂಶವುಳ್ಳ ಆಹಾರ, ಹಣ್ಣು ಸೇವಿಸಲು ಸಲಹೆ ನೀಡಲಾಗಿದೆ’ ಎಂದು ಅವರು ಹೇಳಿದರು.

‘ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಚೇತರಿಸಿಕೊಂಡಿದ್ದಾರೆ. ಸಿಟಿ ಸ್ಕ್ಯಾನ್ ಮಾಡಿದ್ದೇವೆ. ತಲೆಗೆ ಬಲವಾದ ಪೆಟ್ಟು ಬಿದ್ದ ಕಾರಣ ಮಿದುಳಿಗೆ ಸ್ವಲ್ಪ ಊತ ಬಂದಿದೆ. ಕಾರು ಚಾಲಕ, ಗನ್‌ಮ್ಯಾನ್ ಕೈ, ಭುಜಕ್ಕೆ ಪೆಟ್ಟಾಗಿದ್ದು ಸಮಸ್ಯೆ ಏನೂ ಇಲ್ಲ’ ಎಂದರು.



ಮುಡಾ: ವಿಚಾರಣೆ ಮುಂದೂಡಿಕೆ

ಧಾರವಾಡ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್‌ನ ಧಾರವಾಡ ಪೀಠ ಜ. 27ಕ್ಕೆ ಮುಂದೂಡಿದೆ.

‘ವಾದವನ್ನು ಆಲಿಸಿದ ನ್ಯಾಯಾಲಯ ಎದುರುದಾರರಿಗೆ ತಕರಾರು ಅರ್ಜಿ ಸಲ್ಲಿಸಲು ಅವಕಾಶ ನೀಡಿದೆ. ಜ. 27ಕ್ಕೆ ವಿಚಾರಣೆ ಮುಂದೂಡಿದೆ’ ಎಂದು ಬಳಿಕ ಸುದ್ದಿಗಾರೊಂದಿಗೆ ಮಾತನಾಡಿದ ಸ್ನೇಹಮಯಿ ಕೃಷ್ಣ ತಿಳಿಸಿದರು.



ರಥೋತ್ಸವ ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲ್ಲೂಕಿನ ಚುಂಚನಕಟ್ಟೆ ಶ್ರೀರಾಮ ದೇವರ ಬ್ರಹ್ಮರಥೋತ್ಸವ ಬುಧವಾರ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು ಪ್ರಜಾವಾಣಿ ಚಿತ್ರ: ಸಾಲಿಗ್ರಾಮ ಯಶವಂತ್

ಅಗ್ನಿ ಅವಘಡ: ನವೋದ್ಯಮಗಳಿಗೆ ಪರಿಹಾರದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬಯೋ ಇನೋವೇಷನ್ ಸೆಂಟರ್‌ನಲ್ಲಿ (ಬಿಬಿಸಿ) ಸಂಭವಿಸಿದ ಅಗ್ನಿ ಅವಘಡದಿಂದ ಸಂತ್ರಸ್ತ ನವೋದ್ಯಮ ಸಂಸ್ಥೆಗಳಿಗೆ ಸರ್ಕಾರದಿಂದ ನೆರವು ಮತ್ತು ಪರಿಹಾರ ನೀಡುವ ಬಗ್ಗೆ ಪರಿಶೀಲಿಸುವುದಾಗಿ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

ಸಂತ್ರಸ್ತ ನವೋದ್ಯಮ ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಭೆ ನಡೆಸಿ ಅವರು ಈ ಭರವಸೆ ನೀಡಿದರು.

ಈ ಅಗ್ನಿ ದುರಂತದಲ್ಲಿ ಮೌಲ್ಯಯುತ ವಸ್ತುಗಳು ಸುಟ್ಟು ಭಸ್ಮವಾಗಿದೆ. ಕಂಪ್ಯೂಟರ್‌ಗಳಲ್ಲಿ ಸಂಗ್ರಹಿಸಿಟ್ಟಿದ್ದ ಮಾಹಿತಿ, ದತ್ತಾಂಶ, ಸಂಶೋಧನೆಗಳು ಹಾಳಾಗಿವೆ. ನವೋದ್ಯಮಗಳನ್ನು ಹಿಂದಿನ ಸ್ಥಿತಿಗೆ ತೆಗೆದುಕೊಂಡು ಹೋಗಲು ಹೆಚ್ಚಿನ ಶ್ರಮವಹಿಸಬೇಕಾಗುತ್ತದೆ. ಸಿಎಸ್‌ಆರ್ ನಿಧಿ ಸೇರಿ ಸಂತ್ರಸ್ತರಿಗೆ ಪರಿಹಾರ ನೀಡಲು ಮಾರ್ಗೋಪಾಯಗಳನ್ನು ಯೋಚಿಸುವುದಾಗಿ ಪ್ರಿಯಾಂಕ್ ತಿಳಿಸಿದರು.

ಬಿಬಿಸಿ ಕೇಂದ್ರದಲ್ಲಿ ಸುಮಾರು 12 ಸಂಶೋಧನಾ ಪ್ರಯೋಗಾಲಯಗಳಿದ್ದು, ಇಲ್ಲಿ ಜೀವ ವಿಜ್ಞಾನ, ಆರೋಗ್ಯ, ಔಷಧಿ, ಜೈವಿಕ, ಕೃಷಿ, ಆಹಾರ, ಕೈಗಾರಿಕಾ ಜೈವಿಕ ತಂತ್ರಜ್ಞಾನ, ಜೈವಿಕ ಪರಿಸರ ತಂತ್ರಜ್ಞಾನ ಸೇರಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಸಂಶೋಧನೆಗಳು ನಡೆಯುತ್ತಿದ್ದವು ಎಂಬ ವಿಚಾರವನ್ನು ನವೋದ್ಯಮ ಪ್ರತಿನಿಧಿಗಳು ಸಚಿವರಿಗೆ ತಿಳಿಸಿದರು. ಅಲ್ಲದೇ, ಪರಿಹಾರ ನೀಡುವಂತೆಯೂ ಮನವಿ ಮಾಡಿದರು.

ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್ ಮತ್ತು ನಿರ್ದೇಶಕ ದರ್ಶನ್ ಸಭೆಯಲ್ಲಿ ಇದ್ದರು.

ಸಾಮೂಹಿಕ ಅತ್ಯಾಚಾರ, ಮೂವರ ಬಂಧನ

ಇನ್‌ಸ್ಟಾಗ್ರಾಂ ಮೂಲಕ ಪರಿಚಯ • ಬಂಧಿತರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ರಾಯಬಾಗ ತಾಲ್ಲೂಕಿನ ಹಾರೂಗೇರಿ ಠಾಣಾ ವ್ಯಾಪ್ತಿಯಲ್ಲಿ 17 ವರ್ಷದ ಇಬ್ಬರು ಯುವತಿಯರ ಮೇಲೆ ಮೂವರು ಯುವಕರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ.

ಕೃತ್ಯದ ವಿಡಿಯೊ ಚಿತ್ರೀಕರಿಸಿಕೊಂಡು ಬೆದರಿಸುತ್ತಿದ್ದ ಆರೋಪಿಗಳನ್ನು ಪೋಕ್ಸೊ ಪ್ರಕರಣದಡಿ ಪೊಲೀಸರು ಬಂಧಿಸಿದ್ದಾರೆ.

‘ಯಲ್ಪಾರಟ್ಟಿಯ ಅಭಿಷೇಕ ಬಾಳಪ್ಪ ಬೆವನೂರು, ಹಾರೂಗೇರಿಯ ಆದಿಲ್ ಷಾ ಶಬ್ಬೀರ್ ಜಮಾದಾರ ಮತ್ತು ಅಲಕನೂರಿನ ಕೌತುಕ್ ಬಾನು ಬಡಿಗೇರ ಬಂಧಿತರು. ಕಾಲೇಜು ಓದು ನಿಲ್ಲಿಸಿದ್ದ ಅವರು ನಿರುದ್ಯೋಗಿ ಆಗಿದ್ದರು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.



ಅಭಿಷೇಕ



ಆದಿಲ್ ಷಾ



ಕೌತುಕ್

ಇಬ್ಬರೂ ಯುವತಿಯರು ಪಿಯುಸಿ ವಿದ್ಯಾರ್ಥಿನಿಯರು. ಅಭಿಷೇಕ ಎಂಬಾತ ಇನ್‌ಸ್ಟಾಗ್ರಾಂ ಮೂಲಕ ಒಬ್ಬ ಯುವತಿಯ ಪರಿಚಯ ಮಾಡಿಕೊಂಡಿದ್ದ. ಮೆಸೇಜುಗಳಿಗೆ ಪ್ರತಿಕ್ರಿಯಿಸಿದ್ದ ಯುವತಿ, ಆರೋಪಿಯೊಂದಿಗೆ ಸಲುಗೆ ಬೆಳೆಸಿಕೊಂಡಿದ್ದಳು.

ಜನವರಿ 3ರಂದು ಅಥಣಿ ತಾಲ್ಲೂಕಿನ ಕೊಕಟನೂರು ಜಾತ್ರೆಯಲ್ಲಿ ಭೇಟಿಯಾಗಿದ್ದರು. ಎರಡನೇ ಭೇಟಿಗೆ ಸವದತ್ತಿಯ ಯಲ್ಲಮ್ಮನ ಗುಡ್ಡಕ್ಕೆ ಬರಲು ಅಭಿಷೇಕ ಆಹ್ವಾನಿಸಿದ್ದ. ಆಗ ಯುವತಿ, ಸಹಪಾಠಿಯಾಗಿದ್ದ ಇನ್ನೊಬ್ಬ ಯುವತಿಯನ್ನೂ ಕರೆ ತಂದಿದ್ದಳು.

ಅಭಿಷೇಕ ಕೂಡಾ ಸ್ನೇಹಿತರಾದ ಆದಿಲ್ ಷಾ ಮತ್ತು ಕೌತುಕ್‌ನನ್ನು ಕರೆದುಕೊಂಡು ಬಂದಿದ್ದ. ಕಾರಿನಲ್ಲಿ ಎಲ್ಲರೂ ಪ್ರಯಾಣಿಸಿದ್ದರು. ಸವಸುದ್ದಿ ಹೊರವಲಯದ ಗುಡ್ಡಗಾಡು ಪ್ರದೇಶಕ್ಕೆ ಕರೆದೊಯ್ದಿದ್ದರು. ಅಭಿಷೇಕ ಮತ್ತು ಆದಿಲ್ ಷಾ ಸೇರಿ ಯುವತಿಯೊಬ್ಬಳ ಮೇಲೆ, ಕೌತುಕ್ ಕಾರಿನಲ್ಲೇ ಇನ್ನೊಬ್ಬ ಯುವತಿ ಮೇಲೆ ಅತ್ಯಾಚಾರ ಎಸಗಿದ’ ಎಂದರು.

‘ಅತ್ಯಾಚಾರ ಕೃತ್ಯದ ಪ್ರತಿ ಕ್ಷಣಗಳನ್ನೂ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದರು. ವಿಡಿಯೊ ತೋರಿಸಿ ಪದೇಪದೇ ಬರುವಂತೆ ಬೆದರಿಕೆ ಒಡ್ಡುತ್ತಿದ್ದರು. ಎಲ್ಲರೂ ಗೋವಾಕ್ಕೆ ಹೋಗೋಣ, ಬರದಿದ್ದರೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಡುತ್ತೇವೆ ಎಂದು ‘ಬ್ಲ್ಯಾಕ್‌ಮೇಲ್’ ಮಾಡಿದ್ದರು. ಹೆದರಿದ ಒಬ್ಬ ಯುವತಿ ಜನವರಿ 13ರಂದು ಹಾರೂಗೇರಿ ಠಾಣೆಯಲ್ಲಿ ದೂರು ದಾಖಲಿಸಿದರು. ನಂತರವೇ ಪ್ರಕರಣ ಗೊತ್ತಾಗಿದೆ’ ಎಂದು ತಿಳಿಸಿದರು.

‘ಅತ್ಯಾಚಾರ ಕೃತ್ಯದ ವಿಷಯವನ್ನು ಪೊಲೀಸರಿಗೆ ತಿಳಿಸಿದರೆ ಕೊಲೆ ಮಾಡುತ್ತೇವೆ ಎಂದು ಹೆದರಿಸಿದ್ದರು. ಹೀಗಾಗಿ, ಯುವತಿ ತಡವಾಗಿ ದೂರು ನೀಡಿದ್ದಾರೆ’ ಎಂದೂ ವಿವರಿಸಿದರು.

ಜಾತಿ ಗಣತಿ ವರದಿ: ಸರ್ಕಾರ ಯೂಟರ್ನ್

ಒಂದನೇ ಪುಟದಿಂದ...

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಜಾತಿ ಗಣತಿ ವರದಿಯಲ್ಲಿರುವ ಅಂಕಿ ಅಂಶಗಳು ಇನ್ನೂ ಬಹಿರಂಗಗೊಂಡಿಲ್ಲ. ಈ ವಿಚಾರದ ಬಗ್ಗೆ ವಿರೋಧ ಅನವಶ್ಯಕ. ಸಂಪುಟ ಸಭೆಯಲ್ಲಿ ವರದಿ ಮಂಡಿಸಲು ತೀರ್ಮಾನಿಸಲಾಗಿತ್ತು. ಆದರೆ, ಗುರುವಾರದ ಸಭೆಯಲ್ಲಿ ಈ ವರದಿಯನ್ನು ಮಂಡಿಸುವುದಿಲ್ಲ. ಮುಂದಿನ ಸಂಪುಟ ಸಭೆಯಲ್ಲಿ ವಿಷಯ ಮಂಡಿಸಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ಜಾತಿ ಗಣತಿ ವರದಿಯನ್ನು ಸರ್ಕಾರ ಒಪ್ಪಬಾರದು ಎಂದು ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಗಳು ಪಟ್ಟು ಹಿಡಿದಿವೆ. ‘ಇದೊಂದು ಅವೈಜ್ಞಾನಿಕ ವರದಿ. ಅಂಕಿ ಅಂಶಗಳು ಊಹಾಪೋಹದಿಂದ ಕೂಡಿವೆ. ಈ ವರದಿಯನ್ನು ಸರ್ಕಾರ ತಿರಸ್ಕರಿಸಬೇಕು’ ಎಂದು ಒಕ್ಕಲಿಗ ಹಾಗೂ ಲಿಂಗಾಯತ ಸಂಘಟನೆಗಳು ಒತ್ತಾಯಿಸಿದ್ದವು. ಈ ವರದಿ ಮಂಡನೆಗೆ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯ ಪ್ರತಿನಿಧಿಸುವ ಸಚಿವರ ವಿರೋಧವೂ ಇದೆ.

2013ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಸಮೀಕ್ಷೆ ನಡೆಸಲು ಕ್ರಮವಹಿಸಿದ್ದರು. ಇದಕ್ಕೆ ₹160 ಕೋಟಿ ವೆಚ್ಚ ಮಾಡಲಾಗಿತ್ತು. ಆಗ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ನೇತೃತ್ವದ ಆಯೋಗ ಸಮೀಕ್ಷೆ ನಡೆಸಿತ್ತು. 2017ರಲ್ಲೇ ವರದಿ ಸಿದ್ಧವಾಗಿದ್ದರೂ ಅದನ್ನು ಸರ್ಕಾರಕ್ಕೆ ಸಲ್ಲಿಸಿರಲಿಲ್ಲ. ನಂತರ ಬಂದ ಸರ್ಕಾರಗಳ ಅದರ ಬಗ್ಗೆ ಒಲವು ತೋರಲಿಲ್ಲ. ಬಳಿಕ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ಅವರು, ಕಾಂತರಾಜ ಅವರ ವರದಿ ಹಾಗೂ ತಮ್ಮ ಶಿಫಾರಸುಗಳನ್ನು 2023ರ ಫೆಬ್ರುವರಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದರು.

‘ಈ ಹೊತ್ತಿಗೆ’ ಕಥಾ–ಕಾವ್ಯ ಪ್ರಶಸ್ತಿ ಪ್ರಕಟ



ಪೂರ್ಣಿಮಾ ಭಟ್ಟ



ಡಾ.ವಿ.ಎ. ಲಕ್ಷ್ಮಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿರಸಿ ತಾಲ್ಲೂಕಿನ ಸಣ್ಣಕೇರಿಯ ಪೂರ್ಣಿಮಾ ಭಟ್ಟ ಅವರ ‘ಕತೆ ಜಾರಿಯಲ್ಲಿರಲಿ’ ಅಪ್ರಕಟಿತ ಕಥಾಸಂಕಲನಕ್ಕೆ ‘ಈ ಹೊತ್ತಿಗೆ ಕಥಾ ಪ್ರಶಸ್ತಿ’ ಹಾಗೂ ಬೆಳಗಾವಿ ಜಿಲ್ಲೆ ಮೋಳೆಯ ಡಾ. ವಿ.ಎ. ಲಕ್ಷ್ಮಣ ಅವರ ‘ಪರಿಮಳದ ಬಾಕಿ ಮೊತ್ತ’ ಅಪ್ರಕಟಿತ ಕವನ ಸಂಕಲನಕ್ಕೆ ‘ಈ ಹೊತ್ತಿಗೆ ಕಾವ್ಯ ಪ್ರಶಸ್ತಿ’ ಪ್ರಕಟಿಸಲಾಗಿದೆ.

ಕಥೆ ವಿಭಾಗಕ್ಕೆ ‘ಸುಧಾ’ ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ, ಕಾವ್ಯ ವಿಭಾಗಕ್ಕೆ ದೂರದರ್ಶನದ ನಿರ್ದೇಶಕಿ ಆರತಿ ಎಚ್.ಎನ್. ತೀರ್ಪುಗಾರರಾಗಿದ್ದರು. ಎರಡೂ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಹಾಗೂ ಫಲಕಗಳನ್ನು ಒಳಗೊಂಡಿವೆ ಎಂದು ಪ್ರಕಟಣೆ ತಿಳಿಸಿದೆ.

ಕೈ–ಕಮಲ: ಗದ್ದುಗೆ ಗುದ್ದಾಟ

ಒಂದನೇ ಪುಟದಿಂದ...

ಆಗ ಸಚಿವರ ಮೇಲೆ ದೂರು ನೀಡಿದ್ದರು. ನಂತರ ಕೆಲವು ರಾಜಕೀಯ ಬೆಳವಣಿಗೆಗಳು ನಡೆದವು.

ಅದರ ಬೆನ್ನಲ್ಲೇ, ರಾತ್ರಿ 9.15ರ ಹೊತ್ತಿಗೆ ವಿಡಿಯೊ ಬಿಡುಗಡೆ ಮಾಡಿದ ಸತೀಶ ಜಾರಕಿಹೊಳಿ, ‘ನಾನು ಡಿ.ಕೆ. ಶಿವಕುಮಾರ್ ಬದಲಾವಣೆ ಆಗಬೇಕೆಂದು ಹೇಳಿಕೆ ಕೊಟ್ಟಿಲ್ಲ. ಪಕ್ಷ ಸಂಘಟನೆ ದೃಷ್ಟಿಯಿಂದ ಸಲಹೆಗಳನ್ನು ನೀಡಿದ್ದೇನೆ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ’ ಎಂದಿದ್ದಾರೆ.

‘ನಮ್ಮ ಪಕ್ಷದಲ್ಲಿ ಹಿಂದೆ ಇದ್ದಂತಹ ಸಂಘಟನೆ ಈಗ ಇಲ್ಲ ಎಂದಿದ್ದೇನೆ. ಎಲ್ಲ ವಿಷಯಗಳಲ್ಲಿಯೂ ಹೈಕಮಾಂಡ್ ನಿರ್ಧಾರ ಅಂತಿಮ ಎಂದೂ ಪದೇ ಪದೆ ಹೇಳಿದ್ದೇನೆ. ಪಕ್ಷದಲ್ಲಿ ಕೆಲ ಭಿನ್ನಾಭಿಪ್ರಾಯ ನಿರಂತರವಾಗಿ ಇದ್ದೇ ಇರುತ್ತದೆ’ ಎಂದೂ ಹೇಳಿದ್ದಾರೆ.

ಬೆಳಿಗ್ಗೆ ಹೇಳಿದ್ದೇನು?: ‘ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಪಕ್ಷ ಸಂಘಟನೆ ವಿಚಾರ ಚರ್ಚೆ ಮಾಡಿದ್ದೇನೆ. ಕೆಪಿಸಿಸಿಗೆ ಆದಷ್ಟು ಬೇಗ ಹೊಸ ಅಧ್ಯಕ್ಷರನ್ನು ನೇಮಿಸಬೇಕೆಂದು ಹೇಳಿದ್ದೇನೆ. ಹಾಗೆಂದು, ನನ್ನನ್ನೇ ಅಧ್ಯಕ್ಷ ಮಾಡಿ ಎಂದು ಕೇಳಿಲ್ಲ’ ಎಂದು ಸತೀಶ ಹೇಳಿದ್ದರು.

‘ಪಕ್ಷಕ್ಕೆ ಪೂರ್ಣ ಪ್ರಮಾಣದ ಅಧ್ಯಕ್ಷರು ಬೇಕು. ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿ ಮುಂದುವರಿಯಬೇಕೇ, ಬೇಡವೇ ಎಂಬ ಬಗ್ಗೆ ಗೊಂದಲಗಳಿವೆ. ಈ ಗೊಂದಲಗಳಿಗೆ ಹೈಕಮಾಂಡ್ ಇತಿಶ್ರೀ ಹಾಕಬೇಕು. ಶಿವಕುಮಾರ್ ಅವರನ್ನೇ ಮುಂದುವರಿಸುವುದಾದರೆ ಅದನ್ನಾದರೂ ಸ್ಪಷ್ಟಪಡಿಸುವಂತೆ ಸುರ್ಜೇವಾಲಾಗೆ ತಿಳಿಸಿದ್ದೇನೆ’ ಎಂದಿದ್ದರು.

‘ಅಧ್ಯಕ್ಷ ಸ್ಥಾನಕ್ಕೆ ನೇಮಕಕ್ಕೂ ಮೊದಲು ಪಕ್ಷದ ಎಲ್ಲ ಶಾಸಕರ ಅಭಿಪ್ರಾಯವನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಹೈಕಮಾಂಡ್ ಆಲಿಸಬೇಕು. ಶಾಸಕರ ಒಟ್ಟು ಅಭಿಪ್ರಾಯದಂತೆ ನೇಮಕ ಆಗಬೇಕು. ಪಕ್ಷ ಸಂಘಟಿಸುವ, ಮತ ತರುವ ಸಾಮರ್ಥ್ಯ ಹೊಂದಿರುವ ಜನಪ್ರಿಯರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಸಚಿವರಾದ ಬಳಿಕ ಬೇರೆ ಬೇರೆ ಕಾರಣಗಳಿಗೆ ಪಕ್ಷ ಚಟುವಟಿಕೆ ಆಗುತ್ತಿಲ್ಲ. ಹೀಗಾಗಿ ಸಂಘಟನೆ ಬಡವಾಗಿದೆ’ ಎಂದಿದ್ದರು.

ವೇಣುಗೋಪಾಲ್ ಟಿಪ್ಪಣಿ ಮುಂದಿಟ್ಟು ಪ್ರಸ್ತಾವ: ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು 2023ರ ಮೇ 18ರಂದು ಹೊರಡಿಸಿದ್ದ ಪತ್ರಿಕಾ ಹೇಳಿಕೆಯಲ್ಲಿ, ‘ಲೋಕಸಭಾ ಚುನಾವಣೆವರೆಗೂ ಡಿ.ಕೆ ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯುತ್ತಾರೆ’ ಎಂದಿದ್ದರು. ಆ ಟಿಪ್ಪಣಿ ಮುಂದಿಟ್ಟುಕೊಂಡಿರುವ ಸತೀಶ, ‘ಲೋಕಸಭೆ ಚುನಾವಣೆ ಬಳಿಕ ಅಧ್ಯಕ್ಷರನ್ನು ಬದಲಾವಣೆ ಮಾಡುತ್ತೇವೆ ಎನ್ನುವುದು ವೇಣುಗೋಪಾಲ್ ಅವರ ಟಿಪ್ಪಣಿಯಲ್ಲಿದೆ. ಲೋಕಸಭೆ ಚುನಾವಣೆ ಮುಗಿದು ಆರು ತಿಂಗಳು ಕಳೆಯಿತು. ಟಿಪ್ಪಣಿಯಲ್ಲಿರುವ ಅಂಶ ಅನುಷ್ಠಾನಕ್ಕೆ ಬರಬೇಕಲ್ಲವೇ ಎಂದು ಪ್ರಶ್ನಿಸಿದರು’ ಎಂದು ಮೂಲಗಳು ಹೇಳಿವೆ.

ಸತೀಶ ಹೇಳಿಕೆಗೆ ಸಮ್ಮತಿಯಿದೆ– ತನ್ವೀರ್

ಮೈಸೂರು: ‘ಅಧಿಕಾರ ಹಂಚಿಕೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಸಚಿವ ಸಂಪುಟ ಪುನಾರಚನೆ ಮತ್ತಿತರ ವಿಚಾರಗಳಲ್ಲಿ ಗೊಂದಲಗಳು ಇರುವುದು ಸತ್ಯ. ಅದರಿಂದ ಸರ್ಕಾರಕ್ಕೆ ಹಾನಿ ಆಗುತ್ತಿರುವುದೂ ಸತ್ಯ. ಗೊಂದಲಗಳನ್ನು ಹೈಕಮಾಂಡ್ ಆದಷ್ಟು ಬೇಗ ನಿವಾರಿಸಬೇಕು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ತನ್ವೀರ್ ಸೇಠ್ ಹೇಳಿದರು.



ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಈ ವಿಚಾರದಲ್ಲಿ ಸಚಿವ ಸತೀಶ ಜಾರಕಿಹೊಳಿ ನೇರವಾಗಿಯೇ ಹೇಳಿಕೆ ನೀಡಿದ್ದಾರೆ. ಅದಕ್ಕೆ ನನ್ನ ಸಮ್ಮತಿಯೂ ಇದೆ. ಕೆಪಿಸಿಸಿ ಅಧ್ಯಕ್ಷರನ್ನಾಗಿ ಯಾರನ್ನು ಮಾಡಬೇಕು ಎಂಬುದು ಹೈಕಮಾಂಡ್ ವಿವೇಚನೆಗೆ ಬಿಟ್ಟದ್ದು. ಇಂಥವರನ್ನು ನೇಮಿಸಿ, ಹೀಗೆಯೇ ಮಾಡಿ ಎಂದು ನಾನು ಹೇಳುವುದಕ್ಕೆ ಬರುವುದಿಲ್ಲ’ ಎಂದರು.

ಸಚಿವರ ಹೇಳಿಕೆಗೆ ಕಡಿವಾಣ ಹೈಕಮಾಂಡ್‌ಗೆ ಡಿಕೆಶಿ ಆಗ್ರಹ

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಭೋಜನಕೂಟದ ಹೆಸರಿನಲ್ಲಿ ಕೆಲವು ಸಚಿವರು ನಡೆಸುತ್ತಿರುವ ಚಟುವಟಿಕೆಗಳು ಹಾಗೂ ಅವರು ನೀಡುತ್ತಿರುವ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಮಂಗಳವಾರ ರಾತ್ರಿ ಸುಮಾರು ಒಂದು ಗಂಟೆ ಖರ್ಗೆ ಅವರೊಂದಿಗೆ ಚರ್ಚಿಸಿದ ಅವರು ರಾಜ್ಯ ಸರ್ಕಾರ ಹಾಗೂ ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದರು ಎಂದು ಮೂಲಗಳು ಹೇಳಿವೆ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಸಚಿವರಾದ ಸತೀಶ ಜಾರಕಿಹೊಳಿ, ಕೆ.ಎನ್.ರಾಜಣ್ಣ ಬಹಿರಂಗ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹೈಕಮಾಂಡ್ ಕೂಡಲೇ ಮಧ್ಯಪ್ರವೇಶಿಸಿ ಕಡಿವಾಣ ಹಾಕಬೇಕು. ಇಲ್ಲದಿದ್ದರೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಬಿಬಿಎಂಪಿ ಚುನಾವಣೆಗಳಲ್ಲಿ ಪಕ್ಷ ಬೆಲೆ ತೆರಬೇಕಾಗುತ್ತದೆ ಎಂದೂ ಖರ್ಗೆ ಅವರ ಗಮನಕ್ಕೆ ತಂದರು.

ಬಹಿರಂಗ ಹೇಳಿಕೆ ನೀಡದಂತೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸೂಚನೆ ನೀಡಿದ್ದರು. ಆದರೂ, ಸಿದ್ದರಾಮಯ್ಯ ಆಪ್ತ ಸಚಿವರು ಹೇಳಿಕೆ ನೀಡುವುದನ್ನು ನಿಲ್ಲಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

‘ರಮೇಶ ಓಡಾಡುವುದೇ ಕಷ್ಟವಾಗಲಿದೆ’

ಒಂದನೇ ಪುಟದಿಂದ...

ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಯಡಿಯೂರಪ್ಪ ಅವರು ಹಳ್ಳಿಹಳ್ಳಿಗಳಲ್ಲಿ ಸುತ್ತಾಡಿ ರಾಜ್ಯದಲ್ಲಿ ಪಕ್ಷವನ್ನು ಕಟ್ಟಿದ್ದಾರೆ. ಇತ್ತೀಚೆಗಷ್ಟೇ ಪಕ್ಷಕ್ಕೆ ಬಂದಿರುವ ರಮೇಶ ಜಾರಕಿಹೊಳಿ ಅವರು ಯಡಿಯೂರಪ್ಪ ಅವರ ಬಗ್ಗೆ ಎಚ್ಚರಿಕೆಯಿಂದ ಮಾತನಾಡಬೇಕು. ಅವರಿಗೆ ಸಮಸ್ಯೆ ಇದ್ದರೆ ಹೈಕಮಾಂಡ್ ಜೊತೆ ಮಾತನಾಡಲಿ ಎಂದರು.

‘ಅವರ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳುತ್ತೀರಿ. ಕೆಲವೇ ದಿನಗಳಲ್ಲಿ ಪಕ್ಷದಲ್ಲಿ ಎಲ್ಲವೂ ಸರಿಹೋಗುತ್ತದೆ’ ಎಂದೂ ಅವರು ಹೇಳಿದರು.

ನಾವಿದ್ದರೆ ಪಕ್ಷ: ಪರಮೇಶ್ವರ

ಬೆಂಗಳೂರು: ‘ಸಮುದಾಯಗಳ ಸಭೆಗಳನ್ನು ಪಕ್ಷವೇ ಮಾಡಲಿ. ಅದರಲ್ಲಿ ತಪ್ಪೇನಿದೆ? ನಮಗೆ ನಮ್ಮ ಸಮಸ್ಯೆ ಬಗೆಹರಿಯಬೇಕು. ನಾವೇ ಪಕ್ಷ, ನಾವಿದ್ದರೆ ಪಕ್ಷ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಬುಧವಾರ ಜೊತೆ ಮಾತನಾಡಿದ ಅವರು, ‘ಜನ ಸಮುದಾಯ ಕಟ್ಟಿರುವ ಪಕ್ಷ ಅಲ್ಲವೇ ಕಾಂಗ್ರೆಸ್. ಕಾಂಗ್ರೆಸ್ ಪಕ್ಷವೇ ಒಂದು ಆಂದೋಲನ. ನಮ್ಮದು ಕೇಡರ್ ಪಾರ್ಟಿ ಅಲ್ಲ’ ಎಂದರು.

ಮುಖ್ಯಮಂತ್ರಿ ಹುದ್ದೆ ವಿಚಾರದಲ್ಲಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿಕೆಯ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ತಿಮ್ಮಾಪುರ ಅವರಿಗೆ ಸಾಮರ್ಥ್ಯ ಇದೆಯಲ್ಲವೇ. 30 ವರ್ಷಕ್ಕೂ ಹೆಚ್ಚು ಅವಧಿಯಿಂದ ರಾಜಕೀಯ ಮಾಡಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ವಿಚಾರದ ಕುರಿತು ಯಾರೂ ಮಾತನಾಡಬಾರದು ಎಂದು ಸುರ್ಜೇವಾಲಾ ಅವರು ಹೇಳಿದ್ದಾರೆ. ಹೀಗಾಗಿ, ಆ ಬಗ್ಗೆ ಕಡಿಮೆ ಮಾತನಾಡುತ್ತೇನೆ’ ಎಂದರು.

‘ಮಾರ್ಚ್ ನಂತರ ಬದಲಾವಣೆ ಆಗಬಹುದೇ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ನನಗೆ ಶಾಸ್ತ್ರ ಹೇಳಲು ಬರಲ್ಲ. ಜೋತಿಷ್ಯ ಹೇಳುವುದಿದ್ದರೆ ನಾನು ಹೇಳುತ್ತಿದ್ದೆ’ ಎಂದರು.

ಸುಮೈರ್ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ

ಬೆಂಗಳೂರು: ಐಎಎಸ್ ಅಧಿಕಾರಿ ಮೊಹಮ್ಮದ್ ಹ್ಯಾರಿಸ್ ಸುಮೈರ್ ಅವರನ್ನು ಕೆಪಿಎಸ್‌ಸಿ ಜಂಟಿ ಪರೀಕ್ಷಾ ನಿಯಂತ್ರಕರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಖಾಲಿ ಇದ್ದ ಈ ಹುದ್ದೆಯ ಹೊಣೆಯನ್ನು ಅ. 23ರಂದು ಲೋಖಂಡೆ ಸ್ನೇಹಲ್ ಸುಧಾಕರ್ ಅವರಿಗೆ ಹೆಚ್ಚುವರಿಯಾಗಿ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಅವರು ಹುದ್ದೆ ವಹಿಸಿಕೊಂಡಿಲ್ಲ.

ಕೆಪಿಸಿಸಿ ಅಧ್ಯಕ್ಷರು ಮತ್ತು ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ ಸಂದರ್ಭದಲ್ಲಿ ಲೋಖಂಡೆ ಸ್ನೇಹಲ್ ಸುಧಾಕರ್ ಅವರು ಹುದ್ದೆ ವಹಿಸಿಕೊಳ್ಳದ ವಿಷಯ ಚರ್ಚೆಯಾಗಿತ್ತು.

ಸರಿ ಉತ್ತರ ಪ್ರಕಟ: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಡಿ. 29ರಂದು ನಡೆದ ಮರು ಪರೀಕ್ಷೆಯ ಸರಿ ಉತ್ತರಗಳನ್ನು (ಕೀ) ಕೆಪಿಎಸ್‌ಸಿ ಬುಧವಾರ ಪ್ರಕಟಿಸಿದೆ. ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಪೂರ್ಣಗೊಂಡ ಬಳಿಕ ಸರಿ ಉತ್ತರಗಳನ್ನು ಪ್ರಕಟಿಸಲಾಗಿದೆ.

ಈ ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆದಿತ್ತು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆ– ಉತ್ತರಗಳಲ್ಲಿ ತಪ್ಪುಗಳು ಕಾಣಿಸಿಕೊಂಡ ಕಾರಣ ಡಿ. 29ರಂದು ಮರು ಪರೀಕ್ಷೆ ನಡೆದಿತ್ತು. ಮರು ಪರೀಕ್ಷೆಯಲ್ಲಿಯೂ ಭಾಷಾಂತರದ ಹಲವು ತಪ್ಪುಗಳಿದ್ದು, ಮತ್ತೆ ಮರು ಪರೀಕ್ಷೆ ನಡೆಸಬೇಕು ಅಥವಾ ಪೂರ್ವಭಾವಿ ಪರೀಕ್ಷೆಯಿಂದ ಅಭ್ಯರ್ಥಿಗಳನ್ನು ಪರಿಗಣಿಸುವ ಅನುಪಾತವನ್ನು ಹೆಚ್ಚಿಸಬೇಕು ಎಂದು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ಅಬಕಾರಿ ಇಲಾಖೆ: ವರ್ಗಾವಣೆಗೆ ಹೊಸ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆಯ ಹುದ್ದೆಗಳನ್ನು ಕಾರ್ಯನಿರ್ವಾಹಕ ಮತ್ತು ಕಾರ್ಯನಿರ್ವಾಹಕೇತರವೆಂದು ವಿಂಗಡಿಸಿ, ಅಬಕಾರಿ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್, ಹೆಡ್ ಕಾನ್‌ಸ್ಟೆಬಲ್ ಮತ್ತು ಕಾನ್‌ಸ್ಟೆಬಲ್‌ಗಳ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಮಾಡಲು ಹಾಗೂ ಅಧಿಕಾರಿಗಳ ಕಡ್ಡಾಯ ವರ್ಗಾವಣೆಗೆ ರಾಜ್ಯ ಸರ್ಕಾರ ಮುಂದಾಗಿದೆ.

ಈ ಉದ್ದೇಶದಿಂದ ಆರ್ಥಿಕ ಇಲಾಖೆಯು (ಅಬಕಾರಿ) ‘ಕರ್ನಾಟಕ ನಾಗರಿಕ ಸೇವೆಗಳ (ಅಬಕಾರಿ ಇಲಾಖೆಯ ವರ್ಗಾವಣೆ) ನಿಯಮಗಳು– 2025 ಸಿದ್ಧಪಡಿಸಿದೆ. ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವ ಮಂಡನೆ ಆಗಲಿದೆ.

ಅಬಕಾರಿ ಇಲಾಖೆಯಲ್ಲಿ ಆಯಕಟ್ಟಿನ ಜಾಗಗಳಿಗೆ ಅಧಿಕಾರಿ ಗಳ ವರ್ಗಾವಣೆಯಲ್ಲಿ ಪ್ರಭಾವ ಬೀರುವ, ಭ್ರಷ್ಟಾಚಾರ ನಡೆಯುತ್ತಿರುವ ಆರೋಪ ಕೇಳಿ ಬಂದ ಬೆನ್ನಲ್ಲೆ, ಅದಕ್ಕೆ ಕಡಿವಾಣ ಹಾಕಲು ವರ್ಗಾವಣೆ ನಿಯಮವನ್ನೇ ಬದಲಿಸಲು ಸರ್ಕಾರ ನಿರ್ಧರಿಸಿದೆ.

ಅಬಕಾರಿ ಇಲಾಖೆಯು ಸಮವಸ್ತ್ರ ಆಧಾರಿತ ಮತ್ತು ನಿಯಂತ್ರಕ ಇಲಾಖೆ. ಹೀಗಾಗಿ, ಪಾರದರ್ಶಕ, ನಿರ್ದಿಷ್ಟ ಗುರಿ ಹೊಂದಿದ ಮತ್ತು ನಿಯಮಾಧಾರಿತ ವರ್ಗಾವಣೆ ಪದ್ಧತಿಯನ್ನು ಜಾರಿಗೊಳಿಸಿದರೆ ಅಧಿಕಾರಿಗಳು ಮತ್ತು ನೌಕರರು ಇತರ ಪ್ರಭಾವಗಳಿಗೆ ಒಳಗಾಗುವುದನ್ನು ತಡೆಯಬಹುದು. ಅಲ್ಲದೆ, ಇಂತಹ ಪ್ರಕ್ರಿಯೆಯಿಂದ ಯಾವುದೇ ಪ್ರಭಾವಕ್ಕೆ ಒಳಗಾಗದೆ ತಮ್ಮ ಕರ್ತವ್ಯಗಳನ್ನು ಸಿಬ್ಬಂದಿ ನಿಭಾಯಿಸಲು ಅನುಕೂಲ ಆಗಬಹುದು ಎಂದು ಸಭೆಗೆ ಮಂಡಿಸಿದ ಪ್ರಸ್ತಾವದಲ್ಲಿ ವಿವರಿಸಲಾಗಿದೆ.

ಗುರು ಸಿದ್ಧರಾಮೇಶ್ವರ ಜಯಂತಿ ಮಹೋತ್ಸವದಲ್ಲಿ ಸಚಿವ ಎಂ.ಬಿ.ಪಾಟೀಲ ಬಣ್ಣನೆ

‘ಶಿವಯೋಗಿ ಸಿದ್ಧರಾಮೇಶ್ವರರು ಪ್ರೇರಕ ಶಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಕಲ ಪ್ರಾಣಿ–ಪಕ್ಷಿಗಳ ನೀರಿನ ಬವಣೆ ನೀಗಿಸಲು ಶಿವಯೋಗಿ ಸಿದ್ಧರಾಮೇಶ್ವರ ಅವರು ಕೆರೆ, ಕಟ್ಟೆಗಳನ್ನು ನಿರ್ಮಿಸಿದ್ದರು. ವಚನಕಾರರಾಗಿದ್ದ ಅವರು ಸಮಾಜಕ್ಕೆ ಈಗಲೂ ಪ್ರೇರಕ ಶಕ್ತಿ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಬಣ್ಣಿಸಿದರು.

ನೊಳಂಬ ಲಿಂಗಾಯತ ಸಂಘ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಗುರು ಸಿದ್ಧರಾಮೇಶ್ವರರ 852ನೇ ಜಯಂತಿಯ ಸಮಾರೋಪದಲ್ಲಿ ಭಾಗವಹಿಸಿ, ಮಾತನಾಡಿದರು.

‘ಬಸವಣ್ಣನವರು ಕಾಯಕ ಸಮಾಜ ನಿರ್ಮಾಣಕ್ಕೆ ಕರೆ ನೀಡಿದ್ದರು. ಸಿದ್ಧರಾಮೇಶ್ವರರು ದೇವಸ್ಥಾನ, ಕೆರೆ ಕಟ್ಟೆ, ಜಮೀನಿಗೆ ನೀರಾವರಿ ಸೌಕರ್ಯ ವ್ಯವಸ್ಥೆ ಮಾಡುವ ಮೂಲಕ ಬಸವಣ್ಣನವರ ಕನಸನ್ನು ನನಸು ಮಾಡಿದ್ದರು. ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಅವಿಭಜಿತ ವಿಜಯಪುರ ಜಿಲ್ಲೆಗಳ ಭಾಗಗಳಲ್ಲಿ ಸಿದ್ಧರಾಮೇಶ್ವರ ಅವರ ಪ್ರಭಾವ ಇಂದಿಗೂ ಗಾಢವಾಗಿದೆ’ ಎಂದರು.



ಸಮಾರಂಭದಲ್ಲಿ (ಎಡದಿಂದ) ಬಿ.ಎಲ್.ಶಂಕರ್ ಹಾಗೂ ಎಂ.ಬಿ.ಪಾಟೀಲ ಸಮಾಲೋಚನೆ ನಡೆಸಿದರು. ಕೆ. ಷಡಾಕ್ಷರಿ, ಚಂದ್ರಶೇಖರ ಸ್ವಾಮೀಜಿ, ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಫ.ಗು.ಹಳಕಟ್ಟಿ ವಚನ ಸಂಶೋಧನಾ ಕೇಂದ್ರದ ಮೂಲಕ ಸಿದ್ಧರಾಮೇಶ್ವರ ಅವರ ವಚನ ಸಂಪುಟಗಳನ್ನು ಕೂಡ ಪ್ರಕಟಿಸಲಾಗಿದೆ. ವಿಜಯಪುರದಲ್ಲಿ ಅವರ ಹೆಸರಿನ ದೇಗುಲವೇ ಇದೆ’ ಎಂದು ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ‘ಸಿದ್ಧರಾಮೇಶ್ವರ ಅವರು ಕರ್ಮಯೋಗಿಯಾಗಿದ್ದರು. ಆದರ್ಶ ಪುರುಷರಾಗಿದ್ದ ಅವರು, ಹೆಣ್ಣಿಗೆ ಸಾಕ್ಷಾತ್ ಭಗವಂತನ ಸ್ಥಾನ ನೀಡಿದ್ದರು’ ಎಂದು ಸ್ಮರಿಸಿದರು.

ಬ್ಯಾಡಗಿ ಶಾಸಕ ಬಸವರಾಜ್ ಶಿವಣ್ಣನವರ, ‘ಪ್ರತಿ ಕ್ಷೇತ್ರದಲ್ಲಿಯೂ ಸಿದ್ಧರಾಮೇಶ್ವರ ಅವರ ಹೆಸರಿನಲ್ಲಿ ಕೆರೆ, ಕಟ್ಟೆಗಳನ್ನು ನಿರ್ಮಿಸಬೇಕು. ರಾಜ್ಯ ಸರ್ಕಾರವು ಮುಂಬರುವ ಬಜೆಟ್‌ನಲ್ಲಿ ಈ ಕುರಿತು ಯೋಜನೆ ಪ್ರಕಟಿಸಬೇಕು’ ಎಂದು ಆಗ್ರಹಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅವರು ‘12ನೇ ಶತಮಾನದ ಶಿವಶರಣರು’ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಶಿಡ್ಲೇಹಳ್ಳಿ ಮಠದ ಇಮ್ಮಡಿ ಕರಿಬಸವದೇಶಿಕೇಂದ್ರಸ್ವಾಮೀಜಿ, ಬೆಟ್ಟದ ಹಳ್ಳಿಯ ಗವಿಮಠದ ಚಂದ್ರಶೇಖರ ಸ್ವಾಮೀಜಿ, ಪುಷ್ಪಗಿರಿ ಮಠದ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ತಿಪಟೂರು ಶಾಸಕ ಕೆ.ಷಡಕ್ಷರಿ, ಜಯಂತಿ ಮಹೋತ್ಸವದ ಸ್ವಾಗತ ಸಮಿತಿ ಅಧ್ಯಕ್ಷ ಎಸ್.ಎನ್. ಸಿದ್ಧರಾಮಪ್ಪ ಉಪಸ್ಥಿತರಿದ್ದರು.

ತೀವ್ರ ಚರ್ಚೆಗೆ ಗ್ರಾಸವಾದ ನ್ಯಾ.ಶ್ರೀಶಾನಂದ ಹೇಳಿಕೆ ಇರುವ ವಿಡಿಯೊ ಕ್ಲಿಪ್

‘ನಾಯಕನ ಜೊತೆ ಮೊದಲ ರಾತ್ರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾರನ್ನು ಬೇಕಾದರೂ ಮದುವೆ ಮಾಡಿಕೊಳ್ಳಬಹುದು. ಆದರೆ, ಮೊದಲ ರಾತ್ರಿ ಮಾತ್ರ ನಾಯಕನ ಜೊತೆ ಎಂಬ ಆಚರಣೆ ಇಂದಿಗೂ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿದೆ...’


ವಿ.ಶ್ರೀಶಾನಂದ

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಶಾನಂದ ಅವರು ಇತ್ತೀಚಿನ ಪ್ರಕರಣವೊಂದರ ವಿಚಾರಣೆ ವೇಳೆ ಮುಕ್ತ ಕಲಾಪದಲ್ಲಿ ಆಡಿದ್ದಾರೆ ಎನ್ನಲಾದ 1.18 ನಿಮಿಷಗಳ ವಿಡಿಯೊ ಕ್ಲಿಪ್‌ನಲ್ಲಿರುವ ಈ ಹೇಳಿಕೆ ವಿವಿಧೆಡೆ ಸಂಘಟನೆ ಮತ್ತು ಸಮುದಾಯಗಳ ವ್ಯಾಪಕ ಟೀಕೆಗೆ ಗುರಿಯಾಗಿದೆ.

ಪ್ರತಿಭಟನೆ: ನ್ಯಾಯಮೂರ್ತಿಗಳ ಈ ಹೇಳಿಕೆಯನ್ನು ಖಂಡಿಸಿ ‘ಇದೇ 13ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿ, ‘ಮಹರ್ಷಿ ವಾಲ್ಮೀಕಿ ನಾಯಕ ಸಂಘ’ ಮತ್ತು ‘ಸಾಮೂಹಿಕ ಸಂಘಟನೆಗಳ ಒಕ್ಕೂಟ’ ಸುರಪುರ ಬಂದ್ ಆಚರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಗೋರಿಪಾಳ್ಯ ಹೇಳಿಕೆ: ಶ್ರೀಶಾನಂದ ಅವರು, 2024ರ ಸೆಪ್ಟೆಂಬರ್‌ನಲ್ಲಿ ಮುಕ್ತ ಕಲಾಪದ ವೇಳೆ ಕ್ರಿಮಿನಲ್ ಪ್ರಕರಣದ ವಿಚಾರಣೆಯೊಂದರಲ್ಲಿ, ‘ಮುಸ್ಲಿಂ ಬಾಹುಳ್ಯ ಪ್ರದೇಶವಾದ (ಬೆಂಗಳೂರಿನ) ಗೋರಿ ಪಾಳ್ಯದ ಕ್ರಿಮಿನಲ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರು ಹೆದರುತ್ತಿದ್ದಾರೆ. ಏಕೆಂದರೆ, ಅದು ಪಾಕಿಸ್ತಾನದಲ್ಲಿದೆ’ ಎಂದಿದ್ದ ಹೇಳಿಕೆ ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿ ಟೀಕೆಗೆ ಒಳಗಾಗಿತ್ತು. ಇದೇ ರೀತಿ, ವಕೀಲೆಯೊಬ್ಬರಿಗೆ ಮುಕ್ತ ಕಲಾಪದಲ್ಲಿ ಕೇಳಿದ ಅಭಿಪ್ರಾಯವೊಂದರ ಉದಾಹರಣೆಯ ವಿಡಿಯೊ ಕೂಡ ಟೀಕೆಗೆ ಗುರಿಯಾಗಿತ್ತು.

ಈ ಎರಡೂ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ಸ್ವಯಂ ಪ್ರೇರಿತ ಮೊಕದ್ದಮೆ ದಾಖಲಿಸಿಕೊಂಡು ಎರಡು ವಾರಗಳಲ್ಲಿ ವರದಿ ಸಲ್ಲಿಸುವಂತೆ ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಸೂಚಿಸಿತ್ತು. ಈ ಬೆಳವಣಿಗೆಯ ಬೆನ್ನಿಗೇ ಶ್ರೀಶಾನಂದ ಅವರು ಮುಕ್ತ ನ್ಯಾಯಾಲಯದಲ್ಲಿ ತಮ್ಮ ಹೇಳಿಕೆಗಳಿಗೆ ವಿಷಾದ ವ್ಯಕ್ತಪಡಿಸಿದ್ದರು.

ವಿಷಾದದ ಹೇಳಿಕೆ ಏನಿತ್ತು?: ‘ನಾನು ನ್ಯಾಯಮೂರ್ತಿಯಾಗಿ ನಿರ್ದಿಷ್ಟ ವಿಧಾನದಲ್ಲಿ ಕೆಲಸ ಮಾಡಲು ಯಾರೂ ನಿರ್ಬಂಧಿಸಲಾಗಿಲ್ಲ. ಎರಡು ಮೂರು ದಿನಗಳ ಟ್ರೌಮಾ, ಮಾನಸಿಕ ನೋವು. ಅದು ನನಗೆ ಅಗತ್ಯವೇ? ಅವೆಲ್ಲವೂ ಮುಗಿದ ಅಧ್ಯಾಯ. ಯಾವುದೇ ಹಿನ್ನಡೆಯಲಾಗಿಲ್ಲ. ಮುಕ್ತ ನ್ಯಾಯಾಲಯದಲ್ಲಿ ಕೆಲವು ವಿಚಾರಗಳನ್ನು ಸ್ಪಷ್ಟಪಡಿಸುವ ಉದ್ದೇಶವನ್ನು ನಾನು ನಿಲ್ಲಿಸುತ್ತೇನೆ’.

‘ನಾನು ಇಲ್ಲಿ ನ್ಯಾಯಮೂರ್ತಿಯ ಕೆಲಸವನ್ನು ನಿಭಾಯಿಸಬೇಕು. ಅದನ್ನು ಮಾಡುತ್ತೇನೆ. ನಮ್ಮ ಕೆಲವು ಸ್ನೇಹಿತರಿಗೆ ಕಾನೂನು ತತ್ವದ ಶಿಕ್ಷಣ ಅಗತ್ಯವೆನಿಸಿದರೆ ಅವರು ಉಪನ್ಯಾಸ ಕಾರ್ಯಕ್ರಮ ಆಯೋಜಿಸಬಹುದು. ನಾನು ಅಲ್ಲಿಗೆ ತೆರಳಿ ಮಾತನಾಡುತ್ತೇನೆ’.

ಶ್ರೀಶಾನಂದ ಹೇಳಿದ್ದೇನು?

‘ತಳಿಯ ಶಿಲಾಯುಗದ ಕಾಲದಲ್ಲಿ ಹೆಣ್ಣು ಮಕ್ಕಳಿಗೋಸ್ಕರ ಕಾದಾಟಗಳು ನಡೆದಿದ್ದು, ಹೆಣಗಳು ಬೀಳುತ್ತಿದ್ದವು. ಯಾರಿಗೆ ಶಕ್ತಿ ಇತ್ತೋ (ಮೈಟ್ ಈಸ್ ದಿ ರೈಟ್) ಅವನು ನಾಯಕನಾಗುತ್ತಿದ್ದ. ಆ ನಾಯಕನಿಗೆ ಆ ಹೆಣ್ಣು ಮಗಳನ್ನು ಒಪ್ಪಿಸಿ, ಉಳಿದವರು ಎರಡು ಅಥವಾ ಮೂರನೆಯವರಾಗಿ ಆ ಹೆಣ್ಣು ಮಗಳನ್ನು ಉಪಯೋಗಿಸಿಕೊಳ್ಳಬೇಕಿತ್ತು. ಈ ದುಷ್ಟ ಆಚರಣೆ ಈಗಲೂ ಸುರಪುರದಲ್ಲಿದೆ ಎಂಬುದು ನಿಮಗೆ ಗೊತ್ತಿದೆ’.

‘ಯಾರನ್ನು ಬೇಕಾದರೂ ನೀವು ಮದುವೆ ಮಾಡಿಕೊಳ್ಳಬಹುದು. ಆದರೆ, ಮೊದಲ ರಾತ್ರಿ ಮಾತ್ರ ನಾಯಕನ ಜೊತೆ ಎಂದಿದೆ. ಆಮೇಲೆ ಅಲ್ಲೇ ಇರಬಹುದು ಅಥವಾ ಊರು, ಬೇರೆ ಕಡೆ ಹೋಗಿ ಮದುವೆ ಮಾಡಿಕೊಳ್ಳಬಹುದು’.

‘ಎಸ್ ಸಾರ್, ಅದೆಲ್ಲಾ ಈಗ ಸದ್ಯಾನ ಎಂದರೆ; ಆ ಥರ ಈಗಲೂ ನಡೆಯುತ್ತಿದೆ. ಅದರ ಮೇಲೆ ಬೇಕಾದಷ್ಟು ಚಲನಚಿತ್ರಗಳು ಬಂದಿವೆ. ಚಿತ್ರಲ ಸೀಮೆಯಂಥ ಸಿನಿಮಾ ಬಂದಿದೆ. ಇನ್ನೊಂದು..... ಮತ್ತೊಂದು ಬಂತು. ಎಲ್ಲವೂ ಆಯ್ತು. ಸರಿ ಹೋಯ್ತು ಎಂದು ನೋಡಿದರೆ ಇನ್ನೂ ಸರಿ ಹೋಗಿಲ್ಲ’.

‘ದೇವದಾಸಿಯರು ಎಂದರೆ ಏನು? ಅವರೂ ಅದೇನೇ... ಎಲ್ಲ ಬೇಕಾದಷ್ಟು ಮಾಡಿಕೊಂಡರು. ಅದು ಇರಲಿ. ನಾವು ಆ ವಿಚಾರದ ಮೇಲೆ...’

ಇದು ವಿಡಿಯೊದಲ್ಲಿರುವ ಮಾತುಗಳು.



‘ಯಡಿಯೂರಪ್ಪ ಬಂಧನ ಬೇಡ’

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಯಡಿಯೂರಪ್ಪ ಅವರನ್ನು ಬಂಧಿಸದಂತೆ ಈ ಮೊದಲು ನೀಡಿರುವ ಮಧ್ಯಂತರ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.



‘ನನ್ನ ವಿರುದ್ಧ ದಾಖಲಾಗಿರುವ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಬುಧವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್, ಯಡಿಯೂರಪ್ಪ ಅವರು ಘಟನೆ ನಡೆದ ದಿನ ಬಾಲಕಿಯ ಜೊತೆ ಹೇಗೆ ಅನುಚಿತವಾಗಿ ನಡೆದುಕೊಂಡರು ಮತ್ತು ಈ ಕುರಿತಂತೆ ದೂರುದಾರರೂ ಆದ ಆಕೆಯ ತಾಯಿ (ಅವರು ಈಗ ಬದುಕಿಲ್ಲ) ತನಿಖಾಧಿಕಾರಿಗಳಿಗೆ ಒದಗಿಸಿರುವ ಸಾಕ್ಷ್ಯಾಧಾರ, ಬಾಲಕಿಯ ಸ್ವಇಚ್ಛಾ ಹೇಳಿಕೆಯೂ ಸೇರಿದಂತೆ ದೋಷಾರೋಪ ಪಟ್ಟಿಯಲ್ಲಿನ ಪ್ರಮುಖ ಅಂಶಗಳನ್ನು ಸವಿಸ್ತಾರವಾಗಿ ನ್ಯಾಯಪೀಠಕ್ಕೆ ವಿವರಿಸಿದರು.

ಪ್ರಾಸಿಕ್ಯೂಷನ್‌ನ ಸುದೀರ್ಘ ವಾದ ಆಲಿಸಿದ ನ್ಯಾಯಮೂರ್ತಿಯವರು ಯಡಿಯೂರಪ್ಪ ಪರ ವಕೀಲರ ವಾದ ಮಂಡನೆಗೆ ಇದೇ 17ಕ್ಕೆ ದಿನಾಂಕ ನಿಗದಿಪಡಿಸಿ, ಅಲ್ಲಿಯವರೆಗೂ ಯಡಿಯೂರಪ್ಪ ಅವರನ್ನು ಬಂಧಿಸದಂತೆ ನೀಡಿರುವ ಮಧ್ಯಂತರ ತಡೆ ಆದೇಶವನ್ನು ವಿಸ್ತರಿಸಿ ವಿಚಾರಣೆ ಮುಂದೂಡಿದರು. ಮತ್ತೊಬ್ಬ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಅವರೂ ಹಾಜರಿದ್ದರು.

ಸಮಸ್ಯೆಗೆ ಬಿಜೆಪಿ ಹೊಣೆ

ಸಚಿವ ಪ್ರಿಯಾಂಕ್ ಖರ್ಗೆ, ಕಿಯೊನಿಕ್ಸ್ ಅಧ್ಯಕ್ಷ ಶರತ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ದಯೆಯಿಂದ ಕಿಯೊನಿಕ್ಸ್ ಸರಬರಾಜುದಾರರು ದಯಾಮರಣ ಕೋರುವಂತಾಗಿದೆಯೇ ಹೊರತು ನಮ್ಮಿಂದಲ್ಲ. ಭ್ರಷ್ಟಾಚಾರದ ವಿರುದ್ಧದ ಕಠಿಣ ನಿಲುವಿಗೆ ಹಾಗೂ ಜನರ ತೆರಿಗೆ ಹಣದ ದುರ್ಬಳಕೆ ತಡೆಯುವ ಪ್ರಯತ್ನವನ್ನೇ ಬಿಜೆಪಿ ‘ಕಿರುಕುಳ’ ಎನ್ನುವುದು ಎಷ್ಟು ಸರಿ’ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕಿಯೊನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಪ್ರಶ್ನಿಸಿದ್ದಾರೆ.

ಬಾಕಿ ಮೊತ್ತ ಉಳಿಯಲು ಹಿಂದಿನ ಬಿಜೆಪಿ ಸರ್ಕಾರ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಅಶ್ವತ್ಥ ನಾರಾಯಣ ಅವರೇ ನೇರ ಕಾರಣ. ಕಾಂಗ್ರೆಸ್ ಸರ್ಕಾರದ ಪಾರದರ್ಶಕತೆ ಭ್ರಷ್ಟರಿಗೆ ಕಿರುಕುಳದಂತೆ ಭಾಸವಾಗುತ್ತಿದೆ ಎಂದಿದ್ದಾರೆ.

ಕಿಯೊನಿಕ್ಸ್ 2018- 2023ರ ನಡುವೆ ನೀಡಿದ್ದ ₹1,544 ಕೋಟಿ ಮೌಲ್ಯದ ಆದೇಶದಲ್ಲಿ 45 ವಹಿವಾಟುಗಳ ಲೆಕ್ಕಪರಿಶೋಧನೆ ನಡೆಸಿದ್ದು, ₹455 ಕೋಟಿ ಮೌಲ್ಯದ ಉಲ್ಲಂಘನೆಗಳನ್ನು ಪತ್ತೆ ಮಾಡಲಾಗಿದೆ. ಆ ಅವಧಿಯಲ್ಲಿ ನಡೆದಿರುವ ಎಲ್ಲ ವಹಿವಾಟುಗಳನ್ನು ಸಮಗ್ರ ತನಿಖೆಗೆ ಒಳಪಡಿಸಲು ಎಂ. ಮಹೇಶ್ವರರಾವ್ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಲಾಗಿದೆ. ಕಂಪನಿಯು ವಿವಿಧ ಸರ್ಕಾರಿ ಇಲಾಖೆಗಳು, ಮಂಡಳಿಗಳು ಮತ್ತು ನಿಗಮಗಳಿಗೆ ಒದಗಿಸಿದ ಹೆಚ್ಚಿನ ಸರಕುಗಳು ಮತ್ತು ಸೇವೆಗಳಿಗೆ ಮೂರನೇ ವ್ಯಕ್ತಿಯ ತಪಾಸಣೆಗಳನ್ನು ನಡೆಸದಿರುವುದು, ನಕಲಿ ವ್ಯಕ್ತಿಗಳ ಬಳಕೆ, ಒಪ್ಪಂದದ ಷರತ್ತುಗಳ ಉಲ್ಲಂಘನೆ, ಪಾವತಿ ಅಕ್ರಮಗಳು ಪತ್ತೆಯಾಗಿವೆ. ಕಿಯೊನಿಕ್ಸ್‌ಗೆ ಅನ್ವಯವಾಗುವ ಎಲ್ಲಾ ಕಾನೂನುಗಳು ಮತ್ತು ನಿಯಮಗಳ ಅನುಸರಣೆ ಹಾಗೂ ಹೊಣೆಗಾರಿಕೆಯ ಜವಾಬ್ದಾರಿಯನ್ನು ಎತ್ತಿಹಿಡಿಯುವುದು ಆದ್ಯತೆಯಾಗಿದೆ ಎಂದು ಜಂಟಿ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

ಸರಬರಾಜುದಾರರು ಬಾಕಿ ಹಣಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಅವರು ಮನವಿಗಳನ್ನು ಆದ್ಯತೆಯ ಮೇಲೆ ಮತ್ತು ಲೆಕ್ಕಪರಿಶೋಧನೆಯ ಅವಲೋಕನಗಳ ಆಧಾರದಲ್ಲಿ ಪರಿಶೀಲಿಸಲಾಗುತ್ತಿದೆ. ಹಣಕಾಸು ಇಲಾಖೆಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ವಿವಿಧ ಕ್ರಮಗಳನ್ನು ಪ್ರಾರಂಭಿಸಲಾಗಿದೆ. ತನಿಖೆಗೆ ಒಳಪಡಿಸದೆ ಪಾವತಿ ಮಾಡಬೇಕು ಎನ್ನುವ ಬೇಡಿಕೆಯು ನಿಯಮಬಾಹಿರ. ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

‘ಪ್ರಿಯಾಂಕ್ ಉಡಾಫೆ ಉತ್ತರ’



ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೊನಿಕ್ಸ್) ಬಾಕಿ ಮೊತ್ತ ಪಾವತಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸಾಮಗ್ರಿ ಸರಬರಾಜುದಾರರು ಬರೆದ ಪತ್ರಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಉಡಾಫೆ ಉತ್ತರ ನೀಡಿದ್ದಾರೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿ, ಸಣ್ಣ ಸರಬರಾಜುದಾರರು ತಮ್ಮ ಮನೆಯ ಹೆಣ್ಣುಮಕ್ಕಳ ಒಡವೆಗಳನ್ನು ಒತ್ತೆ ಇಟ್ಟು ಕಾಮಗಾರಿ ಪೂರ್ಣಗೊಳಿಸಿದ್ದಾರೆ. ಮಾಡಿರುವ ಸಾಲ ತೀರಿಸಲಾಗದೆ ಬೀದಿಗೆ ಬಂದಿದ್ದಾರೆ. ಹಿಂದಿನ ಸರ್ಕಾರದ ಮೇಲೆ ಗೂಬೆ ಕೂರಿಸುವ ಬದಲು ಸರ್ಕಾರ ತಕ್ಷಣವೇ ಬಾಕಿ ಹಣ ಬಿಡುಗಡೆ ಮಾಡಬೇಕು. ಯಾರೂ ದಯಾಮರಣಕ್ಕೆ ಅರ್ಜಿ ಹಾಕಬಾರದು. ಬಾಕಿ ಮೊತ್ತ ಪಾವತಿಸುವಂತೆ ಧೈರ್ಯವಾಗಿ ಕೇಳಬೇಕು ಎಂದರು.

‘ತಮ್ಮ ನಡುವಿನ ಗುಂಪುಗಳನ್ನು ತೊರೆದು ಎಲ್ಲ ಸರಬರಾಜುದಾರರು ಒಟ್ಟಾಗಬೇಕು. ಗುಂಪುಗಳಿದ್ದರೆ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತದೆ. ಬಾಕಿ ಮೊತ್ತ ಬಿಡುಗಡೆ ಆಗುವವರೆಗೂ ಒಂದು ವರ್ಷ ಯಾರೂ ಕೆಲಸ ಮಾಡಬಾರದು. ಸರ್ಕಾರ ಬೇಕಿದ್ದರೆ ಅಕ್ಕಪಕ್ಕದ ರಾಜ್ಯದವರ ಬಳಿ ಕೆಲಸ ಮಾಡಿಸಿಕೊಳ್ಳಲಿ. ಯಾರು ಬರುತ್ತಾರೋ ನೋಡೋಣ’ ಎಂದು ಸವಾಲು ಹಾಕಿದರು.

ತಪ್ಪು ಮಾಡಿದವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲಿ. ತಪ್ಪು ಮಾಡದವರಿಗೆ ಶಿಕ್ಷೆ ಏಕೆ? ಜನಪ್ರತಿನಿಧಿಗಳು ಭಾಗಿಯಾಗಿದ್ದರೆ ಅವರ ಮೇಲೂ ಕ್ರಮ ತೆಗೆದುಕೊಳ್ಳಲಿ. ತನಿಖೆ ನಡೆಸಿ ವಾಸ್ತಾವಂಶ ಹೊರಕ್ಕೆ ತರಲು ಎಷ್ಟು ತಿಂಗಳು ಬೇಕು? ‘ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಕಮಿಷನ್ ಪಡೆದಿದ್ದರೆ ದಾಖಲೆ ಕೊಡಿ’ ಎಂದು ಮುಖ್ಯಮಂತ್ರಿ ಹೇಳಿದ್ದರು. ಗುತ್ತಿಗೆದಾರರ ಸಂಘದ ಹಂಗಾಮಿ ಅಧ್ಯಕ್ಷರೇ ಈಗ ಪಟ್ಟಿ ಕೊಟ್ಟಿದ್ದಾರೆ. ಇದಕ್ಕಿಂತ ಸಾಕ್ಷಿ ಬೇಕೇ ಎಂದು ಪ್ರಶ್ನಿಸಿದ್ದಾರೆ.

ವಿಜಯೇಂದ್ರ ಕಟ್ಟಿ ಹಾಕಲು ಶತಯತ್ನ

ಫೆಬ್ರುವರಿಗೆ ರಾಜ್ಯಕ್ಕೂ ಹೊಸ ಅಧ್ಯಕ್ಷ • ಕುಟುಂಬ ರಾಜಕಾರಣ ತಡೆಗೆ ಒತ್ತಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಧಾನಕಾರ್ಯದರ್ಶಿ ಹುದ್ದೆಯಿಂದ ಮುಕ್ತಗೊಳಿಸಿ: ಸುನಿಲ್‌ಕುಮಾರ್ ಪತ್ರ
- ಬೂತ್ ಮತ್ತು ಮಂಡಲಗಳ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಬಹುತೇಕ ಮುಕ್ತಾಯ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಸದ್ಯವೇ ಘೋಷಣೆ ಆಗಲಿದ್ದು, ಇದಕ್ಕಾಗಿ ತೆರೆಮರೆಯಲ್ಲೇ ಕಸರತ್ತು ಆರಂಭವಾಗಿದೆ. ಬಿ.ವೈ.ವಿಜಯೇಂದ್ರ ಅಧ್ಯಕ್ಷರಾಗಿ ಮುಂದುವರಿಯುವುದನ್ನು ತಡೆಯಲು ವಿರೋಧಿ ಬಣ ಟೊಂಕ ಕಟ್ಟಿನಿಂತಿದೆ.

ಫೆಬ್ರುವರಿಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ನಡೆಯಲಿದ್ದು, ಅದಕ್ಕೆ ಮುನ್ನ ರಾಜ್ಯ ಅಧ್ಯಕ್ಷರ ಸ್ಥಾನಕ್ಕೂ ಆಯ್ಕೆ ಆಗಬೇಕು. ಬಿಜೆಪಿಯಲ್ಲಿ ಹೆಸರಿಗೆ ‘ಚುನಾವಣೆ’ ಎಂದು ಕರೆದರೂ ಪಕ್ಷದ ವರಿಷ್ಠರು ಸೂಚಿಸುವ ವ್ಯಕ್ತಿಯನ್ನೇ ಅಧ್ಯಕ್ಷ ಪಟ್ಟಕ್ಕೆ ಕೂರಿಸುವ ಪದ್ಧತಿ ಇದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತ ಕಾರಣ ಹಿಂದಿನ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆ ಬಳಿಕ ಬಿ.ವೈ.ವಿಜಯೇಂದ್ರ ಮತ್ತು ಇತರರನ್ನು ಪದಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಅದು ತಾತ್ಕಾಲಿಕ ವ್ಯವಸ್ಥೆ ಆಗಿತ್ತು. ತಮ್ಮನ್ನು ರಾಜ್ಯ ಪ್ರಧಾನಕಾರ್ಯದರ್ಶಿ ಹುದ್ದೆಯಿಂದ ಮುಕ್ತಗೊಳಿಸಿ ಎಂದು ವಿ. ಸುನಿಲ್‌ಕುಮಾರ್ ವರಿಷ್ಠರಿಗೆ ಈಗಾಗಲೇ ಪತ್ರ ಬರೆದಿದ್ದಾರೆ.

ಇದೀಗ ಹೊಸ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಮೊದಲು ರಾಜ್ಯಗಳಲ್ಲೂ ಹೊಸ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಗಿಸಬೇಕು. ಅಲ್ಲದೇ, ರಾಜ್ಯದಲ್ಲಿ ಈಗಾಗಲೇ ಬೂತ್ ಮತ್ತು ಮಂಡಲಗಳ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಬಹುತೇಕ ಮುಗಿದಿದೆ. ಜಿಲ್ಲಾ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಬೇಕಾಗಿದೆ.


ಹೊಸ ಮುಖಕ್ಕಾಗಿ ಶತಪ್ರಯತ್ನ: ಬಿ.ವೈ.ವಿಜಯೇಂದ್ರ ಮತ್ತೆ ಅಧ್ಯಕ್ಷರಾಗುವುದನ್ನು ತಡೆಯಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಬಣ ಮತ್ತು ಇತರ ಕೆಲವು ನಾಯಕರು ತೆರೆಯ ಮರೆಯಲ್ಲೇ ಪ್ರಬಲ ಪ್ರಯತ್ನ ನಡೆಸಿದ್ದಾರೆ. ಈ ಹಂತದಲ್ಲಿಯೇ ವಿಜಯೇಂದ್ರ ಅವರನ್ನು ತಡೆಯದೇ ಹೋದರೆ 2028ರ ವಿಧಾನಸಭಾ ಚುನಾವಣೆವರೆಗೂ ಅಧ್ಯಕ್ಷರಾಗಿ ಮುಂದುವರಿಯುತ್ತಾರೆ. ಆ ವೇಳೆಗೆ ಅವರು ಪಕ್ಷವನ್ನು ಸಂಪೂರ್ಣ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುತ್ತಾರೆ. ಆಗ ಅವರನ್ನು ಇಳಿಸುವುದು ಕಷ್ಟ ಎಂಬ ಲೆಕ್ಕಾಚಾರ ಈ ನಾಯಕರದು. ಹೀಗಾಗಿ ಹೊಸ ಮುಖ ಬರಲಿ ಎಂದು ಒತ್ತಾಯಿಸುತ್ತಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

‘ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ತಮಗೆ ಬೆಲೆ ಕೊಡಲಿಲ್ಲ’ ಎಂದು ಕೆಲವರು, ‘ವಿಜಯೇಂದ್ರ ಪಕ್ಷದಲ್ಲಿ ತಮಗಿಂತಲೂ ಕಿರಿಯರು ಮತ್ತು ತಳ ಮಟ್ಟದಲ್ಲಿ ಕೆಲಸ ಮಾಡಿದವರಲ್ಲ’ ಎಂದು ಇನ್ನೂ ಕೆಲವರು, ‘ಹೊಂದಾಣಿಕೆ ರಾಜಕೀಯ ಮಾಡುತ್ತಾರೆ’ ಎಂದು ಮತ್ತೆ ಕೆಲವರು ವಿಜಯೇಂದ್ರ ಅವರನ್ನು ಆರಂಭದಿಂದಲೂ ವಿರೋಧಿಸಿಕೊಂಡು ಬಂದಿದ್ದಾರೆ. ಇದಕ್ಕಾಗಿ ಯತ್ನಾಳ ಬಹಿರಂಗವಾಗಿ ಬಂಡಾಯ ಸಾರಿದರೆ, ಇನ್ನು ಕೆಲವರು ಒಳಗಿಂದಲೇ ಯತ್ನಾಳ ಬಣವನ್ನು ಬೆಂಬಲಿಸುತ್ತಿದ್ದಾರೆ. ಇವರಲ್ಲಿ ಹಲವು ನಾಯಕರು ತಮ್ಮ ಮಕ್ಕಳ ರಾಜಕೀಯ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯತ್ನಾಳ ಬಣ ಬಹಿರಂಗವಾಗಿಯೇ ವಿಜಯೇಂದ್ರ ಮತ್ತು ಯಡಿಯೂರಪ್ಪ ಅವರಿಗೆ ಸವಾಲು ಹಾಕಿದೆ. ‘ಕುಟುಂಬ ರಾಜಕಾರಣವನ್ನು ಇಲ್ಲಿಗೆ ನಿಲ್ಲಿಸಬೇಕು. ಇವರು ನಿರಂತರ ಹೊಂದಾಣಿಕೆ ರಾಜಕೀಯ ಮಾಡಿಕೊಂಡು ಬರುತ್ತಿದ್ದಾರೆ ಮತ್ತು ಭ್ರಷ್ಟಾಚಾರ ಮಾಡಿದ್ದಾರೆ’ ಎಂದು ಟೀಕಿಸುತ್ತಿರುವುದೂ ಮಾತ್ರವಲ್ಲೇ, ‘ಇವರ ಹಿಡಿತದಿಂದ ಪಕ್ಷವನ್ನು ಮುಕ್ತಗೊಳಿಸಬೇಕು’ ಎಂದು ಪದೇ ಪದೇ ಆಗ್ರಹಿಸಿದೆ.

ಇದಕ್ಕಾಗಿ ದೆಹಲಿ ಮಟ್ಟದಲ್ಲಿ ಹಲವು ನಾಯಕರ ಮೂಲಕ ವಿಜಯೇಂದ್ರ ಅವರನ್ನು ತಡೆಯುವ ಪ್ರಯತ್ನವನ್ನೂ ಮುಂದುವರಿಸಿದ್ದಾರೆ. ಹಲವು ಬಾರಿ ದೆಹಲಿಗೆ ಪಾದ ಬೆಳೆಸಿ ತಮ್ಮ ಆತಂಕವನ್ನು ತೋಡಿಕೊಂಡು ಬಂದಿದ್ದಾರೆ. ಸಮಾನ ಮನಸ್ಕರ ಸಭೆಗಳನ್ನು ಮಾಡಿ ಒತ್ತಡ ಹೇರಿದ್ದಾರೆ.

ಬಿವೈವಿಗೆ ಮತ್ತೆ ಅಧ್ಯಕ್ಷ ಪಟ್ಟ?



‘ವರಿಷ್ಠರ ಮನಸ್ಸಿನಲ್ಲಿ ಏನಿದೆ ಎಂಬುದು ಯಾರಿಗೂ ಗೊತ್ತಿಲ್ಲ. ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ತಂದು ಕೂರಿಸಿದಾಗಲೂ ಎಲ್ಲರಿಗೂ ಅಚ್ಚರಿ ಆಗಿತ್ತು. ಸ್ವತಃ ವಿಜಯೇಂದ್ರ ಅವರೇ ಅಧ್ಯಕ್ಷ ಹುದ್ದೆ ಒಲಿದು ಬರಬಹುದು ಎಂದು ನಿರೀಕ್ಷಿಸಿರಲಿಲ್ಲ. ಯಾವುದೋ ಲೆಕ್ಕಾಚಾರ ಇಟ್ಟುಕೊಂಡೇ ವರಿಷ್ಠರು ತಂದು ಕೂರಿಸಿದ್ದಾರೆ. ಮತ್ತೆ ಅವರನ್ನೇ ಆಯ್ಕೆ ಮಾಡುವ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಒಂದು ವೇಳೆ ಯಾರದರೂ ವಿರೋಧಿಸಿದರೆ ಅವರನ್ನು ದೆಹಲಿಗೆ ಕರೆಸಿ ಮಾತುಕತೆ ಮಾಡಿ ಒಪ್ಪಿಸಬಹುದು’ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯದಲ್ಲಿ ಹೊಸ ತಲೆಮಾರಿನ ನಾಯಕರನ್ನು ಕಟ್ಟಿ ಬೆಳೆಸಲು ವರಿಷ್ಠರು ಗಮನ ಹರಿಸಿದ್ದಾರೆ. ಮುಂದಿನ 25– 30 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ತಂಡ ಕಟ್ಟಲಿದ್ದಾರೆ. ಅಧಿಕಾರ ಅನುಭವಿಸಿದ ಸಾಕಷ್ಟು ಘಟಾನುಘಟಿ ನಾಯಕರನ್ನು ದೆಹಲಿಯಲ್ಲಿ ಇರಿಸಿಕೊಂಡಿದ್ದಾರೆ. ಇಲ್ಲಿ ಹೊಸ ಪೀಳಿಗೆ ತರಲು ಅವರ ಶಕ್ತಿ ಸಾಮರ್ಥ್ಯ, ಕೌಶಲ್ಯ, ಪಕ್ಷ ಕಟ್ಟುವ ಉತ್ಸಾಹ ಮತ್ತು ಜಾತಿ ಸಮೀಕರಣ ನೋಡಿಕೊಂಡು ಆದ್ಯತೆ ನೀಡಲಿದ್ದಾರೆ ಎಂದೂ ಅವರು ಹೇಳಿದರು.


ಸಿ.ಎಂ.ಗೆ ಒಕ್ಕಲಿಗ, ಲಿಂಗಾಯತರು ಗೌಣ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಗಣತಿ ವರದಿ ಇಟ್ಟುಕೊಂಡು ಒಕ್ಕಲಿಗ, ಲಿಂಗಾಯತರನ್ನು ಗೌಣ ಮಾಡಲು ಹೊರಟಿದ್ದಾರೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಇಷ್ಟು ದಿನ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ಶೋಷಿತ ಸಮುದಾಯಗಳಿಗೆ ಏನು ಮಾಡಿದ್ದಾರೆ? ಯಾವ ಜಾತಿಯಲ್ಲಿ ಎಷ್ಟು ಜನರು ಇದ್ದಾರೆ ಎನುವುದಕ್ಕಿಂತ, ಎಷ್ಟು ಬಡವರು ಇದ್ದಾರೆ ಎಂಬುದನ್ನು ಗಮನಿಸಬೇಕು. ಇಷ್ಟು ದಿನ ಸರ್ಕಾರದ ಸೌಲಭ್ಯಗಳು ಯಾರಿಗೆ ಸಿಕ್ಕಿವೆ? ಯಾರಿಗೆ ಸಿಕ್ಕಿಲ್ಲ ಎನ್ನುವ ಅಂಶಗಳ ಮೇಲೆ ಸರ್ಕಾರ ಬೆಳಕು ಚೆಲ್ಲಬೇಕು. ಸುಮ್ಮನೆ ಸಂಪುಟ ಸಭೆಯಲ್ಲಿ ಚರ್ಚಿಸಿದರೆ ಪ್ರಯೋಜನವಿಲ್ಲ ಎಂದರು.


ಷೇರುಪೇಟೆ ವಹಿವಾಟು ▲224



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,176
ಇಂದಿನ ಅಂತ್ಯ	23,213
▲	37
ದಿನದ ಗರಿಷ್ಠ	23,293

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ




ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹425-657
ದ್ವಿತಳಿ (ಬಿ.ವಿ)	₹411-827

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹188
ಆರ್‌ಎಸ್‌ಎಸ್-5	₹183
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1310 (1315)
ಸೂರ್ಯಕಾಂತಿ (ರಿಫೈನ್ಡ್)	₹1385 (1395)
ಪಾಮೋಲಿನ್	₹1350 (1360)

‘ಕೇರಾ’ ಸುರಕ್ಷಾ ವರದಾನ

ತೆಂಗಿನ ಮರ ಏರುವವರಿಗೆ ₹7 ಲಕ್ಷ ವಿಮಾ ಸೌಲಭ್ಯ

• ಎಂ. ಮಹೇಶ್



ಮೈಸೂರು: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ‘ಕೇರಾ’ ಸುರಕ್ಷಾ ವಿಮಾ ಯೋಜನೆಯು ತೆಂಗಿನ ಮರಗಳನ್ನು ಏರುವ ಕೆಲಸ ನಂಬಿರುವವರಿಗೆ ವರದಾನವಾಗಿದೆ.

ತೆಂಗು ಅಭಿವೃದ್ಧಿ ಮಂಡಳಿ (ಸಿಡಿಬಿ), ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯೊಂದಿಗೆ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಮೂಲಕ ಈ ವಿಮಾ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಆದರೆ, ಪ್ರಚಾರದ ಕೊರತೆಯಿಂದ ಬಹಳಷ್ಟು ಮಂದಿಗೆ ಇದರ ಬಗ್ಗೆ ಮಾಹಿತಿ ತಿಳಿದಿಲ್ಲ.

ತೆಂಗಿನ ಮರವನ್ನೇರಿ ಎಳನೀರು, ಕಾಯಿ ಕೀಳುವವರಿಗೆ, ನೀರಾ ತಂತ್ರಜ್ಞರಿಗೆ, ತೆಂಗಿನಕಾಯಿ ಕೊಯ್ಲು ಮಾಡುವವರಿಗೆ, ಹೈಬ್ರಿಡೈಜೇಷನ್ (ಸಂಕರೀಕರಣ) ಕೆಲಸಗಾರರಿಗೆ, ಡಿಎಸ್‌ಪಿ (ಪ್ರಾತ್ಯಕ್ಷಿಕೆ ಹಾಗೂ ಬೀಜ ಉತ್ಪಾದನೆ) ಫಾರ್ಮ್‌ಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಹಾಗೂ ಎಫ್‌ಒಸಿಟಿ (ಫ್ರೆಂಡ್ಸ್ ಆಫ್ ಕೋಕೊನಟ್ ಟ್ರೀ) ಕೌಶಲ–ತರಬೇತಿ ಕಾರ್ಯಕ್ರಮದಲ್ಲಿ ತೊಡಗಿರುವ ಕಾರ್ಮಿಕರಿಗೆ ಸಮಗ್ರ ವಿಮಾ ರಕ್ಷಣೆ ದೊರೆಯಲಿದೆ.

ವಿಮೆಯಡಿ ಪರಿಹಾರ ಎಷ್ಟು?

- ₹7 ಲಕ್ಷ — ಸಾವು/ಶಾಶ್ವತ ಅಂಗವೈಕಲ್ಯ
- ₹3.50 ಲಕ್ಷ — ಭಾಗಶಃ ಅಂಗವೈಕಲ್ಯ
- ₹5,500 — ಅಂತ್ಯಕ್ರಿಯೆಗೆ ನೀಡುವ ವೆಚ್ಚ
- ₹2 ಲಕ್ಷ — ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 230ಗಳವರೆಗಿನ ಜಿಲ್ಲಾ ಒಳಗೊಂಡಂತೆ ಆಸ್ಪತ್ರೆ ವೆಚ್ಚದ ಮರುಪಾವತಿ
- ₹3,000 — ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದು ನೋಂದಣಿಯಾದವರಿಗೆ ದೈನಂದಿನ ಆಧಾರದ ಮೇಲಿನ ವೆಚ್ಚ
- ₹3,500 — ಅಪಘಾತ ನಡೆದ ಸಂದರ್ಭದಲ್ಲಿ ಆಂಬುಲೆನ್ಸ್ ಶುಲ್ಕ
- ₹21,000 — ತಾತ್ಕಾಲಿಕ ಅಂಗವೈಕಲ್ಯದ ಸಂದರ್ಭದಲ್ಲಿ ಗರಿಷ್ಠ ಆರು ವಾರದವರೆಗೆ ಪರಿಹಾರ

ವೈಯಕ್ತಿಕ ಅಪಘಾತ ವಿಮೆ: ವಿಮೆಯ ವಾರ್ಷಿಕ ಕಂತು (ಜಿಎಸ್‌ಟಿ ಸೇರಿ) ₹956 ಆಗಿದೆ. ಇದರಲ್ಲಿ ತೆಂಗು ಅಭಿವೃದ್ಧಿ ಮಂಡಳಿಯ ಕಂತಿನ ಪಾಲು ₹717 ಆಗಿದ್ದು, ಉಳಿದ ₹239 ಕಂತಿನ ಮೊತ್ತವನ್ನು ಫಲಾನುಭವಿಗಳು ಪಾವತಿಸಬೇಕಿದೆ.

‘ಇದು ವೈಯಕ್ತಿಕ ಅಪಘಾತ ವಿಮಾ ಯೋಜನೆಯಾಗಿದೆ. ಮರದಿಂದ ಕಾಯಿ ಕೀಳುವಾಗ ಬಿದ್ದು ಮೃತಪಟ್ಟರೆ ಅಥವಾ ಅಂಗವೈಕಲ್ಯಕ್ಕೆ ತುತ್ತಾದರೆ ಕೇರಾ ವಿಮೆ ನೆರವಾಗಲಿದೆ. ಗರಿಷ್ಠ ₹7 ಲಕ್ಷದವರೆಗೆ ಪರಿಹಾರ ಸಿಗಲಿದೆ.

‘ಈ ಯೋಜನೆಯು ತೆಂಗಿನಕಾಯಿ ಕೊಯ್ಲು ಮಾಡುವವರಿಗೆ ಅನುಕೂಲವಾಗಿದ್ದು, ಪ್ರಯೋಜನ ಪಡೆದುಕೊಳ್ಳುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಕಂತಿನ ಮೊತ್ತ ಕಡಿಮೆ ಪ್ರಮಾಣದಲ್ಲಿದ್ದು, ಕಟ್ಟುವವರು ಸಮಗ್ರ ವಿಮಾ ರಕ್ಷಣೆಯ ಸೌಲಭ್ಯ ಪಡೆಯಬಹುದು’ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಮಂಜುನಾಥ ಅಂಗಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ತೋಟಗಾರಿಕೆ ಇಲಾಖೆ ಮೂಲಕ ಮಾರ್ಚ್ ಅಂತ್ಯದವರೆಗೂ ಅರ್ಜಿ ಸಲ್ಲಿಸಬಹುದಾಗಿದೆ. ಇಲಾಖೆಯ ಕಚೇರಿಗಳಲ್ಲಿ ಹೆಚ್ಚಿನ ವಿವರ ಪಡೆದು-ಕೊಳ್ಳಬಹುದು’ ಎನ್ನುತ್ತಾರೆ ಅವರು.

ಸತತ ಎರಡನೇ ದಿನ 13 ಪೈಸೆ ಹೆಚ್ಚಳ

ರೂಪಾಯಿ ಚೇತರಿಕೆ



ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಬುಧವಾರ ಕೂಡ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಚೇತರಿಕೆ ಕಂಡಿದೆ.

ರೂಪಾಯಿ ಮೌಲ್ಯ 13 ಪೈಸೆ ಏರಿಕೆಯಾಗಿದೆ. ಕಳೆದ 7 ತಿಂಗಳಲ್ಲಿ ರೂಪಾಯಿ ಮೌಲ್ಯವು ಏರಿಕೆ ಕಂಡ ಉತ್ತಮ ದಿನ ಇದಾಗಿದೆ. ಪ್ರತಿ ಡಾಲರ್ ಮೌಲ್ಯ ₹86.40 ಆಗಿದೆ.

ದೇಶೀಯ ಷೇರುಪೇಟೆಯು ಏರಿಕೆ ದಾಖಲಿಸಿದೆ. ಅಲ್ಲದೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ಇಳಿಕೆಯಾಗುತ್ತಿದೆ. ‘ಇದು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದ್ದ ರೂಪಾಯಿ ಮೌಲ್ಯವು ಚೇತರಿಸಿಕೊಳ್ಳಲು ನೆರವಾಗಿದೆ’ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದ ಡಾಲರ್ ಸೂಚ್ಯಂಕ ಕೂಡ ಇಳಿದಿದೆ. ಇದು ಕೂಡ ರೂಪಾಯಿ ಮೌಲ್ಯ ಹೆಚ್ಚಳಕ್ಕೆ ಕಾರಣವಾಗಿದೆ. ಆದರೆ, ದೇಶೀಯ ಷೇರುಪೇಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಹಿಂತೆಗೆಯುವುದು ಮುಂದುವರಿದಿದೆ ಎಂದು ಹೇಳಿದ್ದಾರೆ.

ಆರಂಭಿಕ ವಹಿವಾಟಿನಲ್ಲಿ ₹86.50 ಇದ್ದ ರೂಪಾಯಿ ಮೌಲ್ಯವು, ಇಂಟ್ರಾಡೇನಲ್ಲಿ ₹86.55ಕ್ಕೆ ತಲುಪಿತ್ತು. ವಹಿವಾಟಿನ ಒಂದು ಸಂದರ್ಭದಲ್ಲಿ ₹86.28ಕ್ಕೆ ಮುಟ್ಟಿತ್ತು.

ಮಂಗಳವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 17 ಪೈಸೆ ಹೆಚ್ಚಳವಾಗಿತ್ತು.

‘ಸದ್ಯ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿಕೆ ಕಂಡಿದ್ದರಿಂದ ರೂಪಾಯಿ ಮೌಲ್ಯವು ಚೇತರಿಸಿಕೊಂಡಿದೆ. ಅಮೆರಿಕದಲ್ಲಿ ಜನವರಿ ತಿಂಗಳಿನಲ್ಲಿ ಹಣದುಬ್ಬರ ಏರಿಕೆಯಾಗುವ ನಿರೀಕ್ಷೆಯಿದೆ. ಇದು ಡಾಲರ್ ಬಲಗೊಳ್ಳಲು ಸಹಕಾರಿಯಾಗಲಿದೆ. ಆಗ ಮತ್ತೆ ರೂಪಾಯಿಯು ಒತ್ತಡಕ್ಕೆ ಸಿಲುಕುವ ಸಾಧ್ಯತೆಯಿದೆ’ ಎಂದು ಮಿರೇ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಏರಿಕೆ ಕಂಡಿವೆ. ರಿಲಯನ್ಸ್ ಇಂಡಸ್ಟ್ರೀಸ್, ಜೊಮಾಟೊ ಮತ್ತು ಕೋಟಕ್ ಬ್ಯಾಂಕ್‌ನ ಷೇರುಗಳ ಖರೀದಿ ಹೆಚ್ಚಳವು ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 224 ಅಂಶ ಏರಿಕೆ ಕಂಡು 76,724 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 37 ಅಂಶ ಏರಿಕೆ ಕಂಡು 23,213 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಳಿಸಿತು. ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹8,132 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಪೆಟ್ರೋಲ್ ಜತೆ ಶೇ 20ರಷ್ಟು ಎಥೆನಾಲ್ ಮಿಶ್ರಣ: ಶೀಘ್ರ ಗುರಿ ಸಾಧನೆ– ಗಡ್ಕರಿ

ನವದೆಹಲಿ (ಪಿಟಿಐ): ‘ಇನ್ನೆರಡು ತಿಂಗಳೊಳಗೆ ಪೆಟ್ರೋಲ್‌ನೊಂದಿಗೆ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡುವ ಗುರಿ ಸಾಧಿಸಲಾಗುವುದು’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್‌ನೊಂದಿಗೆ ಶೇ 20ರಷ್ಟು ಎಥೆನಾಲ್ ಮಿಶ್ರಣ ಯೋಜನೆಗೆ ಚಾಲನೆ ನೀಡಿದ್ದರು. ಮೊದಲ ಹಂತದಲ್ಲಿ ದೇಶದ 15 ನಗರಗಳಲ್ಲಿ ಈ ಯೋಜನೆ ಅನುಷ್ಠಾನಗೊಂಡಿದೆ.

ಕಾರ್ಯಕ್ರಮವೊಂದರಲ್ಲಿ ಬುಧವಾರ ಮಾತನಾಡಿದ ಗಡ್ಕರಿ, ‘ಪೆಟ್ರೋಲ್‌ನೊಂದಿಗೆ ಎಥೆನಾಲ್ ಮಿಶ್ರಣವು ವಾಯುಮಾಲಿನ್ಯ ತಡೆಗಟ್ಟಲು ನೆರವಾಗಲಿದೆ’ ಎಂದರು. ಟಾಟಾ ಮೋಟರ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ ಸುಜುಕಿ, ಹುಂಡೈ ಮೋಟರ್ಸ್ ಈಗಾಗಲೇ ಶೇ 100ರಷ್ಟು ಜೈವಿಕ ಎಥೆನಾಲ್ ಬಳಸಿ ಸಂಚರಿಸುವ ವಾಹನಗಳ ತಯಾರಿಕೆಯಲ್ಲಿ ತೊಡಗಿವೆ ಎಂದು ತಿಳಿಸಿದರು.

ದೇಶದಲ್ಲಿ ವಾಯುಮಾಲಿನ್ಯವು ಅತಿದೊಡ್ಡ ಸಮಸ್ಯೆಯಾಗಿದೆ. ವಿಶ್ವದಲ್ಲಿ ಅತಿಹೆಚ್ಚು ಮಾಲಿನ್ಯ ಹೊಂದಿರುವ 50 ನಗರಗಳ ಪಟ್ಟಿಯಲ್ಲಿ ಭಾರತದ 42 ನಗರಗಳಿವೆ ಎಂದರು.

ಮುಂಬೈ ಧಾರಣೆ

ಶೇಂಗಾ

15-01-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ(ಹೊಸ)	8700-8800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1350 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1290 (1295)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹**78,200** (77,800)
ಬೆಳ್ಳಿ ಕೆ.ಜಿ ₹**89,650** (88,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

ಟೋಲ್ ಸಂಗ್ರಹ: ಖಾಸಗಿ ವಾಹನಗಳಿಗೆ 3ಂಗಳ ಪಾಸ್ ವಿತರಿಸಲು ಕೇಂದ್ರ ಚಿಂತನೆ


ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿ-ಗಳಲ್ಲಿ ಸಂಚರಿಸುವ ಖಾಸಗಿ ಪ್ರಯಾಣಿಕ ವಾಹನಗಳಿಗೆ ಮಾಸಿಕ ಹಾಗೂ ವಾರ್ಷಿಕ ಟೋಲ್ ಪಾಸ್‌ಗಳನ್ನು ವಿತರಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಬುಧವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಶೇ 74ರಷ್ಟು ಟೋಲ್ ಸಂಗ್ರಹದ ಆದಾಯವು ವಾಣಿಜ್ಯ ವಾಹನಗಳಿಂದ ಬರುತ್ತಿದೆ. ಉಳಿದ ಶೇ 26ರಷ್ಟು ಆದಾಯವು ಖಾಸಗಿ ವಾಹನಗಳಿಂದ ಬರುತ್ತಿದೆ. ಹಾಗಾಗಿ, ಈ ವಾಹನಗಳಿಗಷ್ಟೇ ಪಾಸ್ ವಿತರಣಾ ವ್ಯವಸ್ಥೆ ಜಾರಿ ಬಗ್ಗೆ ಚರ್ಚಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಟೋಲ್ ಸಂಗ್ರಹ ಕೇಂದ್ರಗಳನ್ನು ಗ್ರಾಮಗಳ ಹತ್ತಿರದಲ್ಲಿ ನಿರ್ಮಿಸುವುದಿಲ್ಲ. ಹಳ್ಳಿಗಳ ಹೊರ ಭಾಗದಲ್ಲಿ ನಿರ್ಮಿಸುವುದರಿಂದ ಗ್ರಾಮೀಣರ ಸಂಚಾರಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಹೇಳಿದ್ದಾರೆ.

ದಟ್ಟ ಮಂಜು: 300 ವಿಮಾನ ಸಂಚಾರ ವ್ಯತ್ಯಯ

ನವದೆಹಲಿ (ಪಿಟಿಐ): ದಟ್ಟ ಮಂಜು ಹಾಗೂ ಕಡಿಮೆ ಗೋಚರತೆಯಿಂದಾಗಿ ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ 300ಕ್ಕೂ ಹೆಚ್ಚು ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಿದೆ. 6 ವಿಮಾನಗಳ ಮಾರ್ಗವನ್ನು ಬದಲಾಯಿಸಲಾಗಿದೆ.

ಬೆಳಿಗ್ಗೆ 8ರಿಂದ 10.30ಗಂಟೆವರೆಗೆ ಪ್ರತಿಕೂಲ ಹವಾಮಾನದಿಂದಾಗಿ ರನ್‌ವೇನಲ್ಲಿ ವಿಮಾನಗಳ ಸಂಚಾರಕ್ಕೆ ಅಡ್ಡಿಯಾಯಿತು. ಬಳಿಕ ವಾತಾವರಣ ಸಹಜ ಸ್ಥಿತಿಗೆ ಮರಳಿದ ಬಳಿಕ ವಿಮಾನಗಳ ಕಾರ್ಯಾಚರಣೆ ಪುನರಾರಂಭಗೊಂಡಿತು ಎಂದು ದೆಹಲಿ ವಿಮಾನ ನಿಲ್ದಾಣ ಲಿಮಿಟೆಡ್ ತಿಳಿಸಿದೆ. ಪ್ರತಿದಿನ ಈ ನಿಲ್ದಾಣದಲ್ಲಿ 1,300ಕ್ಕೂ ಹೆಚ್ಚು ವಿಮಾನಗಳು ವಿದೇಶ ಹಾಗೂ ದೇಶೀಯ ಮಾರ್ಗದಲ್ಲಿ ಕಾರ್ಯಾಚರಣೆ ನಡೆಸುತ್ತವೆ.

ಸುದ್ದಿ 2 ನಿಮಿಷ

ಜುಕರ್‌ಬರ್ಗ್ ವಿವಾದಿತ ಹೇಳಿಕೆ: ಕ್ಷಮೆ ಕೋರಿದ ಮೆಟಾ

ನವದೆಹಲಿ (ಪಿಟಿಐ): ಭಾರತದ ಚುನಾವಣೆ ಕುರಿತು ತಪ್ಪು ಹೇಳಿಕೆ ನೀಡಿದ್ದ ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್ ಬುಧವಾರ ಕ್ಷಮೆ ಕೋರಿದ್ದಾರೆ.

‘ಕೋವಿಡ್ ಸಾಂಕ್ರಾಮಿಕವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ವಿಫಲವಾಗಿರುವ ಸರ್ಕಾರಗಳು ಚುನಾವಣೆಯಲ್ಲಿ ಸೋಲು ಅನುಭವಿಸಿವೆ. 2024ರ ಲೋಕಸಭಾ ಚುನಾವಣೆಯಲ್ಲಿ ಕೇಂದ್ರ ಸರ್ಕಾರದ ಸೋಲಿಗೆ ಇದೇ ಕಾರಣ’ ಎಂದು ಜುಕರ್‌ಬರ್ಗ್ ಅವರು, ಅಮೆರಿಕದ ಕಾಮಿಡಿಯನ್ ಜೋ ರೋಗನ್ ನಡೆಸಿಕೊಡುವ ಪಾಡ್‌ಕಾಸ್ಟ್‌ನಲ್ಲಿ ನೀಡಿದ್ದ ಈ ಹೇಳಿಕೆಯು ವಿವಾದ ಸೃಷ್ಟಿಸಿತ್ತು.



ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅಧ್ಯಕ್ಷತೆಯಲ್ಲಿ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಸಂಬಂಧ ರಚಿಸಿರುವ ಸಂಸದೀಯ ಸಮಿತಿಯು ಜುಕರ್‌ಬರ್ಗ್ ಕ್ಷಮೆ ಕೋರಬೇಕು. ಇಲ್ಲವಾದರೆ ಸಮನ್ಸ್ ಜಾರಿಗೊಳಿಸುವುದಾಗಿ ಎಚ್ಚರಿಕೆ ನೀಡಿತ್ತು.

ಜುಕರ್‌ಬರ್ಗ್ ಕ್ಷಮೆ ಕೋರಿರುವುದರಿಂದ ಪ್ರಕರಣ ಅಂತ್ಯಗೊಂಡಿದೆ ದುಬೆ ಹೇಳಿದ್ದಾರೆ.

‘2024ರಲ್ಲಿ ವಿಶ್ವದ ವಿವಿಧ ದೇಶಗಳಲ್ಲಿ ನಡೆದ ಚುನಾವಣೆಗಳಲ್ಲಿ ಅಧಿಕಾರದಲ್ಲಿದ್ದ ಹಲವು ಸರ್ಕಾರಗಳು ಮತ್ತೆ ಅಧಿಕಾರಕ್ಕೆ ಬಂದಿಲ್ಲ. ಇದಕ್ಕೆ ಭಾರತ ಹೊರತಾಗಿದೆ. ಮೆಟಾ ಪಾಲಿಗೆ ಭಾರತವು ಪ್ರಮುಖ ವಿಶ್ವಾಸಾರ್ಹ ರಾಷ್ಟ್ರವಾಗಿದೆ’ ಎಂದು ಮೆಟಾ ಇಂಡಿಯಾ ಉಪಾಧ್ಯಕ್ಷ ಶಿವನಾಥ ತುಕ್ರಾಲ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ವ್ಯಾಪಾರ ಕೊರತೆ ಹೆಚ್ಚಳ

ನವದೆಹಲಿ (ಪಿಟಿಐ): ಡಿಸೆಂಬರ್‌ನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಿದ್ದು, ವಿದೇಶಿ ವ್ಯಾಪಾರದ ಕೊರತೆಯು ₹1.89 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬುಧವಾರ ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಈ ಅಂತರವನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ಡಿಸೆಂಬರ್‌ನಲ್ಲಿ ₹3.28 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 1ರಷ್ಟು ಇಳಿಕೆಯಾಗಿದೆ. ₹5.17 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಒಟ್ಟಾರೆ ಆಮದು ಪ್ರಮಾಣದಲ್ಲಿ ಶೇ 4.8ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ. ಪೆಟ್ರೋಲಿಯಂ, ಹರಳು ಮತ್ತು ಚಿನ್ನಾಭರಣ, ರಾಸಾಯನಿಕ ವಲಯದ ರಫ್ತಿನಲ್ಲಿ ಇಳಿಕೆಯಾಗಿದೆ. ಜವಳಿ, ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್, ಅಕ್ಕಿ ಮತ್ತು ಸಮುದ್ರ ಉತ್ಪನ್ನಗಳ ರಫ್ತಿಯಲ್ಲಿ ಹೆಚ್ಚಳವಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		**ಶಿವಮೊಗ್ಗ**		ಕೆಂಪುಗೋಟು	21709-26709
ಕೋಕ	20000-27500	ಬೆಟ್ಟೆ	43400-56009	ರಾಶಿ	42099-48869
ಹೊಸತು	30000-35000	ಗೊರಬಲು	17000-33069	ತಟ್ಟಿಬೆಟ್ಟೆ	26909-30299
ಹಳತು	45000-49000	ರಾಶಿ	29500-51299	**ಶಿರಸಿ**	
ಕುಮಟ		ಸರಕು	46366-87810	ಬೆಟ್ಟೆ	27599-41909
ಚಾಲಿ	33569-37699	**ಸಿದ್ದಾಪುರ**		ಬಿಳಿಗೋಟು	22001-29799
ಚಿಪ್ಪು	15699-26599	ಬಿಳಿಗೋಟು	24379-27899	ಚಾಲಿ	35400-39408
ಕೋಕ	6699-22099	ಚಾಲಿ	32359-38269	ಕೆಂಪುಗೋಟು	13699-25618
ಫ್ಯಾಕ್ಟರಿ	6509-22600	ಕೋಕ	12119-15689	ರಾಶಿ	42009-46618
ಹಳೆಚಾಲಿ	36509-38799	ಹೊಸಚಾಲಿ	22309-34519		
ಹೊಸಚಾಲಿ	26019-30499				


ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಪ್ರದರ್ಶನದಲ್ಲಿ ಇರಿಸಲಾಗಿದ್ದ ಬ್ಯಾಟರಿ ಪ್ಯಾಕ್ ಅನ್ನು ಎತ್ತಿ ನೋಡಿ ಪರಿಶೀಲಿಸಿದರು

ಐಬಿಸಿ ಗಿಗಾ ಫ್ಯಾಕ್ಟರಿಗೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿಯ ಕೆಐಎಡಿಬಿ ಐಟಿಐಆರ್ ಕೈಗಾರಿಕಾ ಪ್ರದೇಶದಲ್ಲಿ ₹390 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿರುವ ಇಂಟರ್ ನ್ಯಾಷನಲ್ ಬ್ಯಾಟರಿ ಕಂಪನಿಯ (ಐಬಿಸಿ) ಗಿಗಾ ಫ್ಯಾಕ್ಟರಿ ಘಟಕಕ್ಕೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಬುಧವಾರ ಶಂಕುಸ್ಥಾಪನೆ ನೆರವೇರಿಸಿದರು.

‘ದಕ್ಷಿಣ ಕೊರಿಯಾದ ಐಬಿಸಿ ಕಂಪನಿಯು ಅಲ್ಲಿನ ಗಿಗಾ ಫ್ಯಾಕ್ಟರಿಯನ್ನು ಹೊಂದಿದ್ದು, ಬೆಂಗಳೂರು ಸಮೀಪ ಸಣ್ಣ ತಯಾರಿಕಾ ಘಟಕ ಆರಂಭಿಸಲು ಆಸಕ್ತಿ ತೋರಿತ್ತು. ಕಂಪನಿಗೆ 10 ಎಕರೆ ಕೈಗಾರಿಕಾ ನಿವೇಶನವನ್ನು ಒದಗಿಸಲಾಗಿದೆ. ಮುಂದಿನ ಒಂಬತ್ತು ತಿಂಗಳಲ್ಲಿ ಘಟಕ ಕಾರ್ಯಾರಂಭ ಮಾಡಲಿದೆ’ ಎಂದು ಸಚಿವ ಪಾಟೀಲ ಹೇಳಿದರು.

‘ವಿದ್ಯುತ್ ಚಾಲಿತ ವಾಹನಗಳಲ್ಲಿ ಬಳಸಲಾಗುವ ಲಿಥಿಯಂ–ಅಯಾನ್ ಸೆಲ್‌ಗಳನ್ನು, ಕಂಪನಿಯು ದಕ್ಷಿಣ ಕೊರಿಯಾದ ಗಿಗಾ ಫ್ಯಾಕ್ಟರಿಯಲ್ಲಿ ತಯಾರಿಸುತ್ತದೆ. ಅವುಗಳನ್ನು ಜೋಡಿಸಿ, ಬ್ಯಾಟರಿ ಪ್ಯಾಕ್ ತಯಾರಿಸುವ ಕೆಲಸ ಈ ಘಟಕದಲ್ಲಿ ನಡೆಯಲಿದೆ. ಆರಂಭದಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಬ್ಯಾಟರಿ ಪ್ಯಾಕ್‌ಗಳನ್ನು ತಯಾರಿಸಲಾಗುತ್ತದೆ’ ಎಂದರು.

‘ಈಗ ಈ ಘಟಕದಲ್ಲಿ ಬ್ಯಾಟರಿ ಪ್ಯಾಕ್ ತಯಾರಿಕೆಯಷ್ಟೇ ನಡೆಯಲಿದೆ. ಇಲ್ಲಿ ತಯಾರಾದ ಪ್ಯಾಕ್‌ಗಳಲ್ಲಿ ಕೆಲ ಪ್ರಮಾಣವು ಅಮೆರಿಕ ಮತ್ತು ಐರೋಪ್ಯ ದೇಶಗಳಿಗೆ ರಫ್ತಾಗಲಿವೆ. ಮುಂದಿನ ದಿನಗಳಲ್ಲಿ ಲಿಥಿಯಂ–ಅಯಾನ್ ಸೆಲ್‌ಗಳನ್ನೂ ಇಲ್ಲಿ ತಯಾರಿಸುವ ಯೋಜನೆಯನ್ನು ಕಂಪನಿ ಹೊಂದಿದೆ. ಆಗ ಅದು ದೇಶದ ಮೊದಲ ಸೆಲ್ ತಯಾರಿಕ ಘಟಕ ಎನಿಸಲಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

- ₹**390** ಕೋಟಿ ಹೂಡಿಕೆ
- **300** ಘಟಕದಿಂದ ಸೃಷ್ಟಿಯಾಗಲಿರುವ ನೇರ ಉದ್ಯೋಗಗಳು
- **20%** ಘಟಕದಲ್ಲಿ ತಯಾರಾಗುವ ಬ್ಯಾಟರಿ ಪ್ಯಾಕ್‌ಗಳಲ್ಲಿ ರಫ್ತಾಗುವ ಪ್ರಮಾಣ

ಮಹಾಕುಂಭ: 10 ದೇಶದ ಪ್ರತಿನಿಧಿಗಳ ಭೇಟಿ–ವಿಮಾನ ದರ ಹೆಚ್ಚಳ

ಕೊರೆಯುವ ಚಳಿಯಲ್ಲೂ ಪವಿತ್ರ ಸ್ನಾನ

ಮಹಾಕುಂಭ ನಗರ (ಉತ್ತರ ಪ್ರದೇಶ, ಪಿಟಿಐ): ಮೈ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಲಕ್ಷಾಂತರ ಸಂಖ್ಯೆಯ ಜನರು ಬುಧವಾರವೂ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು.

ಈ ವೇಳೆ ಭಕ್ತರಿಂದ ‘ಹರಹರ ಮಹಾದೇವ್’, ‘ಜೈ ಶ್ರೀರಾಮ್’, ‘ಜೈ ಗಂಗಾ ಮಯ್ಯ’ ಘೋಷಣೆ ಮೊಳಗಿದವು.

ಮಕರ ಸಂಕ್ರಾಂತಿಯ ದಿನವಾದ ಮಂಗಳವಾರ ಮಹಾಕುಂಭದಲ್ಲಿ ಭಾಗಿ ಯಾಗಿದ್ದ 3.5 ಕೋಟಿಗೂ ಹೆಚ್ಚು ಜನರು ಗಂಗಾ, ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿಗಳ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದ್ದರು.

ದೇಶದ ವಿವಿಧ ರಾಜ್ಯಗಳು ಮತ್ತು ವಿದೇಶಗಳಿಂದ ಬಂದಿದ್ದ ಹೆಚ್ಚಿನ ಸಂಖ್ಯೆಯ ಭಕ್ತರು ಬುಧವಾರ ತೀವ್ರ ಚಳಿಯಲ್ಲೂ ಸಂಗಮದಲ್ಲಿ ಮಿಂದೆದ್ದರು.

10 ದೇಶಗಳ 21 ಜನರಿಂದ ಗುರುವಾರ ಪವಿತ್ರ ಸ್ನಾನ: ಫಿಜಿ, ಫಿನ್ಲೆಂಡ್, ಗಯಾನಾ, ಮಲೇಷ್ಯಾ, ಮಾರಿಷಸ್, ಸಿಂಗಪುರ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಟ್ರಿನಿಡಾಡ್, ಟೊಬಾಗೊ ಮತ್ತು ಯುಎಇ ದೇಶಗಳ 21 ಪ್ರತಿನಿಧಿಗಳು ಬುಧವಾರ ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದ್ದಾರೆ. ಅವರೆಲ್ಲ ಗುರುವಾರ ಬೆಳಿಗ್ಗೆ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ನಿಯೋಗಕ್ಕೆ ಆಹ್ವಾನ ನೀಡಿದೆ.

ವಿಮಾನ ಟಿಕೆಟ್ ದರ ಶೇ 89ರಷ್ಟು ಏರಿಕೆ: ಮಹಾಕುಂಭ ಮೇಳ ನಡೆಯುತ್ತಿರುವ ಪ್ರಯುಕ್ತ ದೇಶದ ಪ್ರಮುಖ ನಗರಗಳಿಂದ ಪ್ರಯಾಗ್‌ರಾಜ್‌ಗೆ ವಿಮಾನ ಟಿಕೆಟ್ ದರದಲ್ಲಿ ಭಾರಿ ಏರಿಕೆಯಾಗಿದೆ. ಬೆಂಗಳೂರಿನಿಂದ ಪ್ರಯಾಗ್‌ರಾಜ್ ನಡುವಿನ ಏಕಮುಖ ಸಂಚಾರ ದರದಲ್ಲಿ ಶೇ 89ರಷ್ಟು ಏರಿಕೆಯಾಗಿದ್ದು, ಟಿಕೆಟ್ ಬೆಲೆ ₹11,158 ಆಗಿದೆ ಎಂದು ಟ್ರಾವೆಲ್ ಪೋರ್ಟಲ್ ಇಕ್ಸಿಗೊ ತಿಳಿಸಿದೆ.


ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಬುಧವಾರ ಸಾಗಿದ ಶೋಭಾಯಾತ್ರೆಯಲ್ಲಿ ಇಸ್ಕಾನ್ ಭಕ್ತರು ಸಂಭ್ರಮದಿಂದ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

‘ಬ್ಯೂಟಿಫುಲ್ ಸಾಧ್ವಿ’ ವಿವಾದ

ಲಖನೌ: ಪ್ರಯಾಗ್‌ರಾಜ್‌ನ ಮಹಾಕುಂಭ ಮೇಳದಲ್ಲಿ ರಥಗಳೊಂದಿಗೆ ಸಂತರು, ನಾಗಾ ಸಾಧುಗಳ ಮೆರವಣಿಗೆ ವೇಳೆ ರಥದ ಮೇಲೆ 30 ವರ್ಷದ ಯುವತಿಯೊಬ್ಬರು ಕಾಣಿಸಿಕೊಂಡಿದ್ದರು. ಅದು ವಿವಾದವಾಗಿ, ‘ಬ್ಯೂಟಿಫುಲ್ ಸಾಧ್ವಿ’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಆಕೆಯ ಫೋಟೊ ಹರಿದಾಡುತ್ತಿದೆ.

ಇನ್‌ಸ್ಟಾಗ್ರಾಂನಲ್ಲಿ ಲಕ್ಷಾಂತರ ಅನುಯಾಯಿಗಳನ್ನು ಹೊಂದಿರುವ ಉತ್ತರಾಖಂಡ ಮೂಲದ ನಿರೂಪಕಿ, ಸಾಮಾಜಿಕ ಕಾರ್ಯಕರ್ತೆ ಹರ್ಷ ರಿಚಾರಿಯಾ ಅವರು ಸಾಧುಗಳ ಜತೆ ಕಾಣಿಸಿಕೊಂಡಿದ್ದರು.

ಹಳದಿ ಉಡುಗೆ ಮತ್ತು ರುದ್ರಾಕ್ಷಿ ಜಪಮಾಲೆ ಧರಿಸಿದ್ದ ರಿಚಾರಿಯಾ ಅವರು ಆರಂಭದಲ್ಲಿ ಯುವ ಸಾಧ್ವಿಯಾಗಿ ಗಮನ ಸೆಳೆದಿದ್ದರು. ಅವರ ಚಿತ್ರಗಳು, ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದ್ದು , ‘ಬ್ಯೂಟಿಫುಲ್ ಸಾಧ್ವಿ’ ಎಂದೇ ಉಲ್ಲೇಖಿಸಲಾಗಿದೆ.

‘ಮಹಾಕುಂಭವು ಧರ್ಮದ ಪ್ರದರ್ಶನವಲ್ಲ. ಸಮಾಜಕ್ಕೆ ತಪ್ಪು ಸಂದೇಶ ರವಾನಿಸುವಂತಹ ಈ ರೀತಿಯ ಪ್ರದರ್ಶನಗಳನ್ನು ಸಂತರು ತಪ್ಪಿಸಬೇಕು’ ಎಂದು ಶಾಂಭವಿ ಪೀಠಾಧೀಶ್ವರ ಸ್ವಾಮಿ ಆನಂದ ಸ್ವರೂಪ್ ಮಹಾರಾಜ್ ಬುಧವಾರ ಹೇಳಿದ್ದಾರೆ.

ಈ ಸಂಬಂಧ ಪ್ರತಿಕ್ರಿಯಿಸಿರುವ ರಿಚಾರಿಯಾ, ‘ನಾನು ಸಾಧ್ವಿ ಅಲ್ಲ, ಹಾಗೆಂದು ಎಲ್ಲೂ ಹೇಳಿಕೊಂಡೂ ಇಲ್ಲ. ಮಂತ್ರ ದೀಕ್ಷೆಯನ್ನು ಮಾತ್ರ ತೆಗೆದುಕೊಂಡಿದ್ದೇನೆ’ ಎಂದು ಸ್ಪಷ್ಟಪಡಿಸಿದ್ದಾರೆ.

ವಾರಕ್ಕೆ 90 ಗಂಟೆ ಕೆಲಸ: ಖರ್ಗೆ ಅಸಮ್ಮತಿ

ನವದೆಹಲಿ (ಪಿಟಿಐ): ‘ನೌಕರರು ವಾರಕ್ಕೆ 90 ಗಂಟೆ ಕೆಲಸ ಮಾಡಬೇಕು’ ಎಂದು ಎಲ್ ಆ್ಯಂಡ್ ಟಿ ಅಧ್ಯಕ್ಷ ಎಸ್.ಎನ್.ಸುಬ್ರಹ್ಮಣ್ಯನ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಸಮ್ಮತಿ ವ್ಯಕ್ತಪಡಿಸಿದ್ದಾರೆ.

‘ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಬಿ.ಆರ್.ಅಂಬೇಡ್ಕರ್ ಅವರು ‘ನೌಕರರಿಂದ ನಿತ್ಯ 8 ಗಂಟೆಗೂ ಅಧಿಕ ಕೆಲಸ ಮಾಡಿಸಬಾರದು’ ಎಂಬ ನಿಲುವನ್ನು ತಳೆದಿದ್ದರು’ ಎಂದು ಖರ್ಗೆ ಬುಧವಾರ ಉಲ್ಲೇಖಿಸಿದರು. ರಾಜಧಾನಿಯ ಕೋಟ್ಲಾ ರಸ್ತೆಯಲ್ಲಿ ಕಾಂಗ್ರೆಸ್ ಪಕ್ಷದ ನೂತನ ಮುಖ್ಯ ಕಚೇರಿಯನ್ನು ಉದ್ಘಾಟಿಸಿದ ಬಳಿಕ ಪಕ್ಷದ ಮುಖಂಡರನ್ನು ಉದ್ದೇಶಿಸಿ ಮಾತನಾಡಿದರು.

‘ಕಟ್ಟಡ ನಿರ್ಮಾಣಕ್ಕಾಗಿ ಎಲ್ ಆ್ಯಂಡ್ ಟಿ ಕನ್‌ಸ್ಟ್ರಕ್ಷನ್, ವಾಸ್ತುಶಿಲ್ಪಿಗಳು, ಕಾರ್ಮಿಕರಿಗೆ ನಾನು ಕೃತಜ್ಞತೆ ಸಲ್ಲಿಸಲು ಬಯಸುತ್ತೇನೆ. ಎಲ್ ಆ್ಯಂಡ್ ಟಿ ಕಂಪನಿಗೆ ಕೃತಜ್ಞತೆಗಳು. ಆದರೆ, ಅದರ ಅಧ್ಯಕ್ಷರ ಇತ್ತೀಚಿನ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ’ ಎಂದರು.

‘ಎಂಟು ಗಂಟೆ ಕೆಲಸ ನಿರ್ವಹಿಸಿದ ಬಳಿಕ ಕಾರ್ಮಿಕ ಬಳಲುತ್ತಾನೆ. ಅದೇ ಕಾರಣಕ್ಕೆ ನೆಹರೂ ಅವರು ಫ್ಯಾಕ್ಟರಿ ಕಾಯ್ದೆ ರೂಪಿಸಿ, ಕಾರ್ಮಿಕರನ್ನು ಎಂಟು ಗಂಟೆಗೂ ಅಧಿಕ ಕಾಲ ದುಡಿಸಿ ಕೊಳ್ಳಬಾರದು ಎಂಬ ನಿಯಮ ತಂದರು. ಬಳಿಕ ಕೆಲವರು 9 ಗಂಟೆ ಕೆಲಸ ಮಾಡಬೇಕು ಎಂದರು. ಈಗ ಎಲ್ ಆ್ಯಂಡ್ ಟಿ ಅಧ್ಯಕ್ಷರು ನಿತ್ಯ 12 ಗಂಟೆ, 14 ಗಂಟೆ ಕೆಲಸ ಮಾಡಲಿ ಎನ್ನುತ್ತಿದ್ದಾರೆ. ಅವರು ತಮ್ಮ ನಿಲುವು ಕೈಬಿಡಬೇಕು’ ಎಂದು ಖರ್ಗೆ ಅಭಿಪ್ರಾಯಪಟ್ಟರು.

ಕದನ ವಿರಾಮ: ಇಸ್ರೇಲ್, ಹಮಾಸ್ ಸಮ್ಮತಿ

ದೋಹಾ(ಕತಾರ್)(ಎಪಿ): ಮಹತ್ವದ ಬೆಳವಣಿಗೆ-ಯೊಂದರಲ್ಲಿ, ಕದನ ವಿರಾಮ ಒಪ್ಪಂದಕ್ಕೆ ಇಸ್ರೇಲ್ ಹಾಗೂ ಬಂಡುಕೋರರ ಸಂಘಟನೆ ಹಮಾಸ್ ಒಪ್ಪಿವೆ ಎಂದು ಸಂಧಾನಕಾರರು ಬುಧವಾರ ಘೋಷಿಸಿದ್ದಾರೆ.

ಕತಾರ್ ರಾಜಧಾನಿಯಲ್ಲಿ ಹಲವು ವಾರಗಳು ನಡೆದ ಸಂಧಾನ ಮಾತುಕತೆ ನಂತರ ಈ ಬೆಳವಣಿಗೆ ನಡೆದಿದೆ. ಒತ್ತೆಯಾಳುಗಳನ್ನು ಹಮಾಸ್ ಹಂತಹಂತವಾಗಿ ಬಿಡುಗಡೆ ಮಾಡಲಿದ್ದರೆ, ತನ್ನ ಜೈಲುಗಳಲ್ಲಿರುವ ನೂರಾರು ಪ್ಯಾಲೆಸ್ಟೀನಿಯನ್ನರನ್ನು ಬಿಡುಗಡೆ ಮಾಡಲು ಇಸ್ರೇಲ್ ಸಮ್ಮತಿಸಿದೆ ಎಂದು ಸಂಧಾನಕಾರರು ತಿಳಿಸಿದ್ದಾರೆ.

ಕದನ ವಿರಾಮ ಕುರಿತು ಒಪ್ಪಂದವಾಗಿರುವುದನ್ನು ಅಮೆರಿಕದ ಮೂವರು ಅಧಿಕಾರಿಗಳು ಹಾಗೂ ಹಮಾಸ್ ಪ್ರತಿನಿಧಿಯೊಬ್ಬರು ಖಚಿತಪಡಿಸಿದ್ದಾರೆ. ಒಪ್ಪಂದ ಕುರಿತ ವಿವರಗಳು ಗೊತ್ತಾಗಬೇಕಿದೆ ಎಂದು ಇಸ್ರೇಲ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದರೊಂದಿಗೆ, ಗಾಜಾಪಟ್ಟಿಯಲ್ಲಿ ಕಳೆದ 15 ತಿಂಗಳಿನಿಂದ ನಡೆಯುತ್ತಿರುವ ಯುದ್ಧಕ್ಕೆ ತಡೆ ಬೀಳಲಿದೆ.

ದಕ್ಷಿಣ ಕೊರಿಯಾ ಅಧ್ಯಕ್ಷರ ಬಂಧನ


ಯೂನ್ ಸುಕ್ ಯೋಲ್

ಸೋಲ್ (ಎ.ಪಿ): ದಕ್ಷಿಣ ಕೊರಿಯಾ ಅಧ್ಯಕ್ಷರ ನಿವಾಸದ ಆವರಣದಲ್ಲಿ ಬುಧವಾರ ನಡೆದ ನಾಟಕೀಯ ಬೆಳವಣಿಗೆಗಳ ಹಿಂದೆಯೇ, ಸದ್ಯ ವಾಗ್ದಂಡನೆಗೆ ಗುರಿಯಾಗಿರುವ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರನ್ನು ತನಿಖಾಧಿಕಾರಿಗಳು ಬಂಧಿಸಿ, ತಾಸುಗಟ್ಟಲೇ ವಿಚಾರಣೆ ನಡೆಸಿದರು.

ಇದಕ್ಕೂ ಮುನ್ನ, ‘ಭ್ರಷ್ಟಾಚಾರ ನಿಗ್ರಹ ಸಂಸ್ಥೆಗೆ ನನ್ನ ಕಾರ್ಯವೈಖರಿ ತನಿಖೆ ಮಾಡುವ ಅಧಿಕಾರವಿಲ್ಲ. ನಾನು ದೇಶದಲ್ಲಿ ಹಿಂಸಾಚಾರ ತಡೆಯಲು ಕ್ರಮವಹಿಸಿದ್ದೇನೆ’ ಎಂದು ಪ್ರತಿಪಾದಿಸಿದ್ದ ಯೋಲ್, ತನಿಖಾಧಿಕಾರಿಗಳ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ತನಿಖಾಧಿಕಾರಿಗಳು ಕರೆದೊಯ್ಯುವ ಮುನ್ನ ನೀಡಿದ ವಿಡಿಯೊ ಸಂದೇಶದಲ್ಲಿ ಅವರು, ‘ದೇಶದಲ್ಲಿ ಕಾನೂನು ವ್ಯವಸ್ಥೆ ಪೂರ್ಣವಾಗಿ ಕುಸಿದಿದೆ’ ಎಂದೂ ಆರೋಪಿಸಿದರು.

‘ಅಧಿಕಾರದಲ್ಲಿ ಇದ್ದಾಗಲೇ ಬಂಧನಕ್ಕೆ ಒಳಗಾದ ದೇಶದ ಮೊದಲ ಅಧ್ಯಕ್ಷ’ ಎಂಬ ಕುಖ್ಯಾತಿಗೆ ಯೋಲ್ ಪಾತ್ರರಾದರು. ರಾಜಧಾನಿ ಸೋಲ್‌ನಲ್ಲಿರುವ ಅಧ್ಯಕ್ಷರ ನಿವಾಸ ‘ಹನ್ನಂ ಡಾಂಗ್’ಗೆ ಧಾವಿಸಿದ ಅಧಿಕಾರಿಗಳು, ಅಧ್ಯಕ್ಷರನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ಪಡೆದರು. ಉನ್ನತ ಸ್ಥಾನದ ಅಧಿಕಾರಿಗಳ ತನಿಖೆ ನಡೆಸಲಿರುವ ತನಿಖಾ ಸಂಸ್ಥೆಯು, ಐದು ಗಂಟೆ ಕಸರತ್ತಿನ ಬಳಿಕ ಅಧ್ಯಕ್ಷರನ್ನು ವಶಕ್ಕೆ ಪಡೆಯಲಾಯಿತು ಎಂದು ತಿಳಿಸಿದೆ. ಈ ಹಿಂದೆಯೂ ಅಧಿಕಾರಿಗಳು ಒಮ್ಮೆ ನಿವಾಸಕ್ಕೆ ತೆರಳಿದ್ದು, ವಶಕ್ಕೆ ಪಡೆಯಲಾಗದೇ ಮರಳಿದ್ದರು.

ಭಾರತ, ಅಮೆರಿಕ ಭದ್ರತೆಗೆ ಬೆದರಿಕೆ • ತನಿಖಾ ಸಮಿತಿ ರಚಿಸಿದ್ದ ಕೇಂದ್ರ

ವ್ಯಕ್ತಿ ವಿರುದ್ಧ ಕ್ರಮಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ: ಭಾರತ ಹಾಗೂ ಅಮೆರಿಕದ ಭದ್ರತೆಗೆ ಬೆದರಿಕೆ ಒಡ್ಡಿರುವುದಕ್ಕೆ ಸಂಬಂಧಿಸಿ ಅನಾಮಧೇಯ ವ್ಯಕ್ತಿ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರ ನೇಮಿಸಿದ್ದ ಉನ್ನತಾಧಿಕಾರ ತನಿಖಾ ಸಮಿತಿ ಶಿಫಾರಸು ಮಾಡಿದೆ.

2023ರಲ್ಲಿ ನ್ಯೂಯಾರ್ಕ್‌ನಲ್ಲಿ, ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆ ನಡೆದಿತ್ತು ಎನ್ನಲಾದ ಯತ್ನದಲ್ಲಿ ಭಾರತೀಯ ಏಜೆಂಟರು ಭಾಗಿಯಾಗಿದ್ದರು ಎಂದು ಅಮೆರಿಕ ಆರೋಪಿಸಿತ್ತು. ಅಮೆರಿಕದ ಆರೋಪಗಳನ್ನು ಭಾರತ ತಳ್ಳಿ ಹಾಕಿತ್ತು.

ನಂತರ, ಈ ಆರೋಪಗಳ ಕುರಿತು ತನಿಖೆ ನಡೆಸುವುದಕ್ಕಾಗಿ ಕೇಂದ್ರ ಸರ್ಕಾರ ನೇಮಿಸಿದ್ದ ಉನ್ನತಾಧಿಕಾರ ಸಮಿತಿಯು ಈ ಶಿಫಾರಸು ಮಾಡಿದೆ.

‘ಕೆಲ ಸಂಘಟಿತ ಕ್ರಿಮಿನಲ್ ಗುಂಪುಗಳು ಹಾಗೂ ಭಯೋತ್ಪಾದಕ ಸಂಘಟನೆಗಳು ಎರಡೂ ದೇಶಗಳ ಭದ್ರತೆಗೆ ಬೆದರಿಕೆ ಒಡ್ಡಿದ್ದರ ಕುರಿತು ತನಿಖೆ ನಡೆಸಿದ ನಂತರ ಸಮಿತಿ ಈ ಶಿಫಾರಸು ಮಾಡಿದೆ’ ಎಂದು ಗೃಹ ಸಚಿವಾಲಯ ಬುಧವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಸಚಿವಾಲಯವು ವ್ಯಕ್ತಿಯ ಹೆಸರು ಬಹಿರಂಗಪಡಿಸಿಲ್ಲ ಹಾಗೂ ಸಮಿತಿಯು ಯಾವಾಗ ವರದಿ ಸಲ್ಲಿಸಿದೆ ಎಂಬ ಮಾಹಿತಿಯನ್ನೂ ನೀಡಿಲ್ಲ. ಆದರೆ, ಅನಾಮಧೇಯ ವ್ಯಕ್ತಿ ವಿರುದ್ಧ ತ್ವರಿತವಾಗಿ ಕಾನೂನು ಕ್ರಮ ಕೈಗೊಳ್ಳುವಂತೆ ಸಮಿತಿ ಶಿಫಾರಸು ಮಾಡಿದೆ ಎಂದಷ್ಟೆ ತಿಳಿಸಿದೆ.

ಮುಖ್ಯಾಂಶಗಳು

- ಪನ್ನೂ ಹತ್ಯೆ ಯತ್ನ ವಿಫಲಗೊಳಿಸಿದ್ದಾಗಿ ಹೇಳಿದ್ದ ಅಮೆರಿಕ
- ಆರೋಪಗಳಿಗೆ ತಕ್ಕ ಪ್ರತಿಕ್ರಿಯೆ: ಕೇಂದ್ರ ಸಂಸ್ಥೆಗಳ ಕಾರ್ಯವೈಖರಿ ಸುಧಾರಣೆಗೂ ಶಿಫಾರಸು

‘ಸಂಘಟಿತ ಕ್ರಿಮಿನಲ್ ಗುಂಪುಗಳು ಹಾಗೂ ಭಯೋತ್ಪಾದಕ ಸಂಘಟನೆಗಳು, ಡ್ರಗ್ಸ್ ಪೆಡ್ಲರ್‌ಗಳ ಕುರಿತು ಅಮೆರಿಕ ಹಂಚಿಕೊಂಡಿದ್ದ ಮಾಹಿತಿ ಆಧರಿಸಿ 2023ರ ನವೆಂಬರ್‌ನಲ್ಲಿ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗಿತ್ತು. ವಿವಿಧ ತನಿಖಾ ಸಂಸ್ಥೆಗಳ ಅಧಿಕಾರಿಗಳು ಕೂಡ ಈ ಬೆಳವಣಿಗೆಗಳಿಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ನಡೆಸಿದ್ದರು’ ಎಂದೂ ಸಚಿವಾಲಯ ತಿಳಿಸಿದೆ.

ಪನ್ನೂ ಹತ್ಯೆಗೆ ನಡೆದಿತ್ತು ಎನ್ನಲಾದ ಯತ್ನದಲ್ಲಿ ವಿಕಾಸ್ ಯಾದವ್ ಭಾಗಿಯಾಗಿದ್ದರು ಎಂದು ಅಮೆರಿಕ ಹೇಳಿತ್ತು. ಈತ ‘ರಾ’ (ಆರ್ ಆ್ಯಂಡ್ ಡಬ್ಲ್ಯು) ಮಾಜಿ ಅಧಿಕಾರಿಯಾಗಿದ್ದು, ಅಮೆರಿಕ ಹಾಗೂ ಕೆನಡಾ ದ್ವಿಪೌರತ್ವ ಹೊಂದಿದ್ದಾಗಿಯೂ ಅಮೆರಿಕ ಹೇಳಿತ್ತು.

ಅಪಹರಣ ಹಾಗೂ ಸುಲಿಗೆ ಆರೋಪಗಳಡಿ, ಯಾದವ್ ಅವರನ್ನು ದೆಹಲಿ ಪೊಲೀಸರು 2023ರ ಡಿಸೆಂಬರ್‌ನಲ್ಲಿ ಬಂಧಿಸಿದ್ದರು.

ಇನ್ನೊಂದೆಡೆ, ಪನ್ನೂ ಹತ್ಯೆ ಯತ್ನಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ, ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಅವರನ್ನು 2023ರಲ್ಲಿ ಪ್ರಾಗ್‌ನಲ್ಲಿ ಬಂಧಿಸಲಾಗಿತ್ತು. ನಂತರ, ಅವರನ್ನು ಜೆಕ್ ಗಣರಾಜ್ಯವು ಅಮೆರಿಕಕ್ಕೆ ಹಸ್ತಾಂತರಿಸಿದೆ.

ಕೇಂದ್ರ, ಆಯೋಗಕ್ಕೆ ‘ಸುಪ್ರೀಂ’ ನೋಟಿಸ್

ಚುನಾವಣಾ ನಿಯಮಗಳಿಗೆ ಮಾಡಿರುವ ತಿದ್ದುಪಡಿ ಪ್ರಶ್ನಿಸಿದ್ದ ಅರ್ಜಿ ವಿಚಾರಣೆ

ನವದೆಹಲಿ: ಚುನಾವಣಾ ನಿಯಮಗಳಿಗೆ ಇತ್ತೀಚೆಗೆ ತಿದ್ದುಪಡಿ ತಂದಿರುವುದರ ವಿರುದ್ಧ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನು ಒಳಗೊಂಡ ನ್ಯಾಯಪೀಠವು, ರಮೇಶ್ ಅವರ ಪರ ವಕೀಲರಾದ ಕಪಿಲ್ ಸಿಬಲ್ ಮತ್ತು ಅಭಿಷೇಕ್ ಮನು ಸಿಂಘ್ವಿ ಅವರ ಮನವಿಯನ್ನು ಪರಿಗಣಿಸಿ ನೋಟಿಸ್ ಜಾರಿ ಮಾಡಿತು. ಮಾರ್ಚ್ 17ರಂದು ಅರ್ಜಿ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿತು.

ಸಿಂಘ್ವಿ ಅವರು, ‘ಅತ್ಯಂತ ಬುದ್ಧಿವಂತಿಕೆಯಿಂದ 1961ರ ಚುನಾವಣಾ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ. ಮತಗಟ್ಟೆಯಲ್ಲಿನ ಸಿ.ಸಿ.ಟಿವಿ ದೃಶ್ಯಗಳನ್ನು ಸಾರ್ವಜನಿಕ ಪರಿಶೀಲನೆಗೆ ಒಳಪಡಿಸುವುದನ್ನು ನಿರ್ಬಂಧಿಸಲಾಗಿದೆ. ಮತದಾರರ ಗುರುತು ಬಹಿರಂಗವಾಗುವ ಸಾಧ್ಯತೆ ಇರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆಯೋಗ ತಿಳಿಸಿದೆ’ ಎಂದು ಹೇಳಿದರು.

ರಮೇಶ್ ಅವರು ತಿದ್ದುಪಡಿಯನ್ನು ಪ್ರಶ್ನಿಸಿ ಡಿಸೆಂಬರ್‌ನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಕೋರ್ಟ್ ಆವರಣಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ನಿರ್ದೇಶನ



ನವದೆಹಲಿ: ದೇಶದ ಎಲ್ಲ ನ್ಯಾಯಾಲಯಗಳು ಹಾಗೂ ನ್ಯಾಯಮಂಡಳಿಗಳ ಆವರಣದಲ್ಲಿ ಪುರುಷರು, ಮಹಿಳೆಯರು, ಅಂಗವಿಕಲರು ಹಾಗೂ ಲಿಂಗತ್ವ ಅಲ್ಪಸಂಖ್ಯಾ ತರಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ಈ ಸಂಬಂಧ, ಎಲ್ಲ ಹೈಕೋರ್ಟ್‌ಗಳು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಆರ್.ಮಹಾದೇವನ್ ಅವರಿದ್ದ ನ್ಯಾಯಪೀಠ ನಿರ್ದೇಶನ ನೀಡಿದೆ.

ವಕೀಲ ರಾಜೀವ್ ಕಲಿಟಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಪೀಠ, ‘ಅಗತ್ಯಕ್ಕೆ ತಕ್ಕಂತೆ ಶೌಚಾಲಯ ಸೌಲಭ್ಯ ಇಲ್ಲದಿರುವುದು ಸಮಾನತೆ ತತ್ವವನ್ನೇ ಬುಡಮೇಲು ಮಾಡಲಿದೆ. ನ್ಯಾಯೋಚಿತ ಆಡಳಿತಕ್ಕೆ ಅಡ್ಡಿಯಾಗಲಿದೆ’ ಎಂದೂ ಪೀಠ ಪ್ರತಿಪಾದಿಸಿದೆ.

ಪೂಜಾ ಬಂಧನಕ್ಕೆ ತಡೆ

ನಕಲಿ ಪ್ರಮಾಣಪತ್ರ ನೀಡಿ ಕೇಂದ್ರ ನಾಗರಿಕ ಸೇವೆಗೆ ಆಯ್ಕೆಯಾದ ಆರೋಪ ಎದುರಿಸುತ್ತಿರುವ ಮಾಜಿ ಪ್ರೊಬೇಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರನ್ನು ಫೆ.14ರವರೆಗೆ ಬಂಧಿಸದಂತೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಖಾಲಿಸ್ತಾನಿ ಪರ ಗುಂಪಿನಿಂದ ಸಂಚು: ಗುಪ್ತಚರ ವರದಿ

‘ಕೇಜ್ರಿವಾಲ್ ಜೀವಕ್ಕೆ ಅಪಾಯ’

ನವದೆಹಲಿ (ಪಿಟಿಐ): ಖಾಲಿಸ್ತಾನಿ ಪರ ಗುಂಪೊಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರ ಮೇಲೆ ದಾಳಿ ನಡೆಸಲು ಸಂಚು ರೂಪಿಸುತ್ತಿದೆ ಎಂದು ಗುಪ್ತಚರ ವರದಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ಈ ಬಗ್ಗೆ ಬುಧವಾರ ಪ್ರತಿಕ್ರಿಯಿಸಿದ ಕೇಜ್ರಿವಾಲ್, ‘ನನ್ನನ್ನು ದೇವರು ರಕ್ಷಿಸುತ್ತಾರೆ’ ಎಂದು ಹೇಳಿದ್ದಾರೆ.

ಜೀವ ಬೆದರಿಕೆ ಇರುವ ಬಗ್ಗೆ ವದಂತಿಗಳು ಹರಡಿವುದರಿಂದ ಕೇಜ್ರಿವಾಲ್ ಭದ್ರತೆ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ದೆಹಲಿ ಪೊಲೀಸರು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಚುನಾವಣೆ ಸಂದರ್ಭದಲ್ಲಿ ಕೇಜ್ರಿವಾಲ್ ಅವರ ಮೇಲೆ ದಾಳಿ ನಡೆಸುವ ಸಲುವಾಗಿ ಎರಡು–ಮೂರು ಜನರ ತಂಡವೊಂದು ಪಂಜಾಬ್‌ನಿಂದ ದೆಹಲಿಗೆ ಬರುತ್ತಿರುವ ಬಗ್ಗೆ ಮಾಹಿತಿ ಸಿಕ್ಕಿದೆ. ಈ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಬೆಂಬಲಿತ ಖಾಲಿಸ್ತಾನಿ ಸಂಘಟನೆಯು ದೆಹಲಿ ಮತ್ತು ಪಂಜಾಬ್‌ನಲ್ಲಿ ಶಾಂತಿ ಕದಡಲು ಸಂಚು ರೂಪಿಸಿದೆ ಎಂದು ಮೂಲಗಳು ಹೇಳಿವೆ.

ಮನೆ, ಕಾರು ಇಲ್ಲ; ₹1.73 ಕೋಟಿ ಆಸ್ತಿ



ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ನಾಮಪತ್ರದ ಜತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ₹1.73 ಕೋಟಿ ಆಸ್ತಿ ಹೊಂದಿರುವುದಾಗಿ ಘೋಷಿಸಿಕೊಂಡಿದ್ದಾರೆ. ಸ್ವಂತ ಮನೆ ಮತ್ತು ಕಾರು ಹೊಂದಿಲ್ಲದ ಕೇಜ್ರಿವಾಲ್ ಅವರ ಬಳಿ ₹ 50,000 ನಗದು ಮತ್ತು ಬ್ಯಾಂಕ್ ಖಾತೆಗಳಲ್ಲಿ ₹ 2.96 ಲಕ್ಷ ಇದೆ. ಅವರ ಸ್ಥಿರ ಆಸ್ತಿಯ ಮೌಲ್ಯ ₹ 1.73 ಕೋಟಿ ಆಗಿದೆ.

ಕೇಜ್ರಿವಾಲ್ ಪತ್ನಿ ಸುನೀತಾ ಕೇಜ್ರಿವಾಲ್ ಅವರು ₹ 2.5 ಕೋಟಿ ಮೌಲ್ಯದ ಆಸ್ತಿಯ ಒಡೆಯರಾಗಿದ್ದಾರೆ. ₹ 25 ಲಕ್ಷ ಮೌಲ್ಯದ 320 ಗ್ರಾಂ ಚಿನ್ನ, ₹92,000 ಮೌಲ್ಯದ 1 ಕೆ.ಜಿ ಬೆಳ್ಳಿ ಒಳಗೊಂಡಂತೆ ₹ 1 ಕೋಟಿ ಚರ ಆಸ್ತಿ ಮತ್ತು ₹ 1.5 ಮೌಲ್ಯದ ಸ್ಥಿರ ಆಸ್ತಿಯನ್ನು ಅವರು ಹೊಂದಿದ್ದಾರೆ. ಸುನೀತಾ ಅವರ ಹೆಸರಿನಲ್ಲಿ ಗುರುಗ್ರಾಮದಲ್ಲಿ ಒಂದು ಮನೆ ಮತ್ತು ಐದು ಆಸನದ ಒಂದು ಕಾರು ಇದೆ. ಕೇಜ್ರಿವಾಲ್ ದಂಪತಿಯು ಒಟ್ಟಾರೆ ₹ 4.23 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಅರವಿಂದ ಕೇಜ್ರಿವಾಲ್ ಅವರು 2020ರಲ್ಲಿ ₹3.4 ಕೋಟಿ ಹಾಗೂ 2015ರಲ್ಲಿ ₹2.1 ಕೋಟಿ ಆಸ್ತಿ ಘೋಷಿಸಿಕೊಂಡಿದ್ದರು.

ಇ.ಡಿಗೆ ಗೃಹ ಸಚಿವಾಲಯ ಅನುಮತಿ

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರನ್ನು ವಿಚಾರಣೆಗೆ ಒಳಪಡಿಸಲು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಕೇಂದ್ರ ಗೃಹ ಸಚಿವಾಲಯ ಇತ್ತೀಚೆಗೆ ಅನುಮತಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಮಾರ್ಚ್‌ನಲ್ಲಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದ್ದ ಇ.ಡಿಯು ಹಣ ಅಕ್ರಮ ವರ್ಗಾವಣೆ ವಿಶೇಷ ತಡೆ ಕಾಯ್ದೆ (ಪಿಎಂಎಲ್‌ಎ) ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

‘ಕಾಣೆಯಾದವರು ಮೃತರೆಂದು ಘೋಷಿಸಲು ನಿರ್ಧಾರ’

ತಿರುವನಂತಪುರ (ಪಿಟಿಐ): ಕಳೆದ ವರ್ಷ ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತ ದುರಂತದಲ್ಲಿ ಕಣ್ಮರೆಯಾಗಿ, ಇದುವರೆಗೂ ಪತ್ತೆಯಾಗದವರನ್ನು ಮೃತರು ಎಂದು ಘೋಷಿಸಲು ಕೇರಳ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಸರ್ಕಾರದ ಈ ನಿರ್ಧಾರವು ಸಂತ್ರಸ್ತರ ಕುಟುಂಬಗಳು ಪರಿಹಾರ ಪಡೆಯಲು ನೆರವಾಗಲಿದೆ.

ಕಾಣೆಯಾದವರ ಪಟ್ಟಿಯನ್ನು ಪರಿಶೀಲಿಸಲು ಕಂದಾಯ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲಾಗುತ್ತಿದೆ. ಈ ಸಮಿತಿಗಳು ಸಲ್ಲಿಸುವ ಪಟ್ಟಿಯನ್ನು ಪರಿಶೀಲಿಸಿ ರಾಜ್ಯ ಸರ್ಕಾರವು, ಕಾಣೆಯಾದವರನ್ನು ಮೃತರೆಂದು ಘೋಷಿಸಿ, ಅವರ ನಿಕಟ ಸಂಬಂಧಿಗಳಿಗೆ ಪರಿಹಾರ ನೀಡಲಿದೆ ಎಂದು ರಾಜ್ಯ ಸರ್ಕಾರವು ಮಂಗಳವಾರ ಹೊರಡಿಸಿರುವ ಆದೇಶದಲ್ಲಿ ಹೇಳಿದೆ.

ಕಳೆದ ವರ್ಷ ಜುಲೈ 30 ರಂದು ಸಂಭವಿಸಿದ ಭೂಕುಸಿತದಲ್ಲಿ 263 ಜನರು ಮೃತಪಟ್ಟಿದ್ದಾರೆ. 35 ಜನರು ಕಾಣೆಯಾಗಿದ್ದಾರೆ.

ಭಾಗವತ್, ರಾಹುಲ್ ಹೇಳಿಕೆ; ವಿವಾದದ ಕಿಡಿ

ಒಂದನೇ ಪುಟದಿಂದ...

‘ಬ್ರಿಟಿಷರ ವಿರುದ್ಧ ನಡೆದ ಹೋರಾಟವನ್ನೂ ಅಸಮರ್ಥನೀಯ ಎನ್ನುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಭಾರತವು 1947ರಲ್ಲಿ ನಿಜವಾದ ಸ್ವಾತಂತ್ರ್ಯ ಗಳಿಸಲಿಲ್ಲ ಎಂಬ ಹೇಳಿಕೆಯು ನಮ್ಮ ಸ್ವಾತಂತ್ರ್ಯ ಹೋರಾಟಗಾರರು, ದೇಶದ ಪ್ರತಿಯೊಬ್ಬ ಪ್ರಜೆ ಮತ್ತು ಸಂವಿಧಾನಕ್ಕೆ ಮಾಡಿರುವ ಅವಮಾನ. ಇಂತಹ ಅಸಂಬದ್ಧ ಮಾತುಗಳನ್ನು ಕಡೆಗಣಿಸುವ ಸಮಯ ಬಂದಿದೆ’ ಎಂದಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ರಾಮಮಂದಿರ ಉದ್ಘಾಟನೆಯಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತೆಂದು ಆರ್‌ಎಸ್‌ಎಸ್‌ನವರು ನಂಬಿದ್ದಾರೆ. 1947ರಲ್ಲೇ ಸ್ವಾತಂತ್ರ್ಯ ಸಿಕ್ಕಿದರೂ ಅದನ್ನು ಒಪ್ಪಿಕೊಳ್ಳದಿರುವುದು ನಾಚಿಕೆಗೇಡು’ ಎಂದು ಕಿಡಿಕಾರಿದ್ದಾರೆ.

‘ಆರ್‌ಎಸ್‌ಎಸ್‌ನವರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿಲ್ಲ, ಜೈಲಿಗೂ ಹೋಗಿಲ್ಲ. ಆದ್ದರಿಂದ 1947ರಲ್ಲೇ ಸ್ವಾತಂತ್ರ್ಯ ಲಭಿಸಿರುವುದು ಅವರಿಗೆ ನೆನಪಿಲ್ಲ. ಆದರೆ ನಮ್ಮವರು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣ ತೆತ್ತಿರುವುದರಿಂದ ನಮಗೆ ಅದರ ನೆನಪಿದೆ’ ಎಂದಿದ್ದಾರೆ.

‘ಸ್ವಾತಂತ್ರ್ಯದೊಂದಿಗೆ ಯಾವುದೇ ಸಂಬಂಧವಿಲ್ಲದ ಮತ್ತು ಅದಕ್ಕಾಗಿ ಹೋರಾಡದ ಜನರು ಇಂತಹ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆಂದು ನಿಮಗೆ ತಿಳಿದಿದೆ. ಆರ್‌ಎಸ್‌ಎಸ್ ಮುಖ್ಯಸ್ಥರ ಹೇಳಿಕೆಯನ್ನು ನಾನು ಗಮನಿಸಿದ್ದೇನೆ. ಅವರು ಪ್ರಧಾನಿ ನರೇಂದ್ರ ಮೋದಿ ಜತೆ ಸೇರಿಕೊಂಡು ರಾಮಮಂದಿರ ಉದ್ಘಾಟಿಸಿದ್ದರು. 2014ರಲ್ಲಿ ತಾನು ಪ್ರಧಾನಿಯಾದಾಗ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎಂಬುದು ಮೋದಿ ಅವರ ನಂಬಿಕೆಯಾಗಿದೆ’ ಎಂದು ಲೇವಡಿ ಮಾಡಿದರು.

‘ಸರ್ಕಾರಿ ವ್ಯವಸ್ಥೆ ವಿರುದ್ಧ ನಮ್ಮ ಹೋರಾಟ’

ಒಂದನೇ ಪುಟದಿಂದ...

‘ನಾವು ನ್ಯಾಯಯುತ ಹೋರಾಟ ನಡೆಸುತ್ತಿದ್ದೇವೆ ಎಂದು ಭಾವಿಸಬೇಡಿ. ಕಾಂಗ್ರೆಸ್ ಪಕ್ಷವು ಬಿಜೆಪಿ ಮತ್ತು ಆರ್‌ಎಸ್‌ಎಸ್ ಎಂಬ ಎರಡು ರಾಜಕೀಯ ಸಂಘಟನೆಗಳ ವಿರುದ್ಧ ಹೋರಾಡುತ್ತಿದೆ ಎಂದು ನೀವು ನಂಬಿದರೆ, ಇಲ್ಲಿ ಏನು ನಡೆಯುತ್ತಿದೆ ಎಂಬುದೇ ನಿಮಗೆ ಅರ್ಥವಾಗದು. ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಮ್ಮ ದೇಶದ ಪ್ರತಿಯೊಂದು ಸಂಸ್ಥೆಯನ್ನೂ ತಮ್ಮ ವಶಕ್ಕೆ ತೆಗೆದುಕೊಂಡಿವೆ. ಆದ್ದರಿಂದ ನಾವು ಈಗ ಬಿಜೆಪಿ, ಆರ್‌ಎಸ್‌ಎಸ್ ಮತ್ತು ಸರ್ಕಾರಿ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುತ್ತಿದ್ದೇವೆ’ ಎಂದು ರಾಹುಲ್ ಹೇಳಿದ್ದಾರೆ.

‘ಕಾಂಗ್ರೆಸ್ ಸಿದ್ಧಾಂತವನ್ನು ಬೆಂಬಲಿಸುವವರು ತ್ರಿವರ್ಣ ಧ್ವಜಕ್ಕೆ ಗೌರವ ಸಲ್ಲಿಸುತ್ತಾರೆ. ಆದರೆ, ಈಗ ಅಧಿಕಾರದಲ್ಲಿರುವ ಮಂದಿ ರಾಷ್ಟ್ರಧ್ವಜಕ್ಕೆ ವಂದಿಸುವುದಿಲ್ಲ ಮತ್ತು ಸಂವಿಧಾನವನ್ನು ನಂಬುವುದಿಲ್ಲ’ ಎಂದು ದೂರಿದರು.

‘ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಭಾರತದ ಬಗ್ಗೆ ‘ಸಂಪೂರ್ಣವಾಗಿ ಭಿನ್ನ ದೃಷ್ಟಿಕೋನ’ ಹೊಂದಿದ್ದಾರೆ. ಗುಪ್ತ ಕಾರ್ಯಸೂಚಿ ಮೂಲಕ ಮತ್ತು ಒಬ್ಬನೇ ವ್ಯಕ್ತಿಯಿಂದ ದೇಶದ ಆಡಳಿತ ನಡೆಸಲು ಬಯಸುತ್ತಾರೆ. ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ಜಾತಿಗಳು ಮತ್ತು ಬುಡಕಟ್ಟು ಸಮುದಾಯದವರ ಧ್ವನಿ ಹತ್ತಿಕ್ಕುವುದೇ ಅವರ ಕಾರ್ಯಸೂಚಿ’ ಎಂದು ಆರೋಪಿಸಿದರು.

ನಡ್ಡಾ ತಿರುಗೇಟು: ರಾಹುಲ್ ಮತ್ತು ಅವರ ಪಕ್ಷಕ್ಕೆ ನಗರ ನಕ್ಸಲರು, ಸರ್ಕಾರವನ್ನು ಅಸ್ಥಿರಗೊಳಿಸುವ ಮಂದಿ ಮತ್ತು ದೇಶದ ಗೌರವಕ್ಕೆ ಧಕ್ಕೆ ಉಂಟುಮಾಡಲು ಹವಣಿಸುವ ಶಕ್ತಿಗಳ ಜತೆ ನಂಟು ಇರುವುದು ರಹಸ್ಯವಾಗಿ ಉಳಿದಿಲ್ಲ. ಅವರು ಮಾಡುತ್ತಿರುವ ಕೆಲಸಗಳು ಇಂತಹ ನಂಬಿಕೆಯನ್ನು ಬಲಪಡಿಸಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ‘ಎಕ್ಸ್’ನಲ್ಲಿ ತಿರುಗೇಟು ನೀಡಿದ್ದಾರೆ.

‘ಕಾಂಗ್ರೆಸ್‌ನ ಕೊಳಕು ಸಿದ್ಧಾಂತವು ಈಗ ಆ ಪಕ್ಷದ ನಾಯಕರಿಂದಲೇ ಬಹಿರಂಗಗೊಂಡಿದೆ. ತಮ್ಮ ಪಕ್ಷವು ದೇಶದ ವಿರುದ್ಧ ಹೋರಾಡುತ್ತಿದೆ ಎಂಬ ಸತ್ಯವನ್ನು ತಿಳಿಸಿರುವುದುಕ್ಕೆ ರಾಹುಲ್ ಅವರನ್ನು ಅಭಿನಂದಿಸುತ್ತೇನೆ’ ಎಂದಿದ್ದಾರೆ.

ದೆಹಲಿ: ಎಐಸಿಸಿ ನೂತನ ಕಚೇರಿ ಉದ್ಘಾಟನೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ನವದೆಹಲಿಯ ಕೋಟ್ಲಾ ರಸ್ತೆಯಲ್ಲಿ ನಿರ್ಮಿಸಿರುವ ಪಕ್ಷದ ಮುಖ್ಯ ಕಚೇರಿಯನ್ನು ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಬುಧವಾರ ಉದ್ಘಾಟಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ಗಾಂಧಿ, ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ಹಿರಿಯ ನಾಯಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನೂತನ ಕಚೇರಿಯ ಆವರಣದಲ್ಲಿ ನಾಯಕರು ಪಕ್ಷದ ಧ್ವಜವನ್ನು ಹಾರಿಸಿ, ವಂದೇ ಮಾತರಂ ಮತ್ತು ರಾಷ್ಟ್ರಗೀತೆಯನ್ನು ಹಾಡಿದರು. ನಂತರ ಸೋನಿಯಾ ಗಾಂಧಿ ಅವರು ಕಟ್ಟಡವನ್ನು ಉದ್ಘಾಟನೆ ಮಾಡಿದರು. ಕಟ್ಟಡದ ಪ್ರವೇಶದ್ವಾರದಲ್ಲಿ ರಿಬ್ಬನ್ ಕತ್ತರಿಸಲು ಕೈಜೋಡಿಸುವಂತೆ ಖರ್ಗೆ ಅವರಿಗೆ ಸೋನಿಯಾ ಗಾಂಧಿ ಹೇಳಿದರು.

ಸೋನಿಯಾ ಅವರು ಪಕ್ಷದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ‘ಇಂದಿರಾ ಗಾಂಧಿ ಭವನ’ದ ಕಾಮಗಾರಿಯನ್ನು ಆರಂಭಿಸಲಾಗಿತ್ತು. ಪಕ್ಷದ ಈಗಿನ ಕಚೇರಿಯು ಅಕ್ಬರ್ ರಸ್ತೆಯ ನಂ.24ರಲ್ಲಿ ಇದೆ.

ಹೊಸ ಕಚೇರಿಯಲ್ಲಿ ಏನೇನಿದೆ?

- ಕಟ್ಟಡದ ಗೋಡೆಗಳಲ್ಲಿ ಕಾಂಗ್ರೆಸ್‌ನ ಮಾಜಿ ಪ್ರಧಾನಿಗಳು, ಮುಖಂಡರದ್ದು ಸೇರಿದಂತೆ 246 ಫೋಟೊಗಳನ್ನು ತೂಗುಹಾಕಲಾಗಿದೆ
- ಪಕ್ಷದ 140 ವರ್ಷಗಳ ಇತಿಹಾಸವನ್ನು ಸಾರುವ ವರ್ಣಚಿತ್ರಗಳೂ ಗೋಡೆಗಳನ್ನು ಅಲಂಕರಿಸಿವೆ
- ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹೆಸರಿನ ಗ್ರಂಥಾಲಯ ಇದೆ
- ಪ್ರವೇಶದ್ವಾರದಲ್ಲಿ ‘ಪ್ರಜಾಪ್ರಭುತ್ವ’, ‘ರಾಷ್ಟ್ರೀಯತೆ’, ‘ಜಾತ್ಯತೀತತೆ’ ಮತ್ತು ಮತ್ತು 'ನ್ಯಾಯ' ಎಂಬ ಪದಗಳನ್ನು ಕೆತ್ತಲಾಗಿದೆ.



ನವದೆಹಲಿಯ ಕೋಟ್ಲಾ ರಸ್ತೆಯ 9ಎನಲ್ಲಿ ನಿರ್ಮಾಣಗೊಂಡ ಪಕ್ಷದ ಮುಖ್ಯ ಕಚೇರಿಯನ್ನು ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಬುಧವಾರ ಉದ್ಘಾಟಿಸಿದರು. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಮತ್ತಿತರ ನಾಯಕರು ಉಪಸ್ಥಿತರಿದ್ದರು ಪಿಟಿಐ ಚಿತ್ರ

ಇ.ಡಿಗೆ ಸುಪ್ರೀಂ ಕೋರ್ಟ್ ತರಾಟೆ

ನವದೆಹಲಿ: ಹಲವರಿಗೆ ವಂಚಿಸಿದ ಆರೋಪ ಹೊತ್ತ ಮಹಿಳೆಗೆ ಜಾಮೀನು ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದ ಜಾರಿ ನಿರ್ದೇಶನಾಲಯವನ್ನು(ಇ.ಡಿ) ಸುಪ್ರೀಂ ಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿದೆ.

‘ಈ ವಿಚಾರದಲ್ಲಿ ಇ.ಡಿ ತಳೆದಿರುವ ನಿಲುವು ಒಪ್ಪತಕ್ಕದ್ದಲ್ಲ. ಹಣ ಅಕ್ರಮ ವರ್ಗಾವಣೆ ಆರೋಪದಡಿ ಬಂಧನಕ್ಕೆ ಒಳಗಾಗಿರುವ ವ್ಯಕ್ತಿಗೆ ಯಾವುದೇ ಸಂದರ್ಭದಲ್ಲಿಯೂ ಜಾಮೀನು ನೀಡ ಬಾರದು ಎಂಬುದು ತನ್ನ ನಂಬಿಕೆ ಎಂದು ಸರ್ಕಾರದ ಈ ನಿಲುವು ತೋರಿಸುವಂತಿದೆ’ ಎಂದು ನ್ಯಾಯಾಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ ಆರೋಪ: ಬಿಜೆಪಿ ನಾಯಕ ಬಂಧನ

ಸೀದಿ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ಸೀದಿ ಜಿಲ್ಲೆಯಲ್ಲಿ ಮಹಿಳೆ ಮೇಲೆ ಅತ್ಯಾಚಾರ ಮತ್ತು ಹಣ ಸುಲಿಗೆ ಮಾಡಿದ ಆರೋಪದಡಿ ಬಿಜೆಪಿ ನಾಯಕ ಅಜಿತ್‌ಪಾಲ್ ಸಿಂಗ್ ಚೌಹಾಣ್ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಪಕ್ಷದ ಟಿಕೆಟ್ ಕೊಡಿಸುವ ನೆಪದಲ್ಲಿ ಬಿಜೆಪಿ ನಾಯಕಿಯ ಮೇಲೆ ಅತ್ಯಾಚಾರ ಮಾಡಿದ್ದು, ಅದನ್ನು ವಿಡಿಯೊ ಮಾಡಿಕೊಂಡು ಹಣ ನೀಡುವಂತೆ ಒತ್ತಾಯಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ಆರೋಪಿ, ಸಂತ್ರಸ್ತೆಯ ಗಂಡನನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದು, ಮಾವನಿಗೆ ಅಶ್ಲೀಲ ವಿಡಿಯೊ ತೋರಿಸಿ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಚೌಹಾಣ್ ಅವರನ್ನು ಉಚ್ಚಾಟನೆ ಮಾಡಲಾಗಿದೆ.

ಅತ್ಯಾಚಾರ: ಬಿಜೆಪಿ ಅಧ್ಯಕ್ಷನ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂಬ ಆರೋಪದಡಿ ಹರಿಯಾಣ ಬಿಜೆಪಿ ಘಟಕದ ಅಧ್ಯಕ್ಷ ಮೋಹನ್ ಲಾಲ್ ಬದೋಲಿ ಹಾಗೂ ಗಾಯಕರೊಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಆರೋಪಿಗಳು ಹಿಮಾಚಲ ಪ್ರದೇಶದ ಕಸೌಲಿಯ ಹೋಟೆಲ್‌ವೊಂದರಲ್ಲಿ ಅತ್ಯಾಚಾರ ಎಸಗಿದ್ದಾರೆ. ಅತ್ಯಾಚಾರ ಎಸಗಿರುವ ವಿಡಿಯೊವನ್ನು ಆರೋಪಿಗಳು ಚಿತ್ರೀಕರಿಸಿದ್ದು, ಕೃತ್ಯದ ಕುರಿತಂತೆ ಯಾರಿಗಾದರೂ ಮಾಹಿತಿ ನೀಡಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಪಕ್ಷದ ಹರಿಯಾಣ ಘಟಕದ ಅಧ್ಯಕ್ಷರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಕುರಿತು ಕಾಂಗ್ರೆಸ್ ಬುಧವಾರ ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದೆ.

ಗಂಭೀರ ಆರೋಪದ ಹೊರತಾಗಿಯೂ ಆರೋಪಿಯನ್ನು ಹುದ್ದೆಯಿಂದ ಇನ್ನೂ ಏಕೆ ತೆಗೆದುಹಾಕಿಲ್ಲ ಎಂಬುದಕ್ಕೆ ಪ್ರಧಾನಿ ನರೇಂದ್ರ ಮೋದಿ ಉತ್ತರಿಸಬೇಕು ಎಂದು ಆಗ್ರಹಿಸಿದೆ.

ಡಲ್ಲೇವಾಲ್ ಆರೋಗ್ಯ ವರದಿ ಸಲ್ಲಿಸಲು ‘ಸುಪ್ರೀಂ’ ಸೂಚನೆ

ನವದೆಹಲಿ(ಪಿಟಿಐ): ಅನಿರ್ದಿಷ್ಟಾವಧಿ ನಿರಶನ ನಡೆಸುತ್ತಿರುವ ರೈತ ನಾಯಕ ಜಗಜಿತ್ ಸಿಂಗ್ ಡಲ್ಲೇವಾಲ್ ಅವರ ಆರೋಗ್ಯ ಕುರಿತ ವರದಿಯನ್ನು ಸಲ್ಲಿಸುವಂತೆ ಪಂಜಾಬ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ಈ ವರದಿಯನ್ನು ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ದೆಹಲಿಯ ಏಮ್ಸ್‌ಗೂ ಅದು ಸೂಚನೆ ನೀಡಿದೆ.

3 ಯುದ್ಧ ನೌಕೆ ಸೇರ್ಪಡೆ; ಸೇನೆಗೆ ಆನೆಬಲ

ಮುಂಬೈ(ಪಿಟಿಐ): ಭಾರತೀಯ ನೌಕಾಪಡೆಯ ಬಲ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಲಿರುವ ಕ್ಷಿಪಣಿ ಧ್ವಂಸಕ ‘ಸೂರತ್’, ಯುದ್ಧನೌಕೆ ‘ನೀಲಗಿರಿ’ ಹಾಗೂ ಜಲಾಂತರ್ಗಾಮಿ ‘ವಾಗ್ಶೀರ್’ ನೌಕೆಗಳನ್ನು ಬುಧವಾರ ಇಲ್ಲಿನ ನೌಕಾ ನೆಲೆಯಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಸೇನೆಗೆ ಸೇರ್ಪಡೆ ಮಾಡಲಾಯಿತು.

ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮೂರು ಯುದ್ಧನೌಕೆಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಯಿತು. ನೌಕೆಗಳು ಹಲವು ವಿಶೇಷತೆಗಳನ್ನು ಒಳಗೊಂಡಿದ್ದು, ನೌಕಾಪಡೆಗೆ ಇವು ಸಾಕಷ್ಟು ಬಲ ತುಂಬಲಿವೆ.



ಇದು ಪ್ರಾಜೆಕ್ಟ್ 17 ಆಲ್ಫಾದ ಮೊದಲ ಶ್ರೇಣಿಯ ನೌಕೆ. ಇದು ಶತ್ರು ದೇಶಗಳ ರೇಡಾರ್ ಕಣ್ಣಿಗೆ ಸಿಗದು. ಕಡಲ ಕಣ್ಗಾವಲಿಗೆ ಅಗತ್ಯವಿರುವ ಸುಧಾರಿತ ವಿನ್ಯಾಸದ ರಕ್ಷಣಾ ಸಾಧನಗಳನ್ನು ಇದು ಒಳಗೊಂಡಿದೆ. ಶತ್ರು ನೌಕೆಗಳ ಮೇಲೆ ಅತಿ ಹತ್ತಿರದಿಂದ ದಾಳಿ ನಡೆಸುವ ಕೋವಿಗಳನ್ನು ಒಳಗೊಂಡಿದೆ.



ಪ್ರಾಜೆಕ್ಟ್-15 ಬ್ರಾವೋ ಶ್ರೇಣಿಯ ನಾಲ್ಕನೇ ಯುದ್ಧನೌಕೆ ಇದು. ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಧ್ವಂಸಗೊಳಿಸುತ್ತದೆ. ಇದು ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಗಳು ಮತ್ತು ಬರಾಕ್-8 ಮಧ್ಯಮ ಶ್ರೇಣಿಯ ಕ್ಷಿಪಣಿಗಳಿಂದ ಶಸ್ತ್ರಸಜ್ಜಿತವಾಗಿದೆ. ಜಲಾಂತರ್ಗಾಮಿ ನೌಕೆಗಳನ್ನು ಧ್ವಂಸಗೊಳಿಸುವ ದೇಶೀಯವಾಗಿ ಅಭಿವೃದ್ಧಿಪಡಿಸಿದ ಶಸ್ತ್ರಾಸ್ತ್ರಗಳು ಮತ್ತು ಸೆನ್ಸರ್‌ಗಳು, ಭಾರಿ ತೂಕದ ಕ್ಷಿಪಣಿಗಳು ಮತ್ತು ರಾಕೆಟ್ ಲಾಂಚರ್‌ಗಳನ್ನು ಇದಕ್ಕೆ ಅಳವಡಿಸಲಾಗಿದೆ.



ಪ್ರಧಾನಿ ಹೇಳಿದ್ದು...

- ಭಾರತವು ಪ್ರಮುಖ ನೌಕಾ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಮತ್ತು ಜಾಗತಿಕವಾಗಿ ವಿಶ್ವಾಸಾರ್ಹ ಹಾಗೂ ಜವಾಬ್ದಾರಿಯುತ ಪಾಲುದಾರನಾಗಿ ಗುರುತಿಸಲ್ಪಟ್ಟಿದೆ
- ಹಿಂದೂ ಮಹಾಸಾಗರ ಪ್ರದೇಶದಲ್ಲಿ, ಭಾರತವು ‘ಮೊದಲ ಪ್ರತಿಸ್ಪಂದಕ’ ಆಗಿ ಹೊರಹೊಮ್ಮಿದೆ. ನೂರಾರು ಜೀವಗಳನ್ನು ಉಳಿಸಿದೆ. ಸಾವಿರಾರು ಕೋಟಿ ಮೌಲ್ಯದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸರಕುಗಳಿಗೆ ಸುರಕ್ಷೆ ಒದಗಿಸುತ್ತಿದೆ
- ಭಾರತ ಯಾವಾಗಲೂ ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಮುಕ್ತಯಾನ, ಸುರಕ್ಷತೆ ಮತ್ತು ಎಲ್ಲರನ್ನೂ ಒಳಗೊಳ್ಳುವ ಪ್ರಗತಿ ಬೆಂಬಲಿಸುತ್ತದೆ
- ದೇಶದ ರಕ್ಷಣಾ ಉತ್ಪಾದನೆಯು ₹1.25 ಲಕ್ಷ ಕೋಟಿ ದಾಟಿದೆ. 100ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಮಾಡಲಾಗುತ್ತಿದೆ
- ಕಳೆದ ದಶಕದಲ್ಲಿ, ಸೇರ್ಪಡೆಗೊಂಡ 40 ನೌಕಾ ಹಡಗುಗಳಲ್ಲಿ 39 ನೌಕೆಗಳು ಭಾರತೀಯ ಹಡಗು ಕಟ್ಟೆಗಳಲ್ಲಿ ನಿರ್ಮಾಣವಾಗಿವೆ. ಇದು ‘ಮೇಕ್ ಇನ್ ಇಂಡಿಯಾ’ಗೆ ನಮ್ಮ ಬದ್ಧತೆಯ ಪ್ರತಿಬಿಂಬ
- ₹1.5 ಲಕ್ಷ ಕೋಟಿ ಮೌಲ್ಯದ 60 ಹಡಗುಗಳ ನಿರ್ಮಾಣ ಪ್ರಗತಿಯಲ್ಲಿವೆ. ಇವು ದೇಶದ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿ ಮೇಲೆ ಅಪಾರ ಪರಿಣಾಮ ಬೀರಿದೆ
- ವಿಜ್ಞಾನಿಗಳು 6,000 ಮೀಟರ್ ಆಳ ತಲುಪಲು ಸಾಧ್ಯವಾಗಿಸುವ ಸಮುದ್ರಯಾನ ಯೋಜನೆಯು, ಆಳ ಸಮುದ್ರದ ಸಂಪನ್ಮೂಲಗಳ ಸಾಮರ್ಥ್ಯ ಬಳಸಿಕೊಳ್ಳುವಲ್ಲಿ ದೇಶದ ಬದ್ಧತೆ ಪ್ರತಿಬಿಂಬಿಸುತ್ತದೆ



6ನೇ ಸ್ಕಾರ್ಪಿನ್ ಶ್ರೇಣಿಯ ಜಲಾಂತರ್ಗಾಮಿ ನೌಕೆ ಇದು. ಡೀಸೆಲ್– ವಿದ್ಯುತ್ ಚಾಲಿತವಾದುದು. ಹಡಗು ನಿಗ್ರಹ ಕ್ಷಿಪಣಿಗಳು ಮತ್ತು ಸುಧಾರಿತ ಸೋನಾರ್ ವ್ಯವಸ್ಥೆಗಳೊಂದಿಗೆ ಶಸ್ತ್ರಸಜ್ಜಿತವಾಗಿದೆ. ಕಡಲ ಕಣ್ಗಾವಲು, ವಿಶೇಷ ಕಾರ್ಯಾಚರಣೆಗಳು, ಗೂಢಚಾರಿಕೆ ಹಾಗೂ ಮೇಲ್ಮೈ ದಾಳಿ, ಜಲಾಂತರ್ಗಾಮಿ ನೌಕೆಯ ದಾಳಿಗಳನ್ನು ತಡೆಯುವ ವ್ಯವಸ್ಥೆ ಒಳಗೊಂಡಿದೆ.





ಪ್ರತೀಕಾ ರಾವಲ್

ರಾಜ್‌ಕೋಟ್‌ನಲ್ಲಿ ಬುಧವಾರ ಐರ್ಲೆಂಡ್ ಎದುರು ಏಕದಿನ ಕ್ರಿಕೆಟ್ ಸರಣಿ ಜಯಿಸಿದ ಭಾರತ ತಂಡವು ಟ್ರೋಫಿಯೊಂದಿಗೆ ಸಂಭ್ರಮಿಸಿತು– ಬಿಸಿಸಿಐ ಡಾಟ್ ಟಿವಿ

ಸ್ಮೃತಿ ಮಂದಾನ ಬಳಗಕ್ಕೆ ಸರಣಿ ಕಿರೀಟ: ಐರ್ಲೆಂಡ್‌ಗೆ ಸೋಲು

‘ಬೃಹತ್’ ದಾಖಲೆ ಬರೆದ ಭಾರತ

ರಾಜ್‌ಕೋಟ್ (ಪಿಟಿಐ): ಭಾರತದ ಮಹಿಳಾ ಕ್ರಿಕೆಟ್ ತಂಡವು ಬುಧವಾರ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಸಾಲು ಸಾಲು ದಾಖಲೆಗಳನ್ನು ನಿರ್ಮಿಸಿತು.

ಮಹಿಳೆಯರ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಗರಿಷ್ಠ ಮೊತ್ತ, ದೊಡ್ಡ ಅಂತರದ ಗೆಲುವು, ನಾಯಕಿ ಸ್ಮೃತಿ ಮಂದಾನ ಶರವೇಗದ ಶತಕ ಮತ್ತು ಆರಂಭಿಕ ಬ್ಯಾಟರ್ ಪ್ರತೀಕಾ ರಾವಲ್ ತಮ್ಮ ವೃತ್ತಿಜೀವನದ ಚೊಚ್ಚಲ ಶತಕದ ದಾಖಲೆಗಳು ಸಾಲು ಗಟ್ಟಿದವು. ಇದರೊಂದಿಗೆ ಭಾರತ ತಂಡವು 3–0ಯಿಂದ ಐರ್ಲೆಂಡ್ ಎದುರು ಕ್ಲೀನ್‌ಸ್ವೀಪ್ ಜಯ ಸಾಧಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ನಾಯಕಿ ಸ್ಮೃತಿ ಅವರು ಪ್ರತೀಕಾ ಜೊತೆಗೆ ಇನಿಂಗ್ಸ್ ಆರಂಭಿಸಿದರು. 80 ಎಸೆತಗಳಲ್ಲಿ 135 ರನ್ ಗಳಿಸಿದ ಸ್ಮೃತಿ ಅವರು ಪ್ರತೀಕಾ ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 233 ರನ್ ಕಲೆಹಾಕಿದರು. ಪ್ರತೀಕಾ 129 ಎಸೆತಗಳಲ್ಲಿ 154 ರನ್ ಗಳಿಸಿ ದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 435 ರನ್ ಗಳಿಸಿತು. ಇದಕ್ಕುತ್ತರವಾಗಿ ಪ್ರವಾಸಿ ಬಳಗವು 31.4 ಓವರ್‌ಗಳಲ್ಲಿ 131 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಆತಿಥೇಯ ತಂಡವು 304 ರನ್ ಜಯಸಾಧಿಸಿತು. ಭಾರತಕ್ಕೆ ಇದು ಬೃಹತ್ ಅಂತರದ ಗೆಲುವಿನ ದಾಖಲೆ.

ಭಾರತದ ಪುರುಷರ ಕ್ರಿಕೆಟ್ ತಂಡವು ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ 5 ವಿಕೆಟ್‌ಗಳಿಗೆ 418 ರನ್ ಗಳಿಸಿರುವುದು ಗರಿಷ್ಠ ಸಾಧನೆ. ಈ ಮೊತ್ತವನ್ನು ಭಾರತ ತಂಡವು 2011ರಲ್ಲಿ ಇಂದೋರ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಗಳಿಸಿತ್ತು. ಅದನ್ನು ಮೀರಿರುವ ಸ್ಮೃತಿ ಬಳಗವು ಸಾಧನೆ ಮೆರೆದಿದೆ.

ಇನಿಂಗ್ಸ್‌ನ ಮೊದಲ ಅರ್ಧ ಅವಧಿ (26.1 ಓವರ್‌ಗಳು) ಸ್ಮೃತಿ ಮತ್ತು ಪ್ರತೀಕಾ ಅವರದ್ದೇ ಪಾರಮ್ಯ. ಸ್ಮೃತಿ 12 ಬೌಂಡರಿ ಮತ್ತು 7 ಸಿಕ್ಸರ್ ಹೊಡೆದರೆ, ಪ್ರತೀಕಾ 20 ಬೌಂಡರಿ ಮತ್ತು ಒಂದು ಸಿಕ್ಸ್ ಗಳಿಸಿದರು.

ಸ್ಮೃತಿಗೆ ಇದು 10ನೇ ಶತಕ. ಕೇವಲ 70 ಎಸೆತಗಳಲ್ಲಿ ಮೂರಂಕಿ ಗಡಿ ಮುಟ್ಟಿದರು. ಇದರೊಂದಿಗೆ ತಮ್ಮ ‘ಗೆಳತಿ’ ಹರ್ಮನ್‌ಪ್ರೀತ್ ಕೌರ್ ಅವರು ಹೋದ ವರ್ಷ ದಕ್ಷಿಣ ಆಫ್ರಿಕಾ ಎದುರು 87 ಎಸೆತಗಳಲ್ಲಿ ಶತಕ ಪೂರೈಸಿದ ದಾಖಲೆಯನ್ನು ಮುರಿದರು.

ಇದರಿಂದಾಗಿ ಭಾರತ ವನಿತೆಯರ ಬಳಗವು ಇದೇ ಮೊದಲ ಬಾರಿಗೆ 400 ರನ್‌ಗಳಿಗಿಂತ ಹೆಚ್ಚು ಮೊತ್ತವನ್ನು ಪೇರಿಸಿತು. ಆಸ್ಟ್ರೇಲಿಯಾ ಮತ್ತು ನ್ಯೂಜಿ ಲೆಂಡ್ ನಂತರ ಈ ಸಾಧನೆ ಮಾಡಿದ ತಂಡವೂ ಆಯಿತು.

ಪ್ರತೀಕಾಗೆ ಇದು ಚೊಚ್ಚಲ ಶತಕ. ತಾಳ್ಮೆಯುತ ಆಟವಾಡಿದ ಪ್ರತೀಕಾ ತಮ್ಮ ನಾಯಕಿಗೆ ಉತ್ತಮ ಜೊತೆ ನೀಡಿದರು. 200 ರನ್‌ಗಳಿಗಿಂತ ಹೆಚ್ಚಿನ ಜೊತೆಯಾಟವಾಡಿದ ಭಾರತದ ನಾಲ್ಕನೇ ಜೋಡಿ ಎಂಬ ಹೆಗ್ಗಳಿಕೆ ಇವರದ್ದಾಯಿತು. ಇಬ್ಬರೂ ಆರಂಭಿಕ ಆಟಗಾರ್ತಿಯರು ಒಂದೇ ಪಂದ್ಯದಲ್ಲಿ ಶತಕ ಗಳಿಸಿದ ಸಾಧನೆ ಮಾಡಿದ ಮೂರನೇ ಜೋಡಿ ಇದು. 1999ರಲ್ಲಿ ಮಿಥಾಲಿ ರಾಜ್ ಮತ್ತು ರೇಷ್ಮಾ, 2017ರಲ್ಲಿ ದೀಪ್ತಿ ಮತ್ತು ಪೂನಂ ಮೊದಲೆರಡು ಸ್ಥಾನಗಳಲ್ಲಿದ್ದಾರೆ. ಈ ಕ್ಯಾಲೆಂಡರ್ ವರ್ಷದಲ್ಲಿ ಸ್ಮೃತಿಗೆ ಇದು ಮೊದಲ ಶತಕ.

27ನೇ ಓವರ್‌ನಲ್ಲಿ ಸ್ಮೃತಿ ಅವರು ಫ್ರೆಯಾ ಸಾರ್ಜೆಂಟ್ ಎಸೆತದಲ್ಲಿ ಔಟಾದರು. ರಿಚಾ ಘೋಷ್ (59; 42ಎ) ಕೂಡ ಬೀಸಾಟವಾಡಿದರು. ಪ್ರತೀಕಾ ಅವರೊಂದಿಗೆ 104 ರನ್ ಸೇರಿಸಿದರು.

ಗುರಿ ಬೆನ್ನಟ್ಟಿದ ಐರ್ಲೆಂಡ್ ತಂಡವು ದೀಪ್ತಿ ಶರ್ಮಾ (27ಕ್ಕೆ3) ಮತ್ತು ತನುಜಾ ಕನ್ವರ್ (31ಕ್ಕೆ2) ಅವರ ಬೌಲಿಂಗ್ ಮುಂದೆ ತತ್ತರಿಸಿತು.

ಸ್ಕೋರ್ ಕಾರ್ಡ್

ಭಾರತ: 50 ಓವರುಗಳಲ್ಲಿ 5 ವಿಕೆಟ್‌ಗೆ 435
ಪ್ರತೀಕಾ ಸಿ ಡೆಂಪ್ಸಿ ಬಿ ಸಾರ್ಜೆಂಟ್ 154 (129ಎ, 4x20, 6x1)ಮಂದಾನ ಸಿ ಕ್ಯಾನಿಂಗ್ ಬಿ ಪ್ರೆಂಡರ್‌ಗಾಸ್ಟ್ 135 (80ಎ, 4x12, 6x7) ರಿಚಾ ಬಿ ಕೆಲ್ಲಿ 59 (42ಎ, 4x10, 1x6) ತೇಜಲ್ ಸಿ ಡೆಲಾನಿ ಬಿ ಪ್ರೆಂಡರ್‌ಗಾಸ್ಟ್ 28 (25ಎ, 4x2)ಹರ್ಲೀನ್ ಸಿ ಪ್ರೆಂಡರ್‌ಗಾಸ್ಟ್ 15 (10ಎ, 4x3) ಜೆಮಿಮಾ ಔಟಾಗದೇ 4 (6ಎ)ದೀಪ್ತಿ ಔಟಾಗದೇ 11 (8ಎ, 4x1)
ಇತರೆ: 29 (ಬೈ 7, ಲೆಗ್‌ಬೈ 7, ವೈಡ್ 15)
ವಿಕೆಟ್ ಪತನ: 1–233 (ಸ್ಮೃತಿ ಮಂದಾನ, 26.4), 2–337 (ರಿಚಾ ಘೋಷ್, 38.4), 3–387 (ಪ್ರತೀಕಾ ರಾವಲ್, 43.6), 4–415 (ಹರ್ಲೀನ್ ಡಿಯೋಲ್ 47.1), 5–419 (ತೇಜಲ್ ಹಸಬ್ನಿಸ್, 48.1)
ಬೌಲಿಂಗ್: ಓರ್ಲಾ ಪ್ರೆಂಡರ್‌ಗಾಸ್ಟ್ 8–0–71–2; ಅವಾ ಕ್ಯಾನಿಂಗ್ 8–0–64–0; ಅರ್ಲೀನ್ ಕೆಲ್ಲಿ 7–0–66–1; ಫ್ರೇಯಾ ಸಾರ್ಜೆಂಟ್ 8–0–68–1; ಜಾರ್ಜಿನಾ ಡೆಂಪ್ಸಿ 10–0–65–1; ಅಲನಾ ಡಾಲ್ಜೆಲ್ 3–0–28–0; ಲಾರಾ ಡೆಲಾನಿ 6–0–59–0.

ಐರ್ಲೆಂಡ್: 31.4 ಓವರುಗಳಲ್ಲಿ 131
ಸಾರಾ ರನೌಟ್ (ದೀಪ್ತಿ/ ಘೋಷ್) 41 (44ಎ, 4x7) ಗ್ಯಾಬಿ ಎಲ್‌ಬಿಡಬ್ಲ್ಯು ಬಿ ತಿತಾಸ್ 1 (6ಎ) ಕ್ರಿಸ್ಟಿನಾ ಬಿ ಸಾತ್ಘರೆ 0 (4ಎ) ಓರ್ಲಾ ಬಿ ತನುಜಾ 36 (43, 4x6)ಡೆಲಾನಿ ಬಿ ದೀಪ್ತಿ 10 (20ಎ,4x1) ಲಿಯಾ ಸಿ ಮತ್ತು ಬಿ ದೀಪ್ತಿ 15 (25ಎ, 4x2) ಕೆಲ್ಲಿ ಸಿ ಸಾತ್ಘರೆ ಬಿ ಕನ್ವರ್ 2 (8ಎ)ಅವಾ ಬಿ ಮಿನ್ನುಮಣಿ 2 (21ಎ)ಜಾರ್ಜಿನಾ ರನೌಟ್ 0 (3ಎ) ಅಲನಾ ಔಟಾಗದೇ 5 (12ಎ)ಫ್ರೇಯಾ ಸಿ ಮಿನ್ನು ಬಿ ದೀಪ್ತಿ 1 (4ಎ)
ಇತರೆ: 18 (ಲೆಗ್‌ಬೈ 5, ವೈಡ್ 13)
ವಿಕೆಟ್ ಪತನ: 1–18 (ಗ್ಯಾಬಿ ಲೂಯಿಸ್, 2.3), 2–24 (ಕ್ರಿಸ್ಟಿನಾ ಕೌಲ್ಟರ್ ರೀಲಿ, 3.5), 3–88 (ಓರ್ಲಾ ಪ್ರೆಂಡೆರ್‌ಗಾಸ್ಟ್, 14.6), 4–100 (ಸಾರಾ ಫೋರ್ಬ್ಸ್, 17.3), 5–115 (ಲಾರಾ ಡೆಲಾನಿ, 22.3), 6–122 (ಲಿಯಾ ಪಾಲ್, 24.3), 7–122 (ಅರ್ಲೀನ್ ಕೆಲ್ಲಿ, 25.3), 8–122 (ಜಾರ್ಜಿನಾ ಡೆಂಪ್ಸಿ, 26.6), 9–128 (ಅವಾ ಕ್ಯಾನಿಂಗ್, 30.2), 10–131 (ಫ್ರೇಯಾ ಸಾರ್ಜೆಂಟ್, 31.4).
ಬೌಲಿಂಗ್: ತಿತಾಸ್ ಸಾಧು 4–1–22–1; ಸಯಾಲಿ ಸಾತ್ಘರೆ 4–0–24–1; ತನುಜಾ ಕನ್ವರ್ 9–2–31–2; ದೀಪ್ತಿ ಶರ್ಮಾ 8.4–2–27–3; ಮಿನ್ನು ಮಣಿ 6–0–22–1.
ಪಂದ್ಯದ ಆಟಗಾರ್ತಿ: ಪ್ರತೀಕಾ ರಾವಲ್

ಫಲಿತಾಂಶ: ಭಾರತ ವನಿತೆಯರಿಗೆ 3–0 ಸರಣಿ ಗೆಲುವು

ಫೈನಲ್‌ಗೆ ಲಗ್ಗೆ ಹಾಕಿದ ಕರ್ನಾಟಕ

ವಿಜಯ್ ಹಜಾರೆ ಟ್ರೋಫಿ: ಅಭಿಲಾಷ್ ಶೆಟ್ಟಿಗೆ 4 ವಿಕೆಟ್, ದೇವದತ್ತ, ಸ್ಮರಣ್ ಅರ್ಧಶತಕ

ವಡೋದರಾ (ಪಿಟಿಐ): ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತು ನವಪ್ರತಿಭೆ ಸ್ಮರಣ್ ರವಿಚಂದ್ರನ್ ಅವರ ಅಮೋಘ ಅರ್ಧಶತಕಗಳ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿತು. ಇದರೊಂದಿಗೆ ತಂಡಕ್ಕೆ ಐದನೇ ಬಾರಿ ಪ್ರಶಸ್ತಿ ಗೆಲ್ಲುವ ಕನಸು ಗರಿಗೆದರಿದೆ.

ಬುಧವಾರ ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು 5 ವಿಕೆಟ್‌ಗಳಿಂದ ಹೋದ ಸಲದ ಚಾಂಪಿಯನ್ ಹರಿಯಾಣ ತಂಡವನ್ನು ಮಣಿಸಿತು.

ಕರ್ನಾಟಕ ತಂಡವು 238 ರನ್‌ಗಳ ಸ್ಪರ್ಧಾತ್ಮಕ ಗುರಿಯನ್ನು ಬೆನ್ನಟ್ಟಿತು. ಆದರೆ ಅನ್ಶುಲ್ ಕಾಂಭೋಜ್ ಹಾಕಿದ ಮೊದಲ ಓವರ್‌ನಲ್ಲಿಯೇ ಕರ್ನಾಟಕ ತಂಡದ ನಾಯಕ ಮಯಂಕ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಈ ಟೂರ್ನಿಯಲ್ಲಿ 4 ಶತಕಗಳ ಸಹಿತ 619 ರನ್ ಸೇರಿಸಿರುವ ಮಯಂಕ್ ಇಲ್ಲಿ ಖಾತೆ ತೆರೆಯದೇ ಮರಳಿದರು.

ಆದರೆ ಕ್ರೀಸ್‌ನಲ್ಲಿದ್ದ ಇನ್ನೊಬ್ಬ ಆರಂಭಿಕ ಬ್ಯಾಟರ್ ದೇವದತ್ತ ಶಾಂತಚಿತ್ತದಿಂದ ಆಟ ಮುಂದುವರಿಸಿದರು. ದೇವದತ್ತ (86; 113ಎ, 4X8, 6X1) ಮತ್ತು ಕೆ.ವಿ. ಅನೀಶ್ (22; 47ಎ, 4X1, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿದರು. 16ನೇ ಓವರ್‌ನಲ್ಲಿ ಬೌಲರ್ ಅಮಿತ್ ರಾಣಾ ಅವರು ಅನೀಶ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಆದರೆ ಕ್ರೀಸ್‌ನಲ್ಲಿ ಗಟ್ಟಿಯಾಗಿ ನಿಂತಿದ್ದ ದೇವದತ್ತ ಅವರೊಂದಿಗೆ ಸೇರಿದ ಸ್ಮರಣ್ (76; 94ಎ,4X3, 6X3) ತಂಡದ ಆತಂಕವನ್ನು ದೂರಗೊಳಿಸಿದರು. 3ನೇ ವಿಕೆಟ್ ಜೊತೆಯಾಟದಲ್ಲಿ 128 ರನ್ ಸೇರಿಸಿ ತಂಡವನ್ನು ಗೆಲುವಿನ ಸನಿಹಕ್ಕೆ ತಂದರು.

ಈ ಹಂತದಲ್ಲಿ ದೇವದತ್ತ ಪಡಿಕ್ಕಲ್ ಅವರ ವಿಕೆಟ್ ಗಳಿಸಿದ ಸ್ಪಿನ್ನರ್ ನಿಶಾಂತ್ ಸಿಂಧು ಜೊತೆಯಾಟ ಮುರಿದರು. ಕ್ರೀಸ್‌ಗೆ ಬಂದ ಕೆ.ಎಲ್. ಶ್ರೀಜಿತ್ (3 ರನ್) ಅವರನ್ನು ಪಾರ್ಥ್ ವತ್ಸ ಅವರು ಪೆವಿಲಿಯನ್‌ಗೆ ಕಳಿಸಿದರು.

ಈ ವೇಳೆ ಹರಿಯಾಣ ತಿರುಗೇಟು ನೀಡುವ ಉತ್ಸಾಹದಲ್ಲಿತ್ತು. ಆದರೆ ಸ್ಮರಣ್ ಮತ್ತು ಶ್ರೇಯಸ್ ಗೋಪಾಲ್ (ಔಟಾಗದೆ 23; 20ಎ) ಅದಕ್ಕೆ ಆಸ್ಪದ ಕೊಡಲಿಲ್ಲ. 5ನೇ ವಿಕೆಟ್ ಜೊತೆಯಾಟದಲ್ಲಿ 26 ರನ್ ಸೇರಿಸಿದರು. ಇದರಿಂದಾಗಿ ಗೆಲುವು ಕೈಗೂಡಿತು.

ಮುಖ್ಯಾಂಶಗಳು
- ಕರ್ನಾಟಕಕ್ಕೆ ಗರಿಗೆದರಿದ ಐದನೇ ಪ್ರಶಸ್ತಿಯ ಕನಸು
- ಪ್ರಸಿದ್ಧ ಕೃಷ್ಣ, ಶ್ರೇಯಸ್ ಗೋಪಾಲ್‌ಗೆ ತಲಾ 2 ವಿಕೆಟ್
- ಜ.18ರಂದು ನಡೆಯಲಿರುವ ಫೈನಲ್



ದೇವದತ್ ಪಡ್ಡಿಕಲ್

ಅಭಿಲಾಷ್ ಶೆಟ್ಟಿ ಮಿಂಚು: ಕೋತಂಬಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಎಡಗೈ ವೇಗಿ ಅಭಿಲಾಷ್ ಶೆಟ್ಟಿ (34ಕ್ಕೆ4) ಅವರ ದಾಳಿಯ ಮುಂದೆ ಹರಿಯಾಣದ ಪ್ರಮುಖ ಬ್ಯಾಟರ್‌ಗಳು ಶರಣಾದರು. ಅನುಭವಿ ಪ್ರಸಿದ್ಧ ಕೃಷ್ಣ, ಸ್ಪಿನ್ನರ್ ಶ್ರೇಯಸ್ ಗೋಪಾಲ್ ತಲಾ ಎರಡು ವಿಕೆಟ್ ಮತ್ತು ಹಾರ್ದಿಕ್ ರಾಜ್ 1 ವಿಕೆಟ್ ಗಳಿಸಿದರು.

ಗುರುವಾರ ಎರಡನೇ ಸೆಮಿಫೈನಲ್‌ನಲ್ಲಿ ವಿದರ್ಭ ಮತ್ತು ಮಹಾರಾಷ್ಟ್ರ ತಂಡಗಳು ಮುಖಾಮುಖಿಯಾಗಲಿವೆ. ಇದರಲ್ಲಿ ಗೆದ್ದ ತಂಡವು 18ರಂದು ನಡೆಯುವ ಫೈನಲ್‌ನಲ್ಲಿ ಕರ್ನಾಟಕವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಹರಿಯಾಣ: 50 ಓವರ್‌ಗಳಲ್ಲಿ 9ಕ್ಕೆ237 (ಹಿಮಾಂಶು ರಾಣಾ 44, ಅಂಕಿತ್ ಕುಮಾರ್ 48, ದಿನೇಶ್ ಬಾನಾ 20, ರಾಹುಲ್ ತೆವಾಟಿಯಾ 21, ಅನುಜ್ ತಕ್ರಾಲ್ 23, ಪ್ರಸಿದ್ಧ ಕೃಷ್ಣ 40ಕ್ಕೆ2, ಅಭಿಲಾಷ್ ಶೆಟ್ಟಿ 34ಕ್ಕೆ4)

ಕರ್ನಾಟಕ: 47.2 ಓವರ್‌ಗಳಲ್ಲಿ 5ಕ್ಕೆ238 (ದೇವದತ್ತ ಪಡಿಕ್ಕಲ್ 86, ಕೆ.ವಿ. ಅನೀಶ್ 22, ಸ್ಮರಣ್ ರವಿಚಂದ್ರನ್ 76, ಶ್ರೇಯಸ್ ಗೋಪಾಲ್ ಔಟಾಗದೆ 23, ನಿಶಾಂತ್ ಸಿಂಧು 47ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 5 ವಿಕೆಟ್‌ಗಳ ಜಯ.

ಪಂದ್ಯ ಶ್ರೇಷ್ಠ: ದೇವದತ್ತ ಪಡಿಕ್ಕಲ್.

ಬ್ಯಾಡ್ಮಿಂಟನ್: ಅನುಪಮಾಗೆ ಮುನ್ನಡೆ

ನವದೆಹಲಿ (ಪಿಟಿಐ): ಎಚ್.ಎಸ್. ಪ್ರಣಯ್ ಮತ್ತು ಪ್ರಿಯಾಂಶು ರಾಜಾವತ್ ಅವರು ಇಂಡಿಯಾ ಓಪನ್ 750 ಬ್ಯಾಡ್ಮಿಂಟನ್ ಟೂರ್ನಿ ಸಿಂಗಲ್ಸ್ ಪಂದ್ಯಗಳಲ್ಲಿ ಎದುರಾಳಿಗಳಿಗೆ ತೀವ್ರ ಹೋರಾಟ ನೀಡಿದರೂ ಮೊದಲ ಸುತ್ತಿನಲ್ಲೇ ಹೊರಬೀಳಬೇಕಾಯಿತು. ಆದರೆ ಮಹಿಳೆಯರ ವಿಭಾಗದಲ್ಲಿ, ಮಾಜಿ ರಾಷ್ಟ್ರೀಯ ಚಾಂಪಿಯನ್ ಅನುಪಮಾ ಉಪಾಧ್ಯಾಯ ನೇರ ಆಟಗಳ ಗೆಲುವಿನೊಡನೆ ಎರಡನೇ ಸುತ್ತು ತಲುಪಿದರು.

ಪ್ರಿಯಾಂಶು ರಾಜಾವತ್ ದಿಟ್ಟ ಹೋರಾಟ ತೋರಿದರೂ ಅಂತಿಮವಾಗಿ 16–21, 22–20, 13–11ರಲ್ಲಿ ವಿಶ್ವದ ಏಳನೇ ಕ್ರಮಾಂಕದ ಆಟಗಾರ, ಜಪಾನ್‌ನ ಕೊಡಯಿ ನರವೋಕಾ ಅವರೆದುರು ಸೋಲು ಅನುಭವಿಸಬೇಕಾಯಿತು.

ಒಂದು ಗಂಟೆ 22 ನಿಮಿಷಗಳವರೆಗೆ ಈ ಪಂದ್ಯ ನಡೆಯಿತು. ಮಹಿಳೆಯರ ವಿಭಾಗದಲ್ಲಿ ಅನುಪಮಾ 21–17, 21–18 ರಿಂದ ಸ್ವದೇಶದ ಆಟಗಾರ್ತಿ ರಕ್ಷಿತಾ ಶ್ರೀ ವಿರುದ್ಧ ನೇರ ಗೇಮ್‌ಗಳಿಂದ ಜಯಗಳಿಸಿ ಎರಡನೇ ಸುತ್ತನ್ನು ತಲುಪಿದರು.



ಭಾರತ ತಂಡ (ನೀಲಿ ಪೋಷಾಕು) ಬುಧವಾರ ವಿಶ್ವಕಪ್ ಕೊಕ್ಕೊ ಟೂರ್ನಿ ‘ಎ’ ಗುಂಪಿನ ಪಂದ್ಯದಲ್ಲಿ ಪೆರು ವಿರುದ್ಧ ಆಡಿತು.

ಕೊಕ್ಕೊ: ಕ್ವಾರ್ಟರ್‌ಗೆ ಭಾರತ ತಂಡ

ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾ ತಂಡದ ಮೇಲೆ ಮಂಗಳವಾರ 175–18ರಲ್ಲಿ ಲೀಲಾಜಾಲವಾಗಿ ಜಯಗಳಿಸಿದ್ದ ಹುರುಪನ್ನು ಮುಂದುವರಿಸಿದ ಫೇವರಿಟ್ ಭಾರತ ಮಹಿಳಾ ತಂಡ ವಿಶ್ವಕಪ್ ಕೊಕ್ಕೊ ಟೂರ್ನಿಯ ಪಂದ್ಯದಲ್ಲಿ ಬುಧವಾರ ಇರಾನ್ ತಂಡದ ಮೇಲೆ 100–16 ಅಂತರದಲ್ಲಿ ಅತ್ಯಮೋಘ ಗೆಲುವನ್ನು ಪಡೆಯಿತು; ಮಾತ್ರವಲ್ಲ ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಕೋರ್ ಹೇಳುವಂತೆ ಪಂದ್ಯ ಏಕಪಕ್ಷೀಯವಾಯಿತು. ‘ಎ’ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಆಕ್ರಮಣಕಾರಿಯಾಗಿ ಪಂದ್ಯ ಆರಂಭಿಸಿದ ಆತಿಥೇಯರು ಕೇವಲ 33 ಸೆಕೆಂಡುಗಳಲ್ಲಿ ಅಂಕಣದಿಂದ ಇರಾನಿನ ಮೊದಲ ಬ್ಯಾಚ್ ಆಟಗಾರ್ತಿಯರನ್ನು ಖಾಲಿ ಮಾಡಿಸಿತು.

ಅಶ್ವಿನಿ ದಾಳಿಯ ಮುಂಚೂಣಿಯಲ್ಲಿದ್ದರೆ, ಮೀನು ಅಮೋಘ ಫಾರ್ಮ್ ಮುಂದುವರಿಸಿ ಹಲವು ‘ಟಚ್ ಪಾಯಿಂಟ್ಸ್’ ಕಲೆಹಾಕಿ ಭಾರತ ತಂಡ ಒಂದನೇ ಸರದಿಯ ನಂತರ 50 ಪಾಯಿಂಟ್ ಕೂಡಿಹಾಕಲು ನೆರವಾದರು. ಉಳಿದ ಮೂರು ಸರದಿಗಳಲ್ಲೂ ಇದೇ ರೀತಿಯ ಆಟ ಮುಂದುವರಿಯಿತು.

ವಝೀರ್ ನಿರ್ಮಲಾ ಅವರ ಕೌಶಲ, ನಾಯಕಿ ಪ್ರಿಯಾಂಕ ಇಂಗ್ಳೆ, ನಿರ್ಮಲಾ ಭಾಟಿ ಮತ್ತು ನಸ್ರೀನ್ ಅವರ ಉಪಯುಕ್ತ ಕೊಡುಗೆಗಳಿಂದ ಭಾರತ ತಂಡ ಗೆಲುವಿನ ಅಂತರವನ್ನು ಹಿಗ್ಗಿಸುತ್ತಾ ಹೋಯಿತು.

ಪಂದ್ಯದ ‘ಉತ್ತಮ ದಾಳಿಗಾರ್ತಿ’ಯಾಗಿ ಮೊಬಿನಾ, ರಕ್ಷಣೆ ಆಟಗಾರ್ತಿಯಾಗಿ ಮೀನು, ಪಂದ್ಯದ ಆಟಗಾರ್ತಿಯಾಗಿ ಪ್ರಿಯಾಂಕ ಇಂಗ್ಳೆ ವೈಯಕ್ತಿಕ ಪುರಸ್ಕಾರಗಳನ್ನು ಪಡೆದರು.

ಇನ್ನೊಂದು ಪಂದ್ಯದಲ್ಲಿ ನೇಪಾಳ 134–8 ರಿಂದ ಬ್ರೆಜಿಲ್ ತಂಡವನ್ನು ಸೋಲಿಸಿತು.

ಪುರುಷರ ತಂಡಕ್ಕೂ ಜಯ: ಪುರುಷರ ವಿಭಾಗದಲ್ಲಿ ಭಾರತ 70–38 ರಿಂದ ಪೆರು ತಂಡವನ್ನು ಸುಲಭವಾಗಿ ಸೋಲಿಸಿ ಯಶಸ್ಸಿನ ಓಟ ಮುಂದುವರಿಸಿತು. ಉತ್ತಮ ಹೋರಾಟದ ಇನ್ನೊಂದು ಪಂದ್ಯದಲ್ಲಿ ದಕ್ಷಿಣ ಕೊರಿಯಾ 50–44 ರಿಂದ ಮಲೇಷ್ಯಾ ತಂಡವನ್ನು ಮಣಿಸಿತು.

ರಣಜಿ ಆಡಲಿರುವ ಯಶಸ್ವಿ ಜೈಸ್ವಾಲ್



ಜೈಸ್ವಾಲ್

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಮುಂಬೈ ತಂಡಕ್ಕೆ ಮರಳಿದ್ದಾರೆ. ಅವರು ಮುಂಬರುವ ರಣಜಿ ಪಂದ್ಯದಲ್ಲಿ ಕಣಕ್ಕಿಳಿಯುವುದು ಖಚಿತವಾಗಿದೆ.

ಬಾಂದ್ರಾ –ಕುರ್ಲಾ ಕಾಂಪ್ಲೆಕ್ಸ್ ಮೈದಾನದಲ್ಲಿ ಜೈಸ್ವಾಲ್ ಅವರು ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು. ಈ ಸಂದರ್ಭದಲ್ಲಿ ಅಲ್ಲಿದ್ದ ಮುಂಬೈ ತಂಡದ ನಾಯಕ ಅಜಿಂಕ್ಯ ರಹಾನೆ ಅವರೂ ಬ್ಯಾಟಿಂಗ್ ತಾಲೀಮು ನಡೆಸಿದರು. ಸುಂದರವಾದ ಫ್ಲಿಕ್‌ಗಳನ್ನು ಆಡಿ ಗಮನ ಸೆಳೆದರು. ಆಲ್‌ರೌಂಡರ್ ಶಿವಂ ದುಬೆ ಅವರು ವೇಗದ ಮತ್ತು ಸ್ಪಿನ್ ಬೌಲರ್‌ಗಳ ಎಸೆತಗಳನ್ನು ಸಿಕ್ಸರ್, ಬೌಂಡರಿ ದಾಟಿಸುವಲ್ಲಿ ಮಗ್ನರಾಗಿದ್ದರು.

ಮಂಗಳವಾರ ರೋಹಿತ್ ಶರ್ಮಾ ಅವರು ಕೂಡ ಮುಂಬೈ ತಂಡದೊಂದಿಗೆ ನೆಟ್ಸ್ ಅಭ್ಯಾಸ ಮಾಡಿದ್ದರು. ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಅಭ್ಯಾಸದಲ್ಲಿ ಅಜಿಂಕ್ಯ ರಹಾನೆ ಮತ್ತು ಉಳಿದ ಆಟಗಾರರೂ ಪಾಲ್ಗೊಂಡಿದ್ದರು.

ಆದರೆ ರೋಹಿತ್ ಅವರು ಇದೇ 23ರಿಂದ ಜಮ್ಮು–ಕಾಶ್ಮೀರ ಎದುರು ನಡೆಯಲಿರುವ ರಣಜಿ ಪಂದ್ಯದಲ್ಲಿ ಆಡುವ ಕುರಿತು ಖಚಿತ ಮಾಹಿತಿ ಇಲ್ಲ.

ಟೆಸ್ಟ್ ಕ್ರಿಕೆಟ್‌ನಲ್ಲಿ ಸತತ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ 37 ವರ್ಷದ ರೋಹಿತ್ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ.

ವಾಂಖೆಡೆ: ಮೊದಲ ಪಂದ್ಯ ಆಡಿದ್ದ ಎಂಟು ಮಂದಿಗೆ ₹ 10 ಲಕ್ಷ

ಮುಂಬೈ (ಪಿಟಿಐ): ವಾಂಖೆಡೆ ಕ್ರೀಡಾಂಗಣದಲ್ಲಿ ಮೊತ್ತಮೊದಲ ಪ್ರಥಮ ದರ್ಜೆ ಪಂದ್ಯ ಆಡಿದ ಆಟಗಾರರಲ್ಲಿ ಈಗ ಇರುವ ಎಂಟು ಮಂದಿಗೆ ಮುಂಬೈ ಕ್ರಿಕೆಟ್ ಸಂಸ್ಥೆ ತಲಾ 10 ಲಕ್ಷ ಪುರಸ್ಕಾರ ನೀಡುವುದಾಗಿ ಬುಧವಾರ ಪ್ರಕಟಿಸಿದೆ.

1974–75ನೇ ಸಾಲಿನಲ್ಲಿ ಆಡಿದ್ದ ಆಗಿನ ಬಾಂಬೆ ತಂಡದ ಈ ಎಂಟು ಆಟಗಾರರೆಂದರೆ– ಸುನೀಲ್ ಗಾವಸ್ಕರ್, ಕರ್ಸನ್ ಘಾವ್ರಿ, ಪದ್ಮಾಕರ್ ಶಿವಾಲ್ಕರ್, ಫರೂಕ್ ಎಂಜಿನಿಯರ್, ಅಜಿತ್ ಪೈ, ಮಿಲಿಂದ್ ರೇಗೆ, ಅಬ್ದುಲ್ ಇಸ್ಮಾಯಿಲ್ ಮತ್ತು ರಾಕೇಶ್ ಟಂಡನ್.ಮೊದಲ ಪಂದ್ಯ ಆಡಿದ ಆಟಗಾರರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಎಂಸಿಎ ಕಾರ್ಯದರ್ಶಿ ಅಭಯ್ ಹಡಪ್ ಈ ಘೋಷಣೆ ಮಾಡಿದರು.

ಕೊಡಗು ಎಫ್‌ಸಿ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಎಫ್‌ಸಿ ತಂಡ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಬುಧವಾರ ಪರಿಕ್ರಮ ಎಫ್‌ಸಿ ತಂಡವನ್ನು 3–0 ಗೋಲುಗಳಿಂದ ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡದ ಸುಧಾಕರ್ ರಂಜನ್ (14ನೇ ನಿ.), ಆದಿತ್ಯ ಪ್ರತಾಪ್ ಸಿಂಗ್ ರಾಥೋರ್ (73ನೇ ನಿ.). ಮುಸಾಮಿಯಾನ್ (90ನೇ ನಿ.) ಗೋಲುಗಳನ್ನು ಬಾರಿಸಿದರು.

ಸಮಬಲದ ಹೋರಾಟ ಕಂಡ ಎರಡನೇ ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ, ಸ್ಪೋರ್ಟಿಂಗ್ ಬೆಂಗಳೂರು ಜೊತೆ ಗೋಲಿಲ್ಲದೇ ಡ್ರಾ ಮಾಡಿಕೊಂಡಿತು.

ರೆಬೆಲ್ಸ್ ಎಫ್‌ಸಿ ಮತ್ತೊಂದು ಪಂದ್ಯದಲ್ಲಿ 1–0 ಗೋಲಿನಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.



ಕೊಡಗು ತಂಡದ ನಿಶಾಂತ್ ಎನ್ ಗೋಲ್‌ಕೀಪರ್ ಚೆಂಡನ್ನು ತಡೆದ ಕ್ಷಣ ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಆಸ್ಟ್ರೇಲಿಯನ್ ಓಪನ್ ಟೆನಿಸ್: ಎರಡನೇ ಸುತ್ತಿನಲ್ಲಿ ಹೊರಬಿದ್ದ ಕಳೆದ ಬಾರಿಯ ರನ್ನರ್ ಅಪ್ ಝೆಂಗ್

ಗೆಲುವಿನ ಹಾದಿಯಲ್ಲಿ ಜೊಕೊ ದಾಖಲೆ

ಮೆಲ್ಬರ್ನ್ (ಎಎಫ್‌ಪಿ): ಅನುಭವಿ ನೊವಾಕ್ ಜೊಕೊವಿಚ್ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ಹೋಗುವ ಹಾದಿಯಲ್ಲಿ ಗ್ರ್ಯಾನ್‌ಸ್ಲಾಮ್ ಇತಿಹಾಸದಲ್ಲಿ ದಾಖಲೆಯೊಂದನ್ನು ಸ್ಥಾಪಿಸಿದರು. ಆದರೆ ಕಳೆದ ಬಾರಿಯ ಮಹಿಳಾ ವಿಭಾಗದ ರನ್ನರ್ ಅಪ್ ಝೆಂಗ್ ಕ್ವಿನ್ವೆನ್ ಅವರು ಬುಧವಾರ ಹೊರಬಿದ್ದಿದ್ದು ಈವರೆಗಿನ ದೊಡ್ಡ ಅನಿರೀಕ್ಷಿತ ಫಲಿತಾಂಶವೆನಿಸಿತು.

ಹಾಲಿ ಚಾಪಿಯನ್ ಅರಿನಾ ಸಬಲೆಂಕಾ, ಉತ್ತಮ ಲಯದಲ್ಲಿರುವ ಕೊಕೊ ಗಾಫ್, ಮಾಜಿ ಚಾಂಪಿಯನ್ ನವೊಮಿ ಒಸಾಕಾ ಮತ್ತು ಪುರುಷರ ವಿಭಾಗದಲ್ಲಿ ಕಾರ್ಲೋಸ್ ಅಲ್ಕರಾಜ್ ಸುಲಭ ಗೆಲುವುಗಳನ್ನು ದಾಖಲಿಸಿದರು. ನಾಲ್ಕನೇ ದಿನ ಕೆಲಕಾಲ ಮಳೆಯಿಂದ ಪಂದ್ಯಗಳಿಗೆ ಅಡ್ಡಿಯಾಯಿತು.

ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಕೂಡ ಮೂರನೇ ಸುತ್ತಿಗೆ ಮುನ್ನಡೆದರು. ಆದರೆ ಆರನೇ ಶ್ರೇಯಾಂಕದ ಕ್ಯಾಸ್ಪರ್ ರುಡ್ (ನಾರ್ವೆ) ನಾಲ್ಕು ಸೆಟ್‌ಗಳ ಪಂದ್ಯದಲ್ಲಿ ಹದಿಹರೆಯದ ಆಟಗಾರ ಜಾಕುಬ್ ಮೆನ್ಸಿಕ್ ಅವರಿಗೆ ಮಣಿದರು. ಪುರುಷರ ಸಿಂಗಲ್ಸ್‌ನಲ್ಲಿ ಈವರೆಗೆ ಹೊರಬಿದ್ದ ಅತಿಹೆಚ್ಚಿನ ಶ್ರೇಯಾಂಕ ಆಟಗಾರ ಎನಿಸಿದರು.

ಜೋಕೊ ದಾಖಲೆ: ರಾಡ್‌ಲೇವರ್ ಅರೇನಾದಲ್ಲಿ ಜೊಕೊವಿಚ್ ಸತತ ಎರಡನೇ ಬಾರಿ ನಾಲ್ಕು ಸೆಟ್‌ಗಳ ಪಂದ್ಯ ಆಡಿ, ಪೋರ್ಚುಗಲ್‌ನ ಕ್ವಾಲಿಫೈರ್ ಜೇಮಿ ಫರಿಯಾ ಅವರನ್ನು 6–1, 6–7 (4–7), 6–3, 6–2 ರಿಂದ ಹಿಮ್ಮೆಟ್ಟಿಸಿದರು.

ಇದು ಜೊಕೊವಿಚ್ ಅವರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 430ನೇ ಪಂದ್ಯ. ಗ್ರ್ಯಾನ್‌ಸ್ಲಾಮ್ ಇತಿಹಾಸದ ಓಪನ್ ಯುಗದಲ್ಲಿ ಆಟಗಾರನೊಬ್ಬ ಆಡಿದ ಗರಿಷ್ಠ ಪಂದ್ಯ ಇದು. ಅವರು ರೋಜರ್ ಫೆಡರರ್ (429 ಪಂದ್ಯ) ಅವರನ್ನು ಹಿಂದೆಹಾಕಿದರು. ಸೆರೆನಾ ವಿಲಿಯಮ್ಸ್ (423) ನಂತರದ ಸ್ಥಾನದಲ್ಲಿದ್ದಾರೆ.

ಸರ್ಬಿಯಾದ ತಾರೆ ಇಲ್ಲಿ 11ನೇ ಬಾರಿ ಚಾಂಪಿಯನ್ ಆಗುವ ಪ್ರಯತ್ನದಲ್ಲಿದ್ದಾರೆ. ಈ ಬಾರಿ ಗೆದ್ದರೆ ಅದು 37 ವರ್ಷ ವಯಸ್ಸಿನ ದಿಗ್ಗಜ ಆಟಗಾರನಿಗೆ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟವೂ ಆಗಲಿದೆ. ಅವರು ಮುಂದಿನ ಸುತ್ತಿನಲ್ಲಿ 26ನೇ ಶ್ರೇಯಾಂಕದ ಥಾಮಸ್ ಮಚಾಕ್ (ಝೆಕ್ ರಿಪಬ್ಲಿಕ್) ಅವರನ್ನು ಎದುರಿಸಲಿದ್ದಾರೆ.

ಮೂರನೇ ಶ್ರೇಯಾಂಕದ ಅಲ್ಕರಾಜ್ 6–0, 6–1, 6–4 ರಿಂದ ಜಪಾನ್‌ನ ಯೋಶಿಹಿಟೊ ನಿಶಿಯೊಕ ಅವರನ್ನು ಸದೆಬಡಿದರು.

ಗ್ರ್ಯಾನ್‌ಸ್ಲಾಮ್‌ನಲ್ಲಿ ಐದನೇ ಪ್ರಶಸ್ತಿಯ ಬೆನ್ನತ್ತಿರುವ ಸ್ಪೇನ್‌ನ ಆಟಗಾರ, ಮೆಲ್ಬರ್ನ್‌ನಲ್ಲಿ ಇದುವರೆಗೆ ಎಂಟರ ಘಟ್ಟ ದಾಟಿಲ್ಲ.

ಎರಡನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ನೇರ ಸೆಟ್‌ಗಳಿಂದ ಸ್ಪೇನ್‌ನ ಪೆಡ್ರೊ ಮಾರ್ಟಿನೆಝ್ ಅವರನ್ನು ಮಣಿಸಿದರು.

ರುಡ್ ನಿರ್ಗಮನ: 19 ವರ್ಷ ವಯಸ್ಸಿನ ಯಾಕುಬ್ ಮೆನ್ಸಿಕ್ ಎರಡನೇ ಸುತ್ತಿನ ಪಂದ್ಯದಲ್ಲಿ 6–2, 3–6,6–4, 6–4ರಿಂದ ರುಡ್ ಅವರನ್ನು ಹೊರದೂಡಿದರು. ಬ್ರೆಜಿಲಿನ ಯುವ ಆಟಗಾರ ಜೊವೊ ಫೋನ್ಸೆಕಾ ಮಂಗಳವಾರ ಇನ್ನೊಬ್ಬ ಶ್ರೇಯಾಂಕ ಆಟಗಾರ ಆಂದ್ರೆ ರುಬ್ಲೆವ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದರು.

ಝೆಂಗ್‌ಗೆ ಸೋಲು: ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ ಅವರನ್ನು ವಿಶ್ವ ಕ್ರಮಾಂಕದಲ್ಲಿ 97ನೇ ಸ್ಥಾನದಲ್ಲಿರುವ ಜರ್ಮನಿಯ ಲಾರಾ ಸಿಂಗಲ್ಸ್‌ನಲ್ಲಿ ಆಡುತ್ತಿರುವ ಹಿರಿಯ ಆಟಗಾರ್ತಿ. ಸೀಜಿಮಂಡ್ 7–6 (7–3), 6–3 ರಿಂದ ಸೋಲಿಸಿದರು. ಲಾರಾ ಅವರು ಸಿಂಗಲ್ಸ್‌ನಲ್ಲಿ ಆಡುತ್ತಿರುವ ಎರಡನೇ ಅತಿ ಹಿರಿಯ ಆಟಗಾರ್ತಿ.

ಸಬಲೆಂಕಾ 6–3, 7–5 ರಿಂದ ಸ್ಪೇನ್‌ನ ಜೆಸಿಕಾ ಮನೀರೊ ವಿರುದ್ಧ ಜಯಗಳಿಸಿದರೆ, ಜಪಾನ್‌ನ ನವೊಮಿ ಒಸಾಕಾ 1–6, 6–1, 6–3 ರಿಂದ ಕರೊಲಿನಾ ಮುಚೊವಾ ಅವರನ್ನು ಹಿಮ್ಮೆಟ್ಟಿಸಿದರು. ಈ ಋತುವಿನಲ್ಲಿ ಅಮೋಘವಾಗಿ ಆಡುತ್ತಿರುವ, ವಿಶ್ವದ ಮೂರನೇ ಕ್ರಮಾಂಕದ ಆಟಗಾರ್ತಿ ಕೊಕೊ ಗಾಫ್ 6–3, 7–5 ರಿಂದ ಬ್ರಿಟನ್‌ನ ಜೋಡಿ ಬುರಗೆ ವಿರುದ್ಧ ಗೆದ್ದು ಮೂರನೇ ಸುತ್ತಿಗೆ ದಾಪುಗಾಲಿಟ್ಟರು.



ಗೆದ್ದ ಸಂಭ್ರಮದಲ್ಲಿ ಜೊಕೊವಿಚ್ ಎಪಿ/ಪಿಟಿಐ ಚಿತ್ರ

ಯುಕಿ– ಒಲಿವೆಟ್ಟಿ ಜೋಡಿಗೆ ಸೋಲು

ಮೆಲ್ಬರ್ನ್ (ಪಿಟಿಐ): ಭಾರತದ ಯುಕಿ ಭಾಂಬ್ರಿ ಮತ್ತು ಅವರ ಫ್ರೆಂಚ್ ಜೊತೆಗಾರ ಆಲ್ಬನೊ ಒಲಿವೆಟ್ಟಿ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಆತಿಥೇಯ ಆಸ್ಟ್ರೇಲಿಯಾದ ಟ್ರಿಸ್ಟನ್ ಸ್ಕೂಲ್ಕೇಟ್– ಆ್ಯಡಂ ವಾಲ್ಟನ್ ಜೋಡಿ 6–2, 7–6 ರಿಂದ ಇಂಡೊ–ಫ್ರೆಂಚ್ ಜೋಡಿಯನ್ನು ಸೋಲಿಸಿದರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ರೋಹನ್ ಬೋಪಣ್ಣ– ಕೊಲಂಬಿಯಾದ ನಿಕೊಲಸ್ ಬೇರಿನ್‌ಟೋಸ್ ಮಂಗಳವಾರ ಮೊದಲ ಸುತ್ತಿನಲ್ಲಿ ನಿರ್ಗಮಿಸಿದ್ದರು.